
ಲಂಕೇಶ್


ಜೂನ್ 17, 2009 ರೂ. 12/-



ಕಮಲಾ ದಾಸ್




ಆಸನ ಚಿರುಕು




ಸಾಕಿದ ಸರ್ಪ ಬುಸುಗುಡುತ್ತಿದೆ



೨೦ ಕೋಟಿ ಮದುವೆ






ಗೊಬ್ಬರಕ್ಕಾಗಿ ರೈತರು ಬಲಿ?



ಕಾಂಗ್ರೆಸ್ ಮುಖವಾಡಗಳು

ಕಾಂಗ್ರೆಸ್ ಸರ್ಕಾರದ ಮುಖಗಳು ಮತ್ತು ಮುಖವಾಡಗಳು!

ಈ ದೇಶದ ಪ್ರಮುಖ ದಲಿತ ನಾಯಕರಾದ ಜಗಜೀವನ್‌ರಾಮ್‌ರ ಮಗಳಾದ ಮೀರಾ ಕುಮಾರ್‌ರನ್ನು ಕಾಂಗ್ರೆಸ್ ಪಕ್ಷ ಸಂಸತ್ತಿನ ಸಭಾಧ್ಯಕ್ಷೆಯನ್ನಾಗಿ ಮಾಡಿದೆ. ಮೀರಾ ಕುಮಾರ್‌ರವರು ಈ ದೇಶದ ಪ್ರಪ್ರಥಮ ದಲಿತ ಮಹಿಳಾ ಸ್ಪೀಕರ್ ಆಗಲಿದ್ದಾರೆ. ಇದಕ್ಕೂ ಹಿಂದೆ ತೆಲುಗು ದೇಶಂ ಪಕ್ಷದ ಬಾಲಯೋಗಿಯವರು ಈ ದೇಶದ ಪ್ರಪ್ರಥಮ ದಲಿತ ಸ್ಪೀಕರ್ ಆಗಿ ಆಯ್ಕೆ ಆಗಿದ್ದರು. ಮೀರಾಕುಮಾರ್‌ರವರನ್ನು ಆಯ್ಕೆ ಮಾಡುವ ಮೂಲಕ ಕಾಂಗ್ರೆಸ್ ದಲಿತರ ಬಗೆಗಿನ ತನ್ನ ಬದ್ಧತೆಯನ್ನು ಸಾಬೀತುಪಡಿಸಿದೆ ಎಂದು ಕಾಂಗ್ರೆಸ್ಸಿಗರು ಹೇಳುತ್ತಿದ್ದಾರೆ. ಅಬಲರ ಪರ ಯಾರು ಎಂಬ ಪೈಪೋಟಿಯಲ್ಲಿ ತಾನು ಹಿಂದೆ ಬೀಳಬಾರದೆಂಬ ತುರ್ತಿನಲ್ಲಿ ಬಿಜೆಪಿ ಪಕ್ಷ ಉಪಾಧ್ಯಕ್ಷ ಹುದ್ದೆಗೆ ಆದಿವಾಸಿ ಸಮುದಾಯದ ಕರಿಯಾ ಮುಂಡಾರವರನ್ನು ನಿಯೋಜಿಸಿದೆ. ಈ ಇಬ್ಬರನ್ನೂ ಸಂಸತ್ತು ಅವಿರೋಧವಾಗಿ ಆಯ್ಕೆ ಮಾಡಿದೆ. ಹೀಗಾಗಿ 15ನೇ ಲೋಕಸಭೆ ಹೊಸ ಇತಿಹಾಸವನ್ನೇ ಬರೆಯುತ್ತಿದೆ ಎಂದು ಬಣ್ಣಿಸಲಾಗುತ್ತಿದೆ.

ಇದಲ್ಲದೆ ಈ ಬಾರಿ ಕಾಂಗ್ರೆಸ್ 10 ದಲಿತರಿಗೆ ಮಂತ್ರಿಗಿರಿಯನ್ನು ಕೊಟ್ಟಿದೆ. ಅದರಲ್ಲಿ 5 ಜನ ಕ್ಯಾಬಿನೆಟ್ ದರ್ಜೆಯವರು. ಇವೆಲ್ಲವೂ ಕಾಂಗ್ರೆಸ್‌ಗೆ ಈ ದೇಶದ ದೀನದಲಿತರ ಬಗ್ಗೆ ಇರುವ ಬದ್ಧತೆಯನ್ನು ಸೂಚಿಸುತ್ತದೆ ಎಂದು ಕಾಂಗ್ರೆಸ್ ವಕ್ತಾರರು ಹೇಳುತ್ತಿದ್ದರೆ ಗೆದ್ದೆತ್ತಿನ ಬಾಲ ಹಿಡಿದಿರುವ ಮಾಧ್ಯಮಗಳು ಅದನ್ನೇ ಯಥಾವತ್ತಾಗಿ ಪ್ರಕಟಿಸುತ್ತಿವೆ.

ಇದರ ಹಿಂದೆ ಬರಲಿರುವ ವಿಧಾನಸಭಾ ಚುನಾವಣೆಗಳಲ್ಲಿ ಅದರಲ್ಲೂ ಉತ್ತರ ಭಾರತದಲ್ಲಿ ಕಾಂಗ್ರೆಸ್ ತನ್ನಿಂದ ಮಾಯಾವತಿ ಕಸಿದಿರುವ ದಲಿತ ಮತಗಳನ್ನು ಕಸಿಯುವ ಹುನ್ನಾರ ಇದೆ ಎಂದು ವಿರೋಧ ಪಕ್ಷಗಳು ಗುಪ್ತವಾಗಿ ವಿಶ್ಲೇಷಿಸುತ್ತಿವೆ. ಇದರಲ್ಲಿ ಒಂದಷ್ಟು ಹುರುಳೂ ಇದೆ. ಏಕೆಂದರೆ ಮೀರಾ ಕುಮಾರ್ ಕಾಂಗ್ರೆಸ್ಸಿನ ಮೊದಲ ಆಯ್ಕೆಯೇನೂ ಆಗಿರಲಿಲ್ಲ. ಆದ್ದರಿಂದಲೇ ಅವರು ಜಲಸಂಪನ್ಮೂಲ ಖಾತೆಯ ಕ್ಯಾಬಿನೆಟ್ ದರ್ಜೆ ಸಚಿವೆಯಾಗಿ ಪ್ರಮಾಣ ವಚನವನ್ನೂ ಸ್ವೀಕರಿಸಿಯಾಗಿತ್ತು. ಕಾಂಗ್ರೆಸ್ಸಿನ ಮೊದಲ ಆಯ್ಕೆಯಾಗಿದ್ದ ಆಂಧ್ರದ ಸಂಸದ ಕಿಶೋರ್‌ಚಂದ್ರ ದೇವ್ ಅವರ ವಿರುದ್ಧ ಆಂಧ್ರ ಘಟಕದ ಪ್ರಮುಖರೇ ಬಂಡಾಯ ಹೂಡಿದ್ದರಿಂದಲೇ ಅಂತಿಮ ಕ್ಷಣದಲ್ಲಿ ದಲಿತ ಮಹಿಳೆಯ 'ಆಯ್ಕೆ'ಯಾಗಿದ್ದು!



ದಲಿತರಿಗೆ ಹತ್ತು ಮಂತ್ರಿಗಿರಿ ಸಿಕ್ಕಿರುವುದೂ ಸಹ ನಿಜವೇ. ಆದರೆ ಮೇ 22ರಂದು ಪ್ರಮಾಣವಚನ ಸ್ವೀಕರಿಸಿದ ಕಾಂಗ್ರೆಸ್ಸಿನ ಮಂತ್ರಿಗಳಾದ ಮನಮೋಹನ್ ಸಿಂಗ್, ಚಿದಂಬರಂ, ಆನಂದ್ ಶರ್ಮ, ಮುರಳಿ ದೇವ್ರಾ, ಸಿ.ಪಿ. ಜೋಷಿ ಇನ್ನಿತರರುಗಳೇ ಆ ಪಕ್ಷದ ನಿಜವಾದ ಅಂತರಾತ್ಮ. ಅವರಲ್ಲಿ ಶಿಂಧೆಯವರನ್ನು ಹೊರತುಪಡಿಸಿದರೆ ಬೇರೆ ಯಾರೂ ದಲಿತರಿರಲಿಲ್ಲ. ಶಿಂಧೆ, ಖರ್ಗೆ, ಮೀರಾ ಕುಮಾರ್ ಇನ್ನಿತರರು ಹುಟ್ಟಿನಿಂದ ದಲಿತರೇ ಹೊರತು ಇನ್ಯಾವ ಅರ್ಥದಲ್ಲೂ ದಲಿತರಲ್ಲ. ದಲಿತಪರರೂ ಅಲ್ಲ. ಆದರೂ ಅವರ ಸಾಧನೆಯೇನೆಂದರೆ ಕಾಂಗ್ರೆಸ್ಸಿನ ಎಲ್ಲಾ ಜನ ವಿರೋಧಿ ನೀತಿಗಳಿಗೆ ದಲಿತ ಮುಖವನ್ನು ಒದಗಿಸುವುದು. ಜನರ ಆಕ್ರೋಶದಿಂದ ಬಚಾವಾಗಲು ದಲಿತ ಗುರಾಣಿಯನ್ನು ಒದಗಿಸುವುದು. ಅದೇ ಕುತಂತ್ರಗಳೇ ಈ ಬಾರಿಯ ಸಚಿವಸಂಪುಟ ರಚನೆಯ ಕಸರತ್ತಿನಲ್ಲೂ ಎದ್ದುಕಾಣುತ್ತಿದೆ.






ಯುಪಿಎ ಸರ್ಕಾರದಲ್ಲಿ ಈ ಹತ್ತು ದಲಿತರಿಗೆ ಕೊಟ್ಟಿರುವ ಖಾತೆಗಳನ್ನು ಗಮನಿಸಿ. ಕ್ಯಾಬಿನೆಟ್ ದರ್ಜೆಗಳಲ್ಲಿ ಶಿಂಧೆಗೆ ವಿದ್ಯುತ್ ಖಾತೆ, ಕುಮಾರಿ ಶೆಲ್ಜಾಗೆ ಪ್ರವಾಸ, ಖರ್ಗೆಗೆ ಕಾರ್ಮಿಕ, ಮುಕುಲ್ ವಾಸ್ನಿಕ್‌ಗೆ ಸಾಮಾಜಿಕ ಸಬಲೀಕರಣ ಖಾತೆಗಳನ್ನು ನೀಡಲಾಗಿದೆ. ಕೃಷ್ಣ ತೀರ್ಥ್‌ಗೆ ಮಹಿಳಾ ಮತ್ತು ಕಲ್ಯಾಣ ಇಲಾಖೆಯ ಸ್ವತಂತ್ರ ಖಾತೆಯ ಜೊತೆಗೆ ಸ್ಟೇಟ್ ದರ್ಜೆ ಸಚಿವರಾದ ಕೆ.ಎಚ್. ಮುನಿಯಪ್ಪಗೆ ರೈಲ್ವೆ ಇಲಾಖೆ, ಪನಬಾಕ ಲಕ್ಷ್ಮಿಗೆ ಜವಳಿ, ತೃಣಮೂಲದ ಮೋಹನ್ ಜಾತುವಾಗೆ ವಾರ್ತಾ

ಚಾರ್ವಾಕ

▸ ಶಿವಸುಂದರ್

ಮತ್ತು ಪ್ರಸಾರ ಹಾಗೂ ಡಿಎಂಕೆಯ ಎ. ರಾಜಾಗೆ ಐಟಿ ಮತ್ತು ಟೆಲಿಕಾಂ ಖಾತೆಗಳನ್ನು ನೀಡಲಾಗಿದೆ.

ಇವುಗಳಲ್ಲಿ ವಿದ್ಯುತ್ ಮತ್ತು ಐಟಿ ಖಾತೆಯನ್ನು ಹೊರತುಪಡಿಸಿದರೆ ಮಿಕ್ಕೆಲ್ಲಾ ಖಾತೆಗಳೂ ಸರ್ಕಾರದ ಸಾಮಾಜಿಕ ಮುಖವನ್ನು ತೋರ್ಪಡಿಸುವ ಖಾತೆಗಳು ಹಾಗೂ ಸಮಾಜದ ಅತ್ಯಂತ ದುರ್ಬಲ ಮತ್ತು ಶ್ರಮಿಕ ವರ್ಗದ ಜನರ ಬದುಕಿಗೆ ಸಂಬಂಧಪಟ್ಟ ಖಾತೆಗಳು. ಹೀಗಾಗಿಯೇ ಆ ಖಾತೆಗಳಿಗೆ ಜನರ ನೋವನ್ನು ಅರ್ಥಮಾಡಿಕೊಳ್ಳಬಹುದಾದವರನ್ನು ನೇಮಿಸಲಾಗಿದೆ ಎಂದು ಕಾಂಗ್ರೆಸ್ ಹೇಳುತ್ತದೆ. ಮಲ್ಲಿಕಾರ್ಜುನ ಖರ್ಗೆಯವರಿಗೆ ಕಾರ್ಮಿಕ ಖಾತೆಯನ್ನು ವಹಿಸಿದ ನಂತರ ಪ್ರಧಾನಿ ಮನಮೋಹನ್ ಸಿಂಗ್‌ರವರು "ಖರ್ಗೆಯವರೇ ಈ ಖಾತೆಯನ್ನು ನೀವು ಮಾತ್ರ ಸಮರ್ಥವಾಗಿ ನಿಭಾಯಿಸಲು ಸಾಧ್ಯ. ಏಕೆಂದರೆ ನೀವು ದಲಿತರೂ ಆಗಿದ್ದೀರಿ ಮತ್ತು ಕಾರ್ಮಿಕರೂ ಆಗಿದ್ದೀರಿ" ಎಂದರಂತೆ!

ಖರ್ಗೆಯವರನ್ನು ದಲಿತರೆಂದರೆ ಕಂಬಾಲಪಲ್ಲಿಯ ಆತ್ಮಗಳು ಬೆಚ್ಚಿಬೀಳುತ್ತವೆ. ಎಂಎಸ್‌ಕೆ ಮಿಲ್ಲಿನ ಕಾರ್ಮಿಕರು ರೊಚ್ಚಿಗೇಳುತ್ತಾರೆ. ಅದೇನೇ ಇದ್ದರೂ ದಲಿತ ಹಿನ್ನೆಲೆಯುಳ್ಳವರನ್ನೇ ತನ್ನ ಸರ್ಕಾರದ ಸಾಮಾಜಿಕ ಮುಖವನ್ನಾಗಿ ಆಯ್ಕೆ ಮಾಡಿಕೊಳ್ಳಲು ಕಾಂಗ್ರೆಸ್‌ಗೆ ಈ ಬಾರಿ ಬಲವಾದ ಕಾರಣವಿದೆ.

▸▸▸15

No Comments




"ಲೋಕಸಭಾ ಚುನಾವಣೆಯಲ್ಲಿ ಹಣ-ಹೆಂಡ ಹಂಚಿ ಬಿಜೆಪಿ ಗೆಲುವು ಸಾಧಿಸಿದೆ ಎಂದು ಸ್ವತಃ ಸಚಿವ ಈಶ್ವರಪ್ಪ ಬಹಿರಂಗವಾಗಿ ತನಿಖೆಗೆ ಆಗ್ರಹಿಸಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನವರು ನೈತಿಕ ಹೊಣೆಹೊತ್ತು ರಾಜೀನಾಮೆ ನೀಡಬೇಕು."

- ಡಿ.ಕೆ. ಶಿವಕುಮಾರ್

"ಛತ್ತೀಸ್‌ಗಡ ಸರ್ಕಾರವು ನಕಲಿ ಎನ್‌ಕೌಂಟರ್‌ಗಳನ್ನು ನಡೆಸುತ್ತಿದೆ. ಶ್ರೀಮಂತರಿಗಾಗಿ ಬಡ ಆದಿವಾಸಿ ಕುಟುಂಬಗಳ ಜಮೀನು ಕಬಳಿಸುತ್ತಿದೆ."

- ಬಿನಾಯಕ್ ಸೇನ್



"ನಾನು ಯಾರನ್ನೂ ಕರೆದು ಮಾತನಾಡಲಾರೆ. ರಾಜ್ಯ ಬಿಜೆಪಿಯಲ್ಲಿ ಆಗಿರುವ ಬೆಳವಣಿಗೆಯ ಹಿನ್ನೆಲೆಯಲ್ಲಿ ಏನು ಮಾಡಬೇಕೆಂಬುದು ಪಕ್ಷದ ಅಧ್ಯಕ್ಷ ಸದಾನಂದ ಗೌಡರಿಗೆ ಬಿಟ್ಟ ವಿಷಯ."

- ಯಡಿಯೂರಪ್ಪ

"ಮೂರನೇ ರಂಗದ ಪ್ರಯತ್ನವನ್ನು ಜನರು ಒಪ್ಪಿಕೊಳ್ಳಲಿಲ್ಲ. ಅದು ಒಂಥರಾ ಕಟ್ ಅಂಡ್ ಪೇಸ್ಟ್ ಐಕ್ಯರಂಗವಾಗಿತ್ತು. ಆದ್ದರಿಂದಲೇ ಸೋತಕೂಡಲೇ ಒಬ್ಬೊಬ್ಬರು ಒಂದೊಂದು ಕಡೆ ಹಾರಿಹೋದರು."

- ಸೀತಾರಾಂ ಯೆಚೂರಿ

"ಅಭಿಷೇಕ್ ಎಂಬ ಬಾಲಕ ಮಳೆಯ ನೀರಿನಲ್ಲಿ ಕೊಚ್ಚಿಹೋಗಿರುವ ಪ್ರಕರಣ ಬಿಬಿಎಂಪಿ ಅವ್ಯವಸ್ಥೆಯ ಆಗರವಾಗಿದೆ ಎಂಬುದಕ್ಕೆ ಒಂದು ಜ್ವಲಂತ ಉದಾಹರಣೆಯಾಗಿದೆ. ಬಿತ್ತನೆ ಪ್ರಾರಂಭವಾಗುವ ಕಾಲಕ್ಕೆ ಬೀಜ, ರಸಗೊಬ್ಬರ ಪೂರೈಸುವ ಹಾಗೂ ಮಳೆಗಾಲ ಆರಂಭವಾಗುವ ಮೊದಲು ತಗ್ಗು ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸಬೇಕಾದದ್ದು ಸರಕಾರದ ಜವಾಬ್ದಾರಿ."

ವೈ.ಎಸ್.ವಿ. ದತ್ತಾ

"ಮುಖ್ಯಮಂತ್ರಿ ಯಡಿಯೂರಪ್ಪನವರ ಪಾಪದ ಕೂಪ ತುಂಬಿ ಬಂದಿದೆ. ಅವರ ಸರ್ಕಾರ ಪತನವಾಗುವ ಕಾಲ ಸನ್ನಿಹಿತವಾಗಿದೆ."

- ಸಿದ್ಧರಾಮಯ್ಯ

ನಂಬಿದ್ರೆನಂಬಿ ಬಿಟ್ರೆಬಿಡಿ

"ಎಲ್ರೂ ನಗ್ತಾ ಇರಿ ಅಂತಾರೆ. ಜನರು ಅಳ್ತಾ ಇರುವಾಗ ನಾನು ಹೇಗೆ ನಗ್ತಾ ಇರಲಿ."

- ಯಡಿಯೂರಪ್ಪ

"ಪಶ್ಚಿಮ ಬಂಗಾಳದಲ್ಲಿ ನಾವು ಚುನಾವಣೆಯಲ್ಲಿ ಸೋತದ್ದು ರೈತರ ಭೂಮಿಯನ್ನು ವಶಪಡಿಸಿಕೊಂಡಿದ್ದರಿಂದಲೇ! ಅಲ್ಲದೆ ನಾವು ಶೇ.27ರಷ್ಟು ಮುಸ್ಲಿಮರ ಓಟುಗಳನ್ನೂ ಕಳೆದುಕೊಂಡೆವು. ಜನರ ಜೊತೆ ಸಂಪರ್ಕವಿಲ್ಲದ ಮೇಲ್ಮಧ್ಯಮ ವರ್ಗದ ನಾಯಕತ್ವವೇ ಇದಕ್ಕೆಲ್ಲಾ ಕಾರಣ."

- ಅಬ್ದುಲ್ ರೆಜಾಕ್ ಮೊಲ್ಲಾ,
ಸಿಪಿಎಂ ಪಕ್ಷದ ಮಂತ್ರಿ


"ಸರ್ಕಾರ ನಮಗೆ ಸಾಕಷ್ಟು ವೇತನ ನೀಡುತ್ತಿದೆ. ಅದಕ್ಕೆ ತಕ್ಕಂತೆ ಕೆಲಸ ಮಾಡುತ್ತಿದ್ದೇವೆ. ಇಂತಹ ಕಾನೂನುಬಾಹಿರ ಬಾಡೂಟಗಳು ನಮಗೆ ಬೇಡ. ಈಗ ಆಗಿರುವ ಅವಮಾನದಿಂದ ಬೇಸತ್ತು ಒಂದು ದಿನ ಉಪವಾಸ ಇರಲೂ ಸಿದ್ಧ."

- ಚ. ನಾಗರಾಜ್, ಮಹಾನಗರ ಪಾಲಿಕೆ
ನೌಕರ ಸಂಘ'ದ ಖಜಾಂಚಿ

"ಆಸ್ಟ್ರೇಲಿಯಾದಲ್ಲಿರುವ ಭಾರತೀಯರ ಮೇಲಿನ ದಾಳಿಯ ಹಿಂದೆ ಜನಾಂಗೀಯ ದ್ವೇಷವಿಲ್ಲ."

- ಆಸ್ಟ್ರೇಲಿಯಾ ಪೊಲೀಸ್ ಮುಖ್ಯಸ್ಥ

ಅಂಥಾ ಪಕ್ಷದಲ್ಲಿ ಏಕಿದ್ದೀರಿ?



"ಹಿಂದಿನ ಯಾವ ಚುನಾವಣೆಗಳಲ್ಲೂ ಪಕ್ಷದ ವಿರುದ್ಧ ಇಷ್ಟೊಂದು ಆರೋಪಗಳು ಕೇಳಿಬಂದಿರಲಿಲ್ಲ. ಅಭಿವೃದ್ಧಿ ಕಾರ್ಯಗಳಿಗಿಂತ ಹೆಚ್ಚಾಗಿ ಹಣ-ಹೆಂಡದ ಆರೋಪಗಳೇ ಹೆಚ್ಚಾಗಿ ಕೇಳಿಬಂತು. ಆದರೆ ಯಾವ ರೂಪದಲ್ಲಿ ಜಯಗಳಿಸಿದೆ ಎಂಬುದು ಮುಖ್ಯ."

- ಈಶ್ವರಪ್ಪ

ಮಾಡಿದ್ದುಣ್ಣೋ ಮಹರಾಯ!

"ನಾನು ಸೋತಿದ್ದು ಫಿಲಿಬಿಟ್‌ನಲ್ಲಿ ವರುಣ್‌ಗಾಂಧಿ ಮಾಡಿದ ಭಾಷಣದಿಂದ. ನಾನು ಮಾತ್ರ ಅಲ್ಲ. ಇಡೀ ಉತ್ತರಪ್ರದೇಶದಲ್ಲಿ 24ಕ್ಕೂ ಹೆಚ್ಚು ಸೀಟುಗಳನ್ನು ಕಳೆದುಕೊಳ್ಳಲು ಅವರ ಭಾಷಣವೇ ಕಾರಣ."

-ಮುಕ್ತಾರ್ ಅಬ್ಬಾಸ್ ನಖ್ವಿ

ಶೋಭಾಯಮಾನ ಸೋಲು!

"ಪಕ್ಷದ ಸೋಲಿಗೆ ಕಾರಣರಾದ ಮಂತ್ರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದೇ ಆಗಿದ್ದಲ್ಲಿ ಮೊದಲು ಯಡಿಯೂರಪ್ಪನವರು ಶೋಭಾ ಕರಂದ್ಲಾಜೆಯವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅವರ ವ್ಯಾಪ್ತಿಯಲ್ಲಿದ್ದ ಮೈಸೂರಿನಲ್ಲಿ ಹಿಂದೆ ಗೆದ್ದಿದ್ದ ಬಿಜೆಪಿ ಅಭ್ಯರ್ಥಿ ಸೋತಿದ್ದರೆ ಚಾಮರಾಜನಗರದಲ್ಲೂ ಬಿಜೆಪಿ ಅಭ್ಯರ್ಥಿ ಸೋತಿದ್ದಾರೆ. ಹಾಗಿದ್ದರೂ ಯಡಿಯೂರಪ್ಪನವರು ಶೋಭಾ ಮೇಲೆ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು?"


- ಬಿಜೆಪಿ ಕಾರ್ಯಕರ್ತರು

ಯಾರ ಮನೆಗೂ ನಿಮ್ಮನ್ನು ಸೇರಿಸುವುದೂ ಇಲ್ಲ!

"ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಸಾಧಿಸುವುದೇ ನಮ್ಮ ಗುರಿ. ಅದಕ್ಕಾಗಿ ಯಾರ ಮನೆ ಬಾಗಿಲಿಗೂ ನಾನು ಹೋಗಲು ಸಿದ್ಧ."

- ಯಡಿಯೂರಪ್ಪ.


ಅಂದರೆ ಯಡ್ಡಿಯೂ ಮುಖ್ಯವಲ್ಲ ಎಂದೇ ಅಲ್ಲವೇ?



"ಬಿಜೆಪಿಯಲ್ಲಿ ಪಕ್ಷ ಮುಖ್ಯವೇ ಹೊರತು ವ್ಯಕ್ತಿಗಳಲ್ಲ."

- ಅಶೋಕ್, ಸಾರಿಗೆ ಮಂತ್ರಿ

ಹೃದಯ ಗೆಲ್ಲುವುದೋ? ಬಗೆಯುವುದೋ?



"ಭಯೋತ್ಪಾದನೆ ವಿರುದ್ಧ ಹೋರಾಟ ಮುಗಿದಿದೆ. ಈಗೇನಿದ್ದರೂ ತಮಿಳರ ಹೃದಯ ಗೆದ್ದು ಅವರನ್ನು ರಕ್ಷಿಸಬೇಕು."

- ಮಹೀಂದ್ರ ರಾಜಪಕ್ಷೆ

ಚಿಂತಕರ ಚಾವಡಿ

ಜಾಗತಿಕ ಸಂಪನ್ಮೂಲಗಳ ಮ್ಯಾರಾಥಾನ್ ಲೂಟಿ



"ಮೊನ್ನೆ ಬೆಂಗಳೂರಿನ ಮ್ಯಾರಾಥಾನ್ ಓಟದಲ್ಲಿ ಗೆದ್ದದ್ದು ಬಡ ಇಥಿಯೋಪಿಯಾ ದೇಶದ ಓಟಗಾರನೇ ಆದರೂ ನಿಜಕ್ಕೂ ಗೆದ್ದದ್ದು ಅದನ್ನು ಆಯೋಜಿಸಿದ ಪ್ರಾಯೋಜಕರು. ಬೀದಿಗಿಳಿದ ಆ ಇಪ್ಪತ್ತು ಸಾವಿರ ಜನರು ಧರಿಸಿದ್ದ ಶೂಗಳು, ಟಿ ಶರ್ಟ್‌ಗಳು, ಅವರು ಬಳಸುವ ಪೇಯಗಳು, ಶಕ್ತಿವರ್ಧಕ ಪುಡಿಗಳು, ಬೆವರು ಹೀರುವ ದ್ರವ್ಯಗಳು ನಿಜಕ್ಕೂ ಗೆದ್ದವು. ಈ ಮ್ಯಾರಾಥಾನ್ ಮಾತ್ರವಲ್ಲ, ಸಮಾಜದ ಅನುಕೂಲಸ್ಥರ ಎಲ್ಲಾ ಚಟುವಟಿಕೆಗಳಿಗೂ ಈಗ "ಇನ್ನಷ್ಟು ಶೀಘ್ರ" ಎಂಬುದೇ ಮಾನದಂಡ. ಸ್ಖಲನವೊಂದನ್ನು ಹೊರತುಪಡಿಸಿ. ಅದಕ್ಕೆ ಪೂರಕವಾಗಿಯೇ ತಂತ್ರಜ್ಞಾನವನ್ನೂ ಬೆಳೆಸಲಾಗುತ್ತಿದೆ. ಇದರಿಂದಾಗಿ ಮನುಷ್ಯಕುಲ ಅವತರಿಸಿದ ಕೆಲವೇ ಸಮಯದಲ್ಲಿ ಭೂಮಂಡಲ ಬರಿದಾಗುತ್ತಿದೆ. ಭವಿಷ್ಯದ ಪೀಳಿಗೆಯ ವಿರುದ್ಧ ಅಪರಾಧವೆಸಗಲಾಗುತ್ತಿದೆ. ಆದ್ದರಿಂದ ಇಂದು "ಹಿಮ್ಮೊಗ ಮ್ಯಾರಥಾನ್" ನಡೆಯಬೇಕು. ಇತರರಿಗಿಂತ ಕೊಂಚ ನಿಧಾನ, ಕೊಂಚ ಕಡಿಮೆ ಗಳಿಕೆ, ಕೊಂಚ ಕಡಿಮೆ ಕಬಳಿಕೆ, ಕೊಂಚ ಕಡಿಮೆ ಓಡಾಟ, ಕೊಂಚ ಕಡಿಮೆ ಚೆಲ್ಲಾಟ......."

- ನಾಗೇಶ್ ಹೆಗಡೆ

ಅನುಭವಗಳ ರುಚಿ ಅರಸುತ್ತಾ

ನನ್ನ ಪಠಮಾರಿ ಕೈಕಾಲುಗಳನ್ನು ಮುದಿಟ
ಧಾರ್ಮಿಕ ಶವಪೆಟ್ಟಿಗೆಗಳೊಳಗೆ ತವಳಲಾರೆ
ನಾನು ಸಾಯುತ್ತೇನೆ. ನನಗೆ ಗೊತ್ತು
ಆದರೆ ಪ್ರೀತಿಯ ಬಗ್ಗೆ ನಾನು ಬಳಲಿದಾಗ
ಸುಖ, ಸಂತೋಷಗಳ ಬಗ್ಗೆ ನಾನು
ೀಸರಗೊಂಡಾಗ
ಮಾತ್ರ ನಾನು ಸಾಯುತ್ತೇನೆ.
ಆಗ ನನ್ನನ್ನು ಬಿಸಾಡಿ
ಆರಡಿ ಎರಡಡಿ ಆಳದ ಗುಂಡಿಗೆ
ನನ್ನ ಸಮಾಧಿಯ ಮೇಲೆ ಏನನ್ನಾದರೂ
ಬರೆಯುವ ಗೋಜಿಗೆ ಹೋಗಬೇಡಿ.

-ಹೀಗೊಂದು ಕವನ ಬರೆದಿದ್ದ ಕಮಲಾ ಸ್ ಮೊನ್ನೆ ತೀರಿಕೊಂಡಾಗ ಅವರ ದುಕು-ಬರಹದ ಬಗ್ಗೆ ಬಹಳಷ್ಟು ಲೇಖನಗಳು ಕಟಗೊಂಡವು. ಅವುಗಳಲ್ಲಿ ಬಹಳಷ್ಟು ೀಖನಗಳು ಹೇಗೆ ಆಕೆ ತನ್ನ ಮುಚ್ಚುಮರೆ ಇರದ ೋತ್ವದಿಂದಾಗಿ ಮಧ್ಯಮ ವರ್ಗದವರನ್ನು ಬ್ಬೇಳಿಸಿದ್ದರು... ಹೇಗೆ sensation ಅನ್ನು eate ಮಾಡಲೆಂದೇ sensational ಆಗಿ ರೆಯುತ್ತಿದ್ದರು ಎಂತಲೇ ವಿಶ್ಲೇಷಿಸಲಾಗಿತ್ತು. ಕಮಲಾ ದಾಸ್ ಅವರ ಬರಹಗಳಲ್ಲಿ ನಾನು ದಿರುವುದು ಅವರ ಆತ್ಮಕಥನ 'ಮೈ ಸ್ಟೋರಿ' ಾತ್ರ. ಅದೂ ನಾನು ಹೈಸ್ಕೂಲಿನಲ್ಲಿದ್ದಾಗ. ಮೊನ್ನೆ ವರು ತೀರಿಕೊಂಡ ನಂತರ ಅದನ್ನು ಮತ್ತೆ ದಿದೆ. ಆಗ ನನಗೆ ಕಂಡ ಕಮಲಾ ದಾಸ್ ಅನ್ನು ಲ್ಲಿ ಬಿಂಬಿಸುವ ಪುಟ್ಟ ಪ್ರಯತ್ನ ಈ ಟಿಪ್ಪಣಿ.

'ಮೈ ಸ್ಟೋರಿ'ಯಲ್ಲಿ ತನ್ನ ಗಂಡನಲ್ಲದ ಇತರೆ ರುಷರನ್ನು ಪ್ರೀತಿಸಿದ್ದು, ಕಾಮಿಸಿದ್ದು, ಕುಡಿದು ತ್ತಾಗಿದ್ದು, ಸಲಿಂಗಕಾಮಿಯೊಬ್ಬಳೊಂದಿಗೆ ಒಂದು ನುಭವ, ತನ್ನ ಗಂಡನೇ ತನ್ನ ದೇಹದ ಮೇಲೆ ಾಡಿದ ದಾಳಿ.... ಇಂಥವೆಲ್ಲ ಇವೆ. ಆದರೆ ಆಕೆ ವನ್ನೆಲ್ಲ ಬರೆದಿದ್ದೇಕೆ ಎಂಬುದೂ ಅಷ್ಟೇ ತೂಹಲಕರವಾಗಿದೆ.

ಒಮ್ಮೆ ಕಮಲಾರಲ್ಲಿ ಹೃದಯದ ಕಾಯಿಲೆ ಣಿಸಿಕೊಂಡು ಅವರನ್ನು ಆಸ್ಪತ್ರೆಗೆ ಖಲಿಸಲಾಗುತ್ತದೆ. ಆಕೆಯ ಗಂಡ ಬ್ಯಾಂಕ್ ಧಿಕಾರಿಯಾಗಿದ್ದರೂ ಅವರ ಚಿಕಿತ್ಸೆಯ ವೆಚ್ಚವನ್ನು ರಿಸುವುದು ಕಷ್ಟಕರವಾಗಿರುತ್ತದೆ. ಪ್ರವೃತ್ತಿಗಾಗಲೇ ಕವನ ಮತ್ತು ಕಿರುಗತೆಗಳ ಮೂಲಕ ಖ್ಯಾತಿ ಗಳಿಸಿದ್ದ ಕಮಲಾರವರು ತಮ್ಮ ತ್ಮಕಥನವನ್ನು ಬರೆಯಬೇಕೆಂದು ಪತ್ರಿಕೆಯ ಪಾದಕರೊಬ್ಬರು ಒತ್ತಾಯ ಮಾಡುತ್ತಿದ್ದರು. ದೆಡೆ ಯಾವ ಕ್ಷಣದಲ್ಲಾದರೂ ಎಗರಿ ಬಹುದಾದ ಸಾವು, ಇನ್ನೊಂದೆಡೆ ಏರುತ್ತಿದ್ದ ತ್ರೆಯ ಬಿಲ್‌ಗಳು.... ಇವೆರಡರ ನಡುವೆ ಕಿರುವ ಕಮಲಾ ಆ ಸಂಪಾದಕನನ್ನು ಚಿಕೊಂಡು ತಮ್ಮ ಆತ್ಮಕತೆಯನ್ನು ಯುವುದಾಗಿ ಒಪ್ಪಿಕೊಳ್ಳುತ್ತಾರೆ. ಅದಕ್ಕೆಂದು ಮುಂಗಡವಾಗಿಯೇ ಹಣ ನೀಡಿ ಒಪ್ಪಂದ ಡಿಕೊಳ್ಳುತ್ತಾನೆ. ಕಮಲಾರವರು ತ್ರೆಯಿಂದಲೇ ತಮ್ಮ ಆತ್ಮಕಥನವನ್ನು ಯಲಾರಂಭಿಸುತ್ತಾರೆ. ಸಾವು ಸನ್ನಿಹಿತವಾಗಿದೆ ಎನಿಸಿ, ಅದು ತನ್ನನ್ನು ಆಕ್ರಮಿಸುವ ಮುನ್ನ ತನ್ನ ಎಲ್ಲಾ ಗುಟ್ಟುಗಳನ್ನು ಹೊರಗೆ ಹಾಕಿ ಶುದ್ಧವಾದ ಆತ್ಮಸಾಕ್ಷಿಯೊಂದಿಗೆ ಹೊರಡುವ ಪ್ರಯತ್ನವೇ 'ಮೈ ಸ್ಟೋರಿ'ಯಾಗಿ ಪ್ರಕಟಗೊಳ್ಳುತ್ತದೆ.

ಅಂತಿಮವಾಗಿ ಕಮಲಾ ಚೇತರಿಸಿಕೊಳ್ಳುತ್ತಾರೆ. ಆದರೆ ಅವರ ಆತ್ಮಕಥನದಿಂದಾಗಿ ಆಕೆ ಬಹಳಷ್ಟು ಟೀಕೆಗೆ ಗುರಿಯಾಗಬೇಕಾಗುತ್ತದೆ. ಆಕೆಯೇ ಹೇಳಿರುವಂತೆ "ಈ ಪುಸ್ತಕದಿಂದಾಗಿ ನಾನು ದೊಡ್ಡ ದಂಡವನ್ನೇ ತೆರಬೇಕಾಯಿತು. ಆದರೆ ಇದನ್ನು




ಬರೆದಿದ್ದರ ಬಗ್ಗೆ ನನ್ನಲ್ಲಿ ಯಾವ ವಿಷಾದವೂ ಇಲ್ಲ. ನನ್ನ ಎಲ್ಲ ಬರಹಗಳಿಗಿಂತ ನನಗೆ ಹೆಚ್ಚು ಸಂತೋಷ ನೀಡಿದ್ದು ಈ ಪುಸ್ತಕ."

ಕಮಲಾ ಅವರ ಬಾಲ್ಯ ಆರಾಮಾಗಿತ್ತಾದರೂ ಆಕೆಗೆ ತಂದೆ-ತಾಯಿಂದ ಎಂದೂ ಪ್ರೀತಿ ಸಿಗಲಿಲ್ಲ. ಅಷ್ಟೇ ಅಲ್ಲ, ಆಕೆಗೆ 15 ವರ್ಷ ವಯಸ್ಸಾಗಿದ್ದಾಗಲೇ ಆಕೆಗಿಂತ ಬಹಳಷ್ಟು ಹಿರಿಯನಾಗಿದ್ದ ಸಂಬಂಧಿಯೊಬ್ಬನೊಂದಿಗೆ ಆಕೆಯ ಇಚ್ಛೆಗೆ ವಿರುದ್ಧವಾಗಿ ಮದುವೆ ಮಾಡಲಾಯಿತು. "ನನಗೆ ಅರ್ಥವಾಗದ ಕಾರಣಗಳಿಗಾಗಿ ನಮ್ಮ ಸಂಸಾರ ಮುರಿದಿತ್ತು. ಅಮ್ಮ ಮಲಾಬಾರ್‌ನಲ್ಲಿ ವಾಸಿಸುತ್ತಿದ್ದರೆ ಅಪ್ಪ ಕೊಲ್ಕತ್ತಾದಲ್ಲಿದ್ದರು. ಅಪ್ಪನಿಗೆ ನಿವೃತ್ತಿ ಪಡೆದು ಅಮ್ಮನೊಂದಿಗೆ ಮಲಾಬಾರ್‌ನಲ್ಲಿ ವಾಸಿಸುವ ಆಶೆ. ಆದರೆ ನನ್ನ ಅಪ್ಪ ಅಮ್ಮನಿಗಾಗಲಿ, ನನ್ನ ಅಜ್ಜಿಗಾಗಲಿ ನನ್ನ ಜವಾಬ್ದಾರಿಯನ್ನು ಹೊರುವ ಆಶೆ ಇರಲಿಲ್ಲ. ಆದ್ದರಿಂದ ಅವರೆಲ್ಲರೂ ಜೊತೆಗೂಡಿ ತಮ್ಮ ಆಶೀರ್ವಾದಗಳೊಂದಿಗೆ ನನ್ನನ್ನು ಮದುವೆ ಮಾಡಿಬಿಡಲು ನಿರ್ಧರಿಸಿದರು" ಎಂದು ಆಕೆ ನೆನಪಿಸಿಕೊಳ್ಳುತ್ತಾರೆ.

ತಂದೆತಾಯಿಯಿಂದ ಸಿಗದ ಪ್ರೀತಿಯನ್ನು ತನ್ನ ಗಂಡನಿಂದ ಕಮಲಾ ಆಶಿಸುತ್ತಾರೆ. ಆಗಿನ್ನೂ ಚಿಕ್ಕವಳಾಗಿದ್ದ ಕಮಲಾರಿಗೆ ಪಿಸುಮಾತಿನ, ಮೃದು ಸ್ಪರ್ಶದ, ಹೃದಯವನ್ನು ಬೆಚ್ಚಗಿಡುವ ಪ್ರೀತಿಯ ಬಯಕೆ. ಆದರೆ ಗಂಡನಿಂದ ಆಕೆಗೆ ಸಿಕ್ಕಿದ್ದು ಆಕೆಯ ದೇಹದ ಮೇಲೆ ದಾಳಿ ಮಾಡುತ್ತಿದ್ದ ಲೈಂಗಿಕ ಸಂಬಂಧ ಮಾತ್ರ. ಆದರೂ ಬಹಳಷ್ಟು ಭಾರತೀಯರಂತೆ ಕಮಲಾ ಕೂಡ ತನ್ನ ಗಂಡನನ್ನು ಪ್ರೀತಿಸಲಾರಂಭಿಸಿದರು, ಆತನ ಪ್ರೀತಿಗಾಗಿ ಹಂಬಲಿಸಿದರು. ಅದು ಆತನಿಂದ ಬಾರದಿದ್ದಾಗ ಇತರೆ ಪುರುಷರತ್ತ ಆಕರ್ಷಿತರಾದರು. ಆದರೆ ಆ ಆಕರ್ಷಣೆಗಳೆಲ್ಲ ಬರೀ ಮಾತಿನಲ್ಲಿ, ಕವನದಲ್ಲಿ ವ್ಯಕ್ತವಾಗುತ್ತಿತ್ತೇ ಹೊರತು ದೈಹಿಕ ಸಂಬಂಧದಲ್ಲಲ್ಲ. ಆದ್ದರಿಂದ ಆಕೆ ಅದನ್ನು ತನ್ನ ಗಂಡನಿಂದ ಗೌಪ್ಯವಾಗಿಡುತ್ತಿರಲಿಲ್ಲ. ಆಕೆ ಇಂತಹ ಒಂದು ಪ್ರಸಂಗದ ಬಗ್ಗೆ ಬರೆದಿದ್ದಾರೆ. ಆಕೆ 'ಪ್ರೀತಿಸುತ್ತಿದ್ದ' ಪುರುಷನೊಬ್ಬ ಒಮ್ಮೆ ಪತ್ರ ಬರೆಯುತ್ತಾನೆ. ಅದರಲ್ಲಿ "ನಾನು ನಿನ್ನನ್ನು ಎಷ್ಟು ಪ್ರೀತಿಸುತ್ತೇನೆ ಗೊತ್ತಾ? ಆಕಾಶದಲ್ಲಿರುವ ನಕ್ಷತ್ರಗಳಷ್ಟು" ಎಂದು ಹೇಳಿರುತ್ತಾನೆ. ಆ ಪತ್ರವನ್ನು ಆಕಸ್ಮಾತಾಗಿ ಓದುವ ಕಮಲಾ ಅವರ ಗಂಡ "ಅಮ್ಮು, ನೀನು ಬುದ್ಧಿವಂತೆ ಅಂತ ಅಂದುಕೊಂಡಿದ್ದೆ. ಆದರೆ ನೀನು ಇಂತಹ ಬಾಲಿಶ ವ್ಯಕ್ತಿಯನ್ನು ಇಷ್ಟಪಟ್ಟಿದ್ದೀಯಲ್ಲಾ?" ಎಂದು ಟೀಕಿಸುತ್ತಾರೆ. ಆಗ ಆಕೆಗೆ ತನ್ನ ಬಗ್ಗೆಯೇ ಮುಜುಗರವಾಗುತ್ತದೆ.

ತನ್ನ ಮನಸ್ಸಿನಾಳದ ಆಶೆಗಳನ್ನು, ಬದುಕಿನ ಬಿಕ್ಕಟ್ಟುಗಳನ್ನು ಕವನಗಳಲ್ಲಿ ವ್ಯಕ್ತಪಡಿಸುತ್ತಿದ್ದ ಕಮಲಾ ಬರಹಗಾರ್ತಿಯಾಗಿ ರೂಪುಗೊಂಡಿದ್ದು ಅವರ ಸಂಸಾರ ಎದುರಿಸುತ್ತಿದ್ದ ಆರ್ಥಿಕ ಬಿಕ್ಕಟ್ಟಿನಿಂದಾಗಿ. ಆಗ ಪ್ರಕಟಣೆಗೊಂಡ ಕವನಕ್ಕೆ ಹನ್ನೆರಡು ರೂಪಾಯಿಗಳನ್ನು ನೀಡಲಾಗುತ್ತಿತ್ತು. ಆ ಹಣ ಅವರ ಮನೆ ಖರ್ಚಿಗೆ ನೆರವಾಗುತ್ತಿದ್ದರಿಂದ ಅವರ ಗಂಡ- ಆತ ಆ ಕವನಗಳನ್ನು ಓದುತ್ತಿರಲಿಲ್ಲವಾದರೂ- ಅವುಗಳನ್ನು ಬರೆಯಲು ಪ್ರೋತ್ಸಾಹಿಸುತ್ತಿದ್ದರು. ಮೂಲಭೂತವಾಗಿ ಕವಯತ್ರಿಯಾಗಿದ್ದ ಕಮಲಾ ಕೊನೆಕೊನೆಗೆ ಕವನಗಳನ್ನು ಬರೆಯುವುದನ್ನೇ ನಿಲ್ಲಿಸುವುದಕ್ಕೂ ಆಕೆಯ ಗಂಡನೇ ಕಾರಣರಾಗಿದ್ದರು ಎಂಬುದೂ ಆಚ್ಚರಿಯ ಸಂಗತಿ. ಆಕೆ ಸಂದರ್ಶನವೊಂದರಲ್ಲಿ ಹೇಳಿರುವಂತೆ "ಒಮ್ಮೆ ನನ್ನ ಗಂಡ ಕೇಳಿದರು 'ಕವನಗಳಿಂದ ಎಷ್ಟು ಮಹಾ ದುಡ್ಡು ಬರುತ್ತದೆ. ಅದನ್ನು ಬರೆಯುವುದನ್ನು ನಿಲ್ಲಿಸುವುದೇ ಲೇಸು' ಎಂದು. ನನಗೂ ಅದು ಸರಿ ಅನ್ನಿಸಿದ್ದರಿಂದ ಕವನಗಳನ್ನು ಬರೆಯುವುದನ್ನೇ ನಿಲ್ಲಿಸಿದೆ."



'ಮೈ ಸ್ಟೋರಿ'ಯಲ್ಲಿ ಆಕೆ ಬಹಳಷ್ಟು ಪುರುಷರ ಬಗ್ಗೆ ಬರೆದಿದ್ದರೂ ಒಬ್ಬನೊಂದಿಗೆ ಮಾತ್ರ ದೈಹಿಕ ಸಂಬಂಧ ಹೊಂದಿದ್ದರು ಎನಿಸುತ್ತದೆ. ತನ್ನ ಈ 'ಅಕ್ರಮ' ಸಂಬಂಧದ ಬಗ್ಗೆ ಬರೆಯುತ್ತಾ ಆಕೆ ಹೇಳುತ್ತಾರೆ:

"ನಗರದ ತಂದೆಗಳೇ, ಸ್ನೇಹಿತರೆ ಮತ್ತು ನೀತಿವಂತರೆ, ನಾನು ಪಾಪಿಯಾಗಿದ್ದರೆ ನನ್ನ ಪಾಪವನ್ನು ಕ್ಷಮಿಸಬೇಡಿ. ನಾನು ಮುಗ್ಧೆಯಾಗಿದ್ದರೆ ನನ್ನ ಮುಗ್ಧತೆಯನ್ನು ಕ್ಷಮಿಸಬೇಡಿ. ನನ್ನನ್ನು ರಕ್ತಗೆಂಪು ಬೆಂಕಿಯಲ್ಲಿ ಸುಟ್ಟು ಬಿಡಿ. ನನ್ನ



ಕಂಡಹಾಗೆ

■ ಗೌರಿ ಲಂಕೇಶ್

ಹೆಮ್ಮೆಯ ದ್ರಾವಿಡ ಚರ್ಮವನ್ನು, ನನ್ನ ಅಂತರಾಳದಲ್ಲಿರುವ ಕ್ಷೋಭೆಯನ್ನು ಭಸ್ಮ ಮಾಡಿ. ಅಥವಾ ನಿಮ್ಮ ಹಿತ್ತಲಿನಲ್ಲಿ ನನ್ನನ್ನು ಹೂತುಬಿಡಿ, ಮುಂಬೈಯ ಕೆಂಪು ಮಣ್ಣನ್ನು ನನ್ನ ಸಂದುಗಳಲ್ಲಿ ತುಂಬಿ, ನನ್ನ ಒಡಲ ಮೇಲೆ ಸಸಿಗಳನ್ನು ನಾಟಿ ಬಿಡಿ. ನಾನು ಮತ್ತು ಆತ ಭೇಟಿಯಾಗಿದ್ದು ತುಂಬಾ ತಡವಾಗಿ, ನಮ್ಮದೆ ಆದ ಕೂಸು ಕೂಡ ನಮಗೆ ಜನಿಸಲಿಲ್ಲ. ಅವನ ಬಗೆಗಿನ ನನ್ನ ಪ್ರೀತಿ ಸಮುದ್ರದ ಮೇಲಿನ ಬರಹದಂತೆ, ಗಾಳಿ ಹೊತ್ತು ಹೋದ ಹಾಡಿನಂತೆ....."


ತನ್ನ ಬರಹಗಳಿಂದಲೇ ಸಂಪ್ರದಾಯಸ್ಥರ ಕೆಂಗಣ್ಣಿಗೆ ಗುರಿಯಾದ ಕಮಲಾ ಅವರು ಕೆಲ ಕಾಮುಕರ ಕಿರುಕುಳವನ್ನು ಸಹಿಸಬೇಕಾಯಿತು. ಆಕೆ ಬರೆಯುತ್ತಾರೆ "ಪದಗಳಿಂದಲೇ ನಾನು ನನ್ನ ಬದುಕನ್ನು ನಾಶ ಮಾಡಿಕೊಂಡಿದ್ದೆ. ನನ್ನ ಈ ಶುದ್ಧೀಕರಣದ ನೃತ್ಯದಲ್ಲಿ ಪದಗಳನ್ನು ಖಡ್ಗಗಳಂತೆ ಉಪಯೋಗಿಸಿದ್ದರಿಂದ ನನ್ನ ಅರಿವಿಗೆ ಬಾರದೆ ರಕ್ತ ಚೆಲ್ಲಿದ್ದೆ."

ಇನ್ನೊಮ್ಮೆ ತಾನು ಸವೆಸಿದ ಬದುಕಿನ ದಾರಿ ಕುರಿತು: "ನನ್ನ ಪೋಷಕರು ನನ್ನೊಂದಿಗೆ ಸರಿದಾರಿ ಮತ್ತು ತಪ್ಪು ದಾರಿಗಳನ್ನು ಕುರಿತು ಮಾತನಾಡಿ ಸರಿದಾರಿಯನ್ನು ಹಿಡಿಯುವಂತೆ ಹೇಳಿದ್ದರೂ ನಾನು ನನ್ನ ಬದುಕನ್ನು ಹೀಗೇ ಸವೆಸುತ್ತಿದ್ದೆ. ಯಾಕೆಂದರೆ ಬದುಕಿಗೆ ತೆರೆದುಕೊಳ್ಳುವುದೇ ಅರಿವು ಎಂದು ಬಲವಾಗಿ ನಂಬಿರುವವಳು ನಾನು.

"ನನ್ನ ಕೆಲ ಕಮ್ಯುನಿಸ್ಟ್ ಮಿತ್ರರು ನಾನು ಸಾಮಾನ್ಯ ಜನರಿಗೆ ಏನನ್ನು ಮಾಡಿದ್ದೇನೆ? ಸಾಮಾಜಿಕ ಕಾಳಜಿಯಿಂದ ನಾನೇಕೆ ಬರೆಯಲಿಲ್ಲ? ಬಡವರಿಗೆ, ದೀನದಲಿತರಿಗೆ ನಾನೇಕೆ ಬರೆಯಲಿಲ್ಲ ಎಂದೆಲ್ಲ ಪ್ರಶ್ನಿಸುತ್ತಾರೆ. ಆಗ ನಾನು ಮೌನವಾಗಿರುತ್ತೇನೆ."

ಆದರೆ ಬಡವರ ಬಗ್ಗೆ, ಶೋಷಿತರ ಬಗ್ಗೆ

▶▶▶ 13



ನೆನಪಿನಂಗಳಕ್ಕೆ ಜಾರಿದ ಹೋರಾಟದ ಚಿಲುಮೆ

ಎಡ್ವಿನ್ ಕ್ರಾಸ್ತಾ

ತನ್ನ ಸುತ್ತಮುತ್ತಲು ಆಗುತ್ತಿರುವ ಅನ್ಯಾಯಕ್ಕೆ ಕ್ರಾಸ್ತಾ ತನ್ನ ಇಳಿವಯಸ್ಸಿನಲ್ಲಿಯೂ ರೋಷದಿಂದ ಕುದಿಯುತ್ತಿದ್ದರು. ಹಾಗಂತ ರೋಷದಿಂದ ಕುದಿದು ನಾಲ್ಕು ಮಾತನಾಡಿ ಮತ್ತೆ ತಣ್ಣಗಾಗುತ್ತಿದ್ದ ವ್ಯಕ್ತಿಯಾಗಿರಲಿಲ್ಲ ಅವರು. ಎಲ್ಲಿ ಅನ್ಯಾಯವಾಗಿದೆಯೊ ಅಲ್ಲಿಗೆ ಖುದ್ದು ಹೋಗಿ ಸಂತ್ರಸ್ತರನ್ನು ಮಾತನಾಡಿಸಿ ಬರುತ್ತಿದ್ದರು. ಅವರಿಗೆ ಹೋರಾಟ ಮಾಡಲು ಬೆಂಬಲ ನೀಡುತ್ತಿದ್ದರು. ಎಲ್ಲಿಯೂ ನ್ಯಾಯ ಸಿಗದಿದ್ದರೆ ನಿಮಗೆ ಕೋರ್ಟಿನಲ್ಲಿ ನ್ಯಾಯ ಸಿಗುತ್ತದೆ ಎಂದು ಹೇಳುತ್ತಿದ್ದ ಕ್ರಾಸ್ತಾರಿಗೆ ಈ ದೇಶದ ಕಾನೂನು ವ್ಯವಸ್ಥೆಯ ಬಗ್ಗೆ ಅಪಾರವಾದ ನಂಬಿಕೆ ಇತ್ತು.

ಹಮ್‌ನೆ ದೇಖಾ ಹೈ ಕಯಿ ಐಸೆ ಖುದಾವ್ರೊಂಕೊ ಯಹಾಂ,
ಸಾಮ್‌ನೆ ಜಿನ್‌ಕೆ ಸಚ್‌ಮುಚ್ ಕೆ ಖುದಾ ಭಿ ಕುಚ್ ಭಿ ನಹಿ.
(ನಾವು ಇಲ್ಲಿ ಕೆಲವೊಂದು ದೇವರನ್ನು ನೋಡಿದ್ದೇವೆ,
ನಿಜವಾದ ದೇವರೂ ಅವರ ಮುಂದೆ ಏನೂ ಅಲ್ಲ)

ಮೊನ್ನೆ ಸಂಜೆಯ ಹೊತ್ತು ಎಡ್ವಿನ್ ಕ್ರಾಸ್ತಾರ ಮಗ, ಗೆಳೆಯ ವಿನೋದ್ ಕರೆ ಮಾಡಿದ್ದರು. ನನ್ನ ಬದುಕಿನಲ್ಲಿ ಇತ್ತೀಚೆಗೆ ನಡೆದ ಘಟನೆಯೊಂದರಲ್ಲಿ ನನಗಾದ ಅನ್ಯಾಯದ ಬಗ್ಗೆ ನೊಂದು ಆ ಅನ್ಯಾಯವನ್ನು ಸರಿಪಡಿಸಲು ತುಂಬಾ ಕಾಳಜಿ ವಹಿಸಿದ್ದ ಎಡ್ವಿನ್ ಕ್ರಾಸ್ತಾ ಮತ್ತು ಅವರ ಕುಟುಂಬ ನನಗೇನೊ ಶುಭ ಸುದ್ದಿ ತಿಳಿಸಲು ಕರೆ ಮಾಡುತ್ತಿರಬೇಕು ಎಂಬ ಆಸೆಯಿಂದ ಮನೆಯ ಹೊರಗಡೆ ಹೋಗಿ ಕಾಲ್ ರಿಸೀವ್ ಮಾಡಿದೆ. ಆ ಕಡೆಯ ವಿನೋದ್ ಧ್ವನಿಯಲ್ಲಿ ದುಃಖವಿತ್ತು. 'ತಂದೆ ತೀರಿಕೊಂಡರು ಶಶಿಧರ್' ಎಂದು ವಿನೋದ್ ಹೇಳಿದಾಗ ನನಗೆ ನಂಬಲು ಸಾಧ್ಯವಾಗಲಿಲ್ಲ. ತನ್ನ 79ರ ಪ್ರಾಯದಲ್ಲೂ ಹೆಚ್ಚೆಂದರೆ 60-65ರ ಪ್ರಾಯದವರಿರಬಹುದು ಎಂಬಂತೆಯೆ ಲವಲವಿಕೆಯಿಂದ ಓಡಾಡಿಕೊಂಡು ಕೊನೆಯ ಕ್ಷಣದ ತನಕವೂ ಸಮಾಜಕ್ಕೋಸ್ಕರ ಬ್ಯುಸಿಯಾಗಿದ್ದ ಎಡ್ವಿನ್ ಕ್ರಾಸ್ತಾ ಎಂಬ ಮಹಾನ್ ಮಾನವತಾವಾದಿ ಇನ್ನಿಲ್ಲ ಎಂದರೆ ಅದು ನನಗೆ ಮತ್ತು ಕುಂದಾಪುರ ಪರಿಸರದ ನನ್ನಂತಹ ಅನೇಕರಿಗೆ ಮನೆಯ ಯಜಮಾನನೊಬ್ಬನನ್ನು ಕಳೆದುಕೊಂಡತಹ ದುರಂತದ ಅನುಭವ. ಆ ಕ್ಷಣದಿಂದ ಅನಾಥಪ್ರಜ್ಞೆಯೊಂದು ನಮ್ಮನ್ನೆಲ್ಲ ಆವರಿಸಿಕೊಂಡುಬಿಟ್ಟಿದೆ.

ಎಡ್ವಿನ್ ಕ್ರಾಸ್ತಾರವರನ್ನು ನಾನು ಅನೇಕ ವರ್ಷಗಳಿಂದ ಬಲ್ಲೆ. ಆದರೆ ಅವರನ್ನು ಹತ್ತಿರದಿಂದ ಕಂಡಿದ್ದು, ಅವರ ವ್ಯಕ್ತಿತ್ವವನ್ನು ಅರಿತುಕೊಂಡು ಅವರಿಂದ ಪ್ರಭಾವಿತನಾದದ್ದು ಕಳೆದ ಐದಾರು ವರ್ಷಗಳಲ್ಲಿ. ಅದು ಕುಂದಾಪುರ ಪರಿಸರದಲ್ಲಿ ಕೋಮುವಾದ ಉತ್ತುಂಗಕ್ಕೆ ಸಾಗುತ್ತಿದ್ದ ಕಾಲ. ಸೂಜಿ ಗಲಭೆ, ದನ ಸಾಗಾಟದ ಹಲ್ಲೆಗಳು, ದೌರ್ಜನ್ಯ ದಿನೇದಿನೇ ಹೆಚ್ಚಾಗುತ್ತಿದ್ದ ಸಂದರ್ಭದಲ್ಲಿ ಕುಂದಾಪುರದ ಜಾತ್ಯತೀತ ಮನೋಭಾವದ ಅನೇಕ ಯುವಕರು, ಸೌಹಾರ್ದಪ್ರಿಯರು ಕೈಕಟ್ಟಿ ಕುಳಿತುಕೊಳ್ಳುವಂತಾಗಿತ್ತು. ಅದು ಏನಾದರೂ ಮಾಡಲೇಬೇಕೆಂಬ ಅನಿವಾರ್ಯತೆಯ ಕಾಲ. ಅದೇ ಒತ್ತಾಸೆಯಿಂದ ಕುಂದಾಪುರದಲ್ಲಿ ಸೌಹಾರ್ದ ವೇದಿಕೆಯೊಂದನ್ನು ಹುಟ್ಟುಹಾಕಬೇಕೆಂಬ ಉತ್ಸಾಹದಿಂದ ನಾವೆಲ್ಲ ಒಟ್ಟಾದಾಗ ನಮ್ಮ ನಾಯಕರಾಗಿದ್ದವರು ಎಡ್ವಿನ್ ಕ್ರಾಸ್ತಾ. ಆ ದಿನದಿಂದ ಅವರ ಕೊನೆಯ ದಿನಗಳ ತನಕ ಅವರ ಸರಳತೆ, ಶಿಸ್ತು, ಗಾಂಭೀರ್ಯ, ಮಾನವ ಪ್ರೇಮ, ಶುಭ್ರವಾದ ಅವರ ವ್ಯಕ್ತಿತ್ವ, ಅವರು ನಂಬಿದ್ದ ಸಿದ್ಧಾಂತಗಳ ಬಗ್ಗೆ ಅವರಿಗಿದ್ದ ನಿಷ್ಠೆಯನ್ನು ಕಂಡು ನಾವೆಲ್ಲರೂ ಬೆರಗಾಗಿದ್ದೇವೆ.

ಎಡ್ವಿನ್ ಕ್ರಾಸ್ತಾ ಹುಟ್ಟಿದ್ದು ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕನ್ನಡ ಕುದ್ರು ಎಂಬ ದ್ವೀಪ ಪ್ರದೇಶದಲ್ಲಿ. ಆ ಊರಿನ ಸುತ್ತಲೂ ನೀರು. ಎಲ್ಲಿಗೆ ಹೋಗಬೇಕೆಂದರೂ ದೋಣಿಯಲ್ಲಿಯೇ ಹೋಗಬೇಕು. ಕನ್ನಡ ಕುದ್ರುವಿನಿಂದ ಆರಂಭಗೊಂಡ ಅವರ ಬಾಳದೋಣಿಯ ಪಯಣ 79 ವರ್ಷಗಳ ಸುದೀರ್ಘ ಅವಧಿಯಲ್ಲಿ ಹಲವಾರು ಏಳುಬೀಳುಗಳು, ಛಲ, ಸಾಧನೆಗಳ ಮೂಲಕ ಸಾಗಿತ್ತು. ಆದರೆ ಅವರ ಬದುಕಿನ ಪಯಣದ ಒಂದು ವಿಶೇಷತೆ ಎಂದರೆ ಅವರು ಎಂದಿಗೂ ರಾಜಿ ಮಾಡಿಕೊಂಡು 'ಚಲ್ತಾ ಹೈ' ಎಂದು ಬದುಕಿದವರೇ ಅಲ್ಲ. ಆ ದೃಷ್ಟಿಯಲ್ಲಿ ಅವರೊಬ್ಬ ಪರಿಪೂರ್ಣ ಮನುಷ್ಯ, **the complete man.** ಸ್ವಾಭಿಮಾನ ಅವರ ದೊಡ್ಡ ಶಕ್ತಿಯಾಗಿತ್ತು. ತೀರಾ ಸಾಮಾನ್ಯ ಕುಟುಂಬದಲ್ಲಿ ಜನಿಸಿದ್ದ ಎಡ್ವಿನ್ ಉದ್ಯೋಗಕ್ಕಾಗಿ ಮುಂಬೈಗೆ ತೆರಳಿದ್ದರು. ಬಾಕ್ಸಿಂಗ್ ಚಾಂಪಿಯನ್ ಆಗಬೇಕೆಂಬ ಆಸೆ ಹೊಂದಿದ್ದ ಅವರು ಮುಂಬೈಯ ಅನೇಕ ಪೊಲೀಸ್ ಅಧಿಕಾರಿಗಳಿಗೆ ಆ ದಿನಗಳಲ್ಲಿಯೇ ಬಾಕ್ಸಿಂಗ್ ಪಟ್ಟುಗಳನ್ನು ಕಲಿಸಿಕೊಟ್ಟಿದ್ದರಂತೆ. ಮುಂಬೈಯಲ್ಲಿ ಲೋಹಿಯಾರ ಸಮಕಾಲೀನರಾದ ಜಾನ್ ಡಿ ಮೆಲ್ಲೊ ಆಗ ಸೋಷಲಿಸ್ಟರ ಗುರು. ಜಾರ್ಜ್ ಫೆರ್ನಾಂಡಿಸ್ ತರಹದವರು ಅವರ ಶಿಷ್ಯರು. ಆಗ ಅವರ ಗರಡಿಯಲ್ಲಿ ಸೋಷಿಯಲಿಸಂನ ಪಾಠ ಕಲಿತ ಕ್ರಾಸ್ತಾರಿಗೆ ರಾಜಕೀಯದಲ್ಲಿಯೂ ಆಸಕ್ತಿ ಬೆಳೆಯಿತು. ಮುಂಬೈಯಲ್ಲಿರುವಾಗಲೇ ಅವರು ಕಾರ್ಮಿಕರ ಯೂನಿಯನ್‌ಗಳ ಚಟುವಟಿಕೆಯಲ್ಲಿ ತೀರಾ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಅವರು ತಮ್ಮ ಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದ ಸಮತಾವಾದ, ಸೌಹಾರ್ದ ಜೀವನ, ಸಹಬಾಳ್ವೆಯ ಮೂಲ ಬುನಾದಿಯೇ ಅವರ ಮುಂಬೈಯ ಜೀವನ.

ಹೊಟ್ಟೆಪಾಡು ಅವರನ್ನು ದೂರದ ಬಹರೇನ್ ದೇಶಕ್ಕೆ ಕೊಂಡೊಯ್ದಿತು. ಅಲ್ಲಿ ಸುಮಾರು ಎಂಟು ವರ್ಷಗಳ ಕಾಲ ಉದ್ಯೋಗದಲ್ಲಿದ್ದ ಕ್ರಾಸ್ತಾ ಆ ಕಾಲದಲ್ಲಿಯೇ (60ರ ದಶಕ) ಭಾರತದ ಸ್ವಾತಂತ್ರ್ಯ ದಿನ, ಗಣರಾಜ್ಯೋತ್ಸವಗಳನ್ನು ಅದ್ದೂರಿಯಾಗಿ ಆಚರಿಸಿ ಸಿಹಿ ಹಂಚಿ ಸಂಭ್ರಮಿಸುತ್ತಿದ್ದ ದೇಶಪ್ರೇಮಿ. ಯಾವುದೋ ದೇಶದಲ್ಲಿ ತನ್ನವರಲ್ಲದ ಜನಗಳ ದಾಸ್ಯದಲ್ಲಿ, ಅವರ ಕಟ್ಟುಪಾಡುಗಳು, ನಿರ್ಬಂಧಗಳಿಗೆ ಸಲಾಮು ಹೊಡೆದುಕೊಂಡು ಇರುವುದಕ್ಕಿಂತ ತನ್ನ ಊರಿನಲ್ಲಿಯೇ ಏನಾದರೂ ಮಾಡಬೇಕೆಂದು ಪಟ್ಟು ಹಿಡಿದು ಸ್ವದೇಶಕ್ಕೆ ಮರಳಿದ ಕ್ರಾಸ್ತಾ ಮತ್ತೆಂದೂ ತಾನಾಗಲಿ ತನ್ನ ಮಕ್ಕಳನ್ನಾಗಲಿ ಉದ್ಯೋಗಕ್ಕೆಂದು ಪರದೇಶಗಳಿಗೆ ಕಳುಹಿಸಲೇ ಇಲ್ಲ. ಕುಂದಾಪುರಕ್ಕೆ ಮರಳಿದ ಕ್ರಾಸ್ತಾ ಚಿಕ್ಕ ವರ್ಕ್‌ಶಾಪ್ ಒಂದನ್ನು ಆರಂಭಿಸಿದರು. ಬಹಳ ಕಷ್ಟಪಟ್ಟು ಹಗಲಿರುಳೂ ಶ್ರಮವಹಿಸಿ ಅವರು ಕಟ್ಟಿದ ಕ್ರಾಸ್ತಾ ಇಂಜಿನಿಯರಿಂಗ್ ವರ್ಕ್ಸ್ ಎಂಬ ಸಂಸ್ಥೆ ಇಂದು ಕುಂದಾಪುರದಲ್ಲಿ ಮತ್ತು ಮೈಸೂರಿನಲ್ಲಿ ಸೇವೆ, ದಕ್ಷತೆಗೆ ಹೆಸರಾಗಿದೆ. ಮಾತ್ರವಲ್ಲ, ಹಲವಾರು ದುಡಿಯುವ ಕೈಗಳಿಗೆ ಕೆಲಸ ಒದಗಿಸಿದೆ.

ಕೇವಲ ತನ್ನ ಉದ್ಯೋಗ, ವ್ಯವಹಾರ ಸಾಕು ಎಂದು ಕ್ರಾಸ್ತಾ ಸುಮ್ಮನೆ ಕೂರಲಿಲ್ಲ. ಅವರು ಕುಂದಾಪುರದ ಜನಜೀವನದಲ್ಲಿ 70ರ ದಶಕದಿಂದಲೇ ಸಕ್ರಿಯವಾಗಿ ಬೆರೆತವರು. ಆ ದಿನಗಳ ಕಾಂಗ್ರೆಸಿನ ಭ್ರಷ್ಟತೆ, ಸೋಗಲಾಡಿತನವನ್ನು ಕಂಡು ರೋಸಿಹೋಗಿದ್ದ ಅವರು ಪೌರಸಮಿತಿ ಎಂಬ ಪಕ್ಷಾತೀತ ಸಂಘಟನೆಯನ್ನು ಹುಟ್ಟುಹಾಕಿ ಅವಿರತ ಪ್ರಯತ್ನಗಳ ಮೂಲಕ ಕುಂದಾಪುರ ಪುರಸಭೆಯ ಚುಕ್ಕಾಣಿಯನ್ನು ಹಿಡಿದರು. ಅದೊಂದು ಅಭೂತಪೂರ್ವ ಗೆಲುವು. ಕುಂದಾಪುರದ ಜನ ಇಂದಿಗೂ ಆ ಚುನಾವಣೆ, ಕ್ರಾಸ್ತಾರ ಆಡಳಿತ ಶೈಲಿಯನ್ನು ನೆನಪಿಸಿಕೊಂಡು ಗುಣಗಾನ ಮಾಡುವುದಿದೆ. ರಾಜಕೀಯದಲ್ಲಿ ಅವರು ಅಂದಿನಿಂದಲೂ 'ಜರಾ ಹಟ್‌ಕೆ' ಅಂತೀವಲ್ಲ, ಆ ರೀತಿಯಲ್ಲಿಯೇ ಇದ್ದವರು.

ಜನತಾ ಪಕ್ಷದಲ್ಲಿ ಹಲವಾರು ವರ್ಷಗಳ ಕಾಲ ಇದ್ದ ಕ್ರಾಸ್ತಾ ಪಿ.ಜಿ.ಆರ್ ಸಿಂಧ್ಯ, ಸಿದ್ದರಾಮಯ್ಯ ಮುಂತಾದ ಮುಂಚೂಣಿಯ ನಾಯಕರ ಗೌರವಕ್ಕೆ ಪಾತ್ರರಾಗಿದ್ದರು. ವಿಧಾನಸಭಾ ಚುನಾವಣೆಯಲ್ಲಿಯೂ ಸ್ಪರ್ಧಿಸಿದ್ದರು. ಕಳೆದ ಹಲವಾರು ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷಕ್ಕಾಗಿ ದುಡಿದಿದ್ದರು ಕ್ರಾಸ್ತಾ. ತನ್ನ ರಾಜಕೀಯ ಬದುಕಿನಲ್ಲಿಯೂ ಕ್ರಾಸ್ತಾ ಎಂದಿಗೂ ರಾಜಿ ಮಾಡಿಕೊಂಡ ಜಾಯಮಾನದವರಲ್ಲ, ತನಗೆ ಅನಿಸಿದ್ದನ್ನು ನೇರವಾಗಿ ಹೇಳಿ ಅನೇಕರ ಕೆಂಗಣ್ಣಿಗೆ ಅವರು ಬಲಿಯಾಗಿದ್ದರು. ಆದರೆ ಅವರ ನಿಷ್ಠುರತೆಯಿಂದ ಅವರಿದ್ದ ಪಕ್ಷಕ್ಕೆ ಕುಂದಾಪುರ ಪರಿಸರದ ಜನತೆಗಂತೂ ಪ್ರಯೋಜನವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಇತ್ತೀಚಿನ ರಾಜಕೀಯವನ್ನು ಕಂಡು ಅವರು ತೀರಾ ನೊಂದಿದ್ದರು. ಪ್ರತಿ ಬಾರಿಯೂ ಅವರನ್ನು ಭೇಟಿಯಾದಾಗ ಅವರು ತಮ್ಮ ಹಿಂದಿನ ಬದುಕಿನ ಘಟನೆಗಳನ್ನು ಮೆಲುಕುಹಾಕುತ್ತಾ 'ಹಾಗೊಂದು ಕಾಲವಿತ್ತು' ಎಂದು ನಮಗೆಲ್ಲ ನೆನಪಿಸಿ ನಮ್ಮಲ್ಲಿ ಆತ್ಮವಿಶ್ವಾಸ ಮೂಡಿಸುವ ಕೆಲಸ ಮಾಡುತ್ತಿದ್ದರು.

ತನ್ನ ಸುತ್ತಮುತ್ತಲು ಆಗುತ್ತಿರುವ ಅನ್ಯಾಯಕ್ಕೆ ಕ್ರಾಸ್ತಾ ತನ್ನ ಇಳಿವಯಸ್ಸಿನಲ್ಲಿಯೂ ರೋಷದಿಂದ ಕುದಿಯುತ್ತಿದ್ದರು. ಹಾಗಂತ ರೋಷದಿಂದ ಕುದಿದು ನಾಲ್ಕು ಮಾತನಾಡಿ ಮತ್ತೆ ತಣ್ಣಗಾಗುತ್ತಿದ್ದ ವ್ಯಕ್ತಿಯಾಗಿರಲಿಲ್ಲ ಅವರು. ಎಲ್ಲಿ ಅನ್ಯಾಯವಾಗಿದೆಯೊ ಅಲ್ಲಿಗೆ ಖುದ್ದು ಹೋಗಿ ಸಂತ್ರಸ್ತರನ್ನು ಮಾತನಾಡಿಸಿ ಬರುತ್ತಿದ್ದರು. ಅವರಿಗೆ ಹೋರಾಟ ಮಾಡಲು ಬೆಂಬಲ ನೀಡುತ್ತಿದ್ದರು. ಎಲ್ಲಿಯೂ ನ್ಯಾಯ ಸಿಗದಿದ್ದರೆ ನಿಮಗೆ ಕೋರ್ಟಿನಲ್ಲಿ ನ್ಯಾಯ ಸಿಗುತ್ತದೆ ಎಂದು ಹೇಳುತ್ತಿದ್ದ ಕ್ರಾಸ್ತಾರಿಗೆ ಈ ದೇಶದ ಕಾನೂನು ವ್ಯವಸ್ಥೆಯ ಬಗ್ಗೆ ಅಪಾರವಾದ ನಂಬಿಕೆ ಇತ್ತು. ತನ್ನ ಬದುಕಿನ ಕೊನೆಯ ಕೆಲವು ವರ್ಷಗಳಲ್ಲಿ ಅವರು ನೋಡಿದ ಅನೇಕ ಕೋಮುಗಲಭೆಗಳು, ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ, ರಾಜಕೀಯ ವ್ಯವಸ್ಥೆಯ ಅಧಃಪತನ ಅವರಲ್ಲಿ ತುಂಬಾ ನೋವು ಮೂಡಿಸಿತ್ತು. ಅದರ ಬಗ್ಗೆ ಅವರು ಮಾತನಾಡದ ದಿನವೇ ಇರಲಿಲ್ಲ. 'ಇದನ್ನೆಲ್ಲ ತಡೆಯಲಿಕ್ಕೆ ನಾವೇನಾದರೂ ಮಾಡಬೇಕು' ಎಂದು ತನ್ನ ಕೊನೆಯ ದಿನಗಳವರೆಗೂ ಅವರು ಹಂಬಲಿಸಿದ್ದರು. ಇತ್ತೀಚೆಗೆ ನನ್ನೂರಿನಲ್ಲಿಯೆ ಮಸೀದಿಗೆ ನುಗ್ಗಿ ದಾಂಧಲೆ ನಡೆಸಿದ್ದು, ಚರ್ಚ್ ಮತ್ತು ಪಾದ್ರಿಗಳ ಮೇಲಿನ ಹಲ್ಲೆ, ಗೋ ಸಾಗಾಟಗಾರರ ಮೇಲೆ ಭಜರಂಗಿಗಳು ನಡೆಸಿದ್ದ ದೌರ್ಜನ್ಯ, ಕರಾಣಿ ಮತೀನ್ ಎಂಬ ಯುವಕನ ಶಂಕಾಸ್ಪದ ಸಾವು ಮುಂತಾದ ಎಲ್ಲ ಅನ್ಯಾಯಗಳ ಸಂದರ್ಭದಲ್ಲಿಯೂ ಅವರು ಧ್ವನಿ ಎತ್ತಿದವರು. ಹೋರಾಟದ ಮುಂಚೂಣಿಯಲ್ಲಿದ್ದವರು. ಪ್ರತಿಭಟನಾ ಸಭೆಗಳನ್ನು ಆಯೋಜಿಸಿ ನಿರ್ಭೀತರಾಗಿ ಮಾತನಾಡಿ ಅನ್ಯಾಯಕ್ಕೊಳಗಾದವರಿಗೆ ಕಿಂಚಿತ್ ಸ್ಥೈರ್ಯವನ್ನು ತುಂಬಿಸಲು ಪ್ರಯತ್ನಿಸಿದವರು. ಕೊನೆಯ ದಿನಗಳ ತನಕವೂ ಹೋರಾಟ, ಪಂಚಾಯ್ತಿಕೆ, ಸಂಧಾನ ಎಂದು ಓಡಾಡಿಕೊಂಡಿದ್ದರು. ಎಲ್ಲಿಯೇ ಅನ್ಯಾಯವಾದರೂ ಅವರ ಮನೆ ಬಾಗಿಲಿಗೆ ನಾವು ಮತ್ತು ನನ್ನಂತಹ ಅನೇಕರು ಅವರ ಮನೆಯ ಕದವನ್ನೆ ತಟ್ಟುತ್ತಿದ್ದೆವು: ಅವರಿಲ್ಲದೆ ಈಗ ನಮ್ಮದು ಯಜಮಾನನೇ ಇಲ್ಲದ ಪರಿಸ್ಥಿತಿ.

ಆದಿತ್ಯವಾರ ಸಂಜೆ ಎಡ್ವಿನ್ ಕ್ರಾಸ್ತಾ ತೀರಿಕೊಂಡರು. ಅದರ ಹಿಂದಿನ ಶುಕ್ರವಾರವಷ್ಟೆ ನಾನು ಅವರನ್ನು ಭೇಟಿಯಾಗಿದ್ದೆ. ಆ ದಿನವೂ ಅವರು ತಮ್ಮ ಜೀವನದ ಅನೇಕ ವಿಚಾರಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದರು. ಅವರದು ಮಗುವಿನಂತಹ ಮನಸ್ಸು. ಯಾರೇ ಹೋದರು ಅವರು ಅಕ್ಕರೆಯಿಂದ ಮಾತನಾಡಿಸುತ್ತಿದ್ದರು, ಪ್ರೀತಿಸುತ್ತಿದ್ದರು, ಗೌರವಿಸುತ್ತಿದ್ದರು. ಅವರ ಪತ್ನಿ ಲೇನಿ ಕ್ರಾಸ್ತಾ ಕುಂದಾಪುರ ಪುರಸಭೆಯ ಕಳೆದ ಅವಧಿಯ ಉಪಾಧ್ಯಕ್ಷರಾಗಿದ್ದವರು. ಅವರ ನಾಲ್ಕು ಗಂಡು ಮಕ್ಕಳು ಮತ್ತು ಮೂವರು ಹೆಣ್ಣು ಮಕ್ಕಳಿಗೂ ಅವರು ಕಲಿಸಿದ್ದು ಸಮಾನತೆ, ಸಹಬಾಳ್ವೆ ಮತ್ತು ಮಾನವೀಯತೆ. ಅವರ ಮಕ್ಕಳೆಲ್ಲರೂ ಸೌಹಾರ್ದತೆಯ ಕುರಿತು ಕಳಕಳಿ ಉಳ್ಳವರು. 'ಗೌರಿ ಲಂಕೇಶ್' ಪತ್ರಿಕೆಯನ್ನು ಕುಂದಾಪುರದ ಸೆಲೂನ್‌ಗಳಿಗೆ ಮತ್ತು ಸಾರ್ವಜನಿಕರು ಸೇರುವಂತಹ ಸ್ಥಳಗಳಲ್ಲಿ ನಾವು ಉಚಿತವಾಗಿ ಹಂಚೋಣ, ಜನರು ಅದನ್ನು ಓದಿಯಾದರೂ ಚಿಂತನೆ ಬೆಳೆಸಿಕೊಳ್ಳಲಿ' ಎಂದು ಕ್ರಾಸ್ತಾರ ಕುಟುಂಬ ಆಗಾಗ ಹೇಳುತ್ತಿತ್ತು. ಅವರ ವರ್ಕ್‌ಶಾಪಿಗೆ 'ಗೌರಿ ಲಂಕೇಶ್' ಪ್ರತಿಗಳು ಮೂರ್ನಾಲ್ಕು ಬರುತ್ತಿದ್ದವು. ಅಂತಹ 'ಸಮಾನ ಮನಸ್ಕ' ಪ್ರಗತಿಪರ ಕುಟುಂಬ ಇತ್ತೀಚಿನ ದಿನಗಳಲ್ಲಿ ನಾನೆಂದೂ ಕಂಡಿಲ್ಲ. ಕ್ರಾಸ್ತಾರಿಗೆ ತನ್ನ ಮಕ್ಕಳ ನಡೆನುಡಿಯ ಬಗ್ಗೆ ಅವರ ವಿಚಾರವಂತಿಕೆಯ ಬಗ್ಗೆ ಹೆಮ್ಮೆ ಇತ್ತು. ರಾಜಕೀಯದಲ್ಲಿ ಅವರು ಕಳೆದುಕೊಂಡಿದ್ದರೇ ವಿನಃ ಗಳಿಸಿದ್ದು ಏನೂ ಇಲ್ಲ. ಭ್ರಷ್ಟತೆ ಅವರ ಬಳಿ ಸುಳಿಯಲೂ ಇಲ್ಲ. ಅತಿಯಾಸೆ ಅವರಿಗೆ ಇರಲಿಲ್ಲ. ವೃತ್ತಿ ಮತ್ತು ಪ್ರವೃತ್ತಿ ಎರಡರಲ್ಲೂ ಅವರು ಅತಿಗೆ ಹೋಗಲಿಲ್ಲ. ಹಾಗಾಗಿ ಅವರು ಕೊನೆಯತನಕ ತಾನು ನಂಬಿದ್ದ ತತ್ವಗಳಿಗೆ ಅಂಟಿಕೊಂಡು ಬದುಕಿದರು ಮತ್ತು ಪ್ರಾಮಾಣಿಕರಾಗಿಯೇ ಉಳಿದರು. ಅವರು ರಾಜಕೀಯದಲ್ಲಿ ಏರಬೇಕಾದ ಎತ್ತರಕ್ಕೆ ಏರಲು ಅವರಿಗೆ ತೊಡಕಾಗಿದ್ದು ಅವರ ಪ್ರಾಮಾಣಿಕತೆ ಎಂಬುದು ವಿಪರ್ಯಾಸವಾದರೂ ಅದು ಸತ್ಯ.

ಕುಂದಾಪುರ ಪುರಸಭೆಯ ಅಧ್ಯಕ್ಷರಾಗಿದ್ದ ಎಡ್ವಿನ್ ಕ್ರಾಸ್ತಾ ಆ ಅವಧಿಯಲ್ಲಿಯೆ ಮೊತ್ತ ಮೊದಲ ಬಾರಿಗೆ ಕುಂದಾಪುರ ಪರಿಸರದಲ್ಲಿ ಬೀದಿ ದೀಪಗಳನ್ನು ಅಳವಡಿಸಿದ್ದರು. ಕುಂದಾಪುರಕ್ಕೆ ಅವರು ಕೇವಲ ಬೀದಿದೀಪಗಳನ್ನು ಕೊಟ್ಟವರಲ್ಲ, ಅನೇಕರ ಬಾಳಿಗೆ ಬೆಳಕು ಕೊಟ್ಟವರು ಕೂಡ ಹೌದು. ಕುಂದಾಪುರಕ್ಕೆ ಬೌದ್ಧಿಕವಾದ ಕತ್ತಲು, ಕೋಮುವಾದದ ಕತ್ತಲು, ಭ್ರಷ್ಟಾಚಾರದ ಕತ್ತಲು ಮತ್ತು ಅಸಮಾನತೆಯ ಕತ್ತಲು ಕವಿದಿದ್ದಾಗಲೆಲ್ಲ ಬೆಳಕಿನ ದೀಪಗಳನ್ನು ಹೊತ್ತು ತರುತ್ತಿದ್ದ ಶಾಂತಿ, ಪ್ರೀತಿ ಮತ್ತು ಸಹಬಾಳ್ವೆಯ ಹರಿಕಾರ ಎಡ್ವಿನ್ ಕ್ರಾಸ್ತಾ ಈಗ ನೆನಪು ಮಾತ್ರ.

ಎಡ್ವಿನ್ ಕ್ರಾಸ್ತಾ ತೀರಿಕೊಂಡ ದಿನ ಪಾರ್ಥಿವ ಶರೀರ ಕುಂದಾಪುರದ ಅವರ ಮನೆಗೆ ಬರುವಾಗ ರಾತ್ರಿಯಾಗಿತ್ತು. ಅಷ್ಟರಲ್ಲಾಗಲೇ ಅವರ ಮನೆಯ ಸುತ್ತ ಜನ ಸೇರಿದ್ದರು. ಬೀದಿಯ ಆಚೆ ಬದಿಯಲ್ಲಿದ್ದವನೊಬ್ಬ ನನ್ನ ಗೆಳೆಯನೊಬ್ಬನ ಬಳಿ ಕೇಳಿದನಂತೆ, 'ಏನಾಯ್ತು, ಯಾಕಿಷ್ಟು ಜನ ಸೇರಿದ್ದಾರೆ?'. ಎಡ್ವಿನ್ ಕ್ರಾಸ್ತಾ ತೀರಿಕೊಂಡರು ಎಂದು ನನ್ನ ಗೆಳೆಯ ಉತ್ತರಿಸಿದ. ಅದಕ್ಕೆ ಆತ 'ಹೌದಾ! ಹಾಗಾದರೆ ಒಂದು ಹೋರಾಟ ಮುಗಿಯಿತಾ' ಎಂದು ವ್ಯಂಗ್ಯವಾಗಿ ನುಡಿದು ಅಲ್ಲಿಂದ ಜಾಗ ಖಾಲಿ ಮಾಡಿದನಂತೆ. ಹಾಗೆ ಮಾತನಾಡಿದವನು ಎಂತಹ ಮನಸ್ಥಿತಿಯವನು ಎಂದು ನಾನು ಬೇರೆ ಹೇಳಬೇಕಾಗಿಲ್ಲ. ಅಂತಹ ಮನಸ್ಥಿತಿಯ ಎಲ್ಲರಿಗೂ ನಾವು ಹೇಳುವುದು ಇಷ್ಟನ್ನೆ. ಎಡ್ವಿನ್ ಕ್ರಾಸ್ತಾರ ದೇಹ ಮಾತ್ರ ಮುಗಿದಿದೆ. ಅವರ ಹೋರಾಟವಲ್ಲ, ಅವರು ಆಡಿದ ಮಾತು, ಅವರ ನೆನಪು, ಅವರು ನೀಡಿದ ಸ್ಥೈರ್ಯ ಮತ್ತು ಧೈರ್ಯ ನಮ್ಮೊಂದಿಗಿದೆ. ಅವರು ಹೊತ್ತಿಸಿದ ದೀಪಗಳು ಉರಿಯುತ್ತಿವೆ. ಸಮಾನತೆ, ಸಹಬಾಳ್ವೆ ಮತ್ತು ನಮ್ಮ ನೆಮ್ಮದಿಯ ನಾಳೆಗಳಿಗಾಗಿ ಎಡ್ವಿನ್ ಕ್ರಾಸ್ತಾ ಎಂಬ ಮಹಾನ್ ಚೇತನ ಮಾಡಿದ ಹೋರಾಟ ನಾಳೆಯೂ ಮತ್ತು ಅದರಾಚೆಗೂ ಮುಂದುವರಿಯುತ್ತದೆ.

ತೂಂ ಜಹಾಂಜಹಾಂ ಚಲೇಗಾ.. ಮೇರಾ ಸಾಯಾ ಸಾಥ್ ಹೋಗಾ ಎಂದು ಎಡ್ವಿನ್ ಕ್ರಾಸ್ತಾ ಅದೆಲ್ಲಿಂದಲೋ ಹೇಳಿದಂತೆ ಈಗಲೂ ಭಾಸವಾಗುತ್ತಿದೆ.

● ಶಶಿಧರ ಹೆಮ್ಮಾಡಿ

ಮದುವೆಯ ಅದ್ದೂರಿತನ.....



ರೆಡ್ಡಿಗಳ ಧನಮದ

ಸುರೇಶ್ ಬಾಬು ಮದುವೆಗೆ 20 ಕೋಟಿ ಖರ್ಚು



ಸುರೇಶ್‌ಬಾಬು

ಕಂಪ್ಲಿಯ ಬಿಜೆಪಿ ಶಾಸಕ ಸುರೇಶ್ ಬಾಬು ಕಳೆದ ಗುರುವಾರ ಮದುವೆಯಾದ. ಬಳ್ಳಾರಿಯ ರೆಡ್ಡಿ ಬ್ರದರ್ಸ್ ಸೇವಕ ಶ್ರೀರಾಮುಲುನ ಅಳಿಯನಾದ ಈಗಿನ್ನೂ ಇಪ್ಪತ್ತೇಳು ವರ್ಷದವನಾದ ಸುರೇಶ್ ಬಾಬು ತನ್ನಿಡೀ ಜೀವನದಲ್ಲಿ ಒಂದು ದಿನವೂ ಮೈಬಗ್ಗಿಸಿ ದುಡಿದವನಲ್ಲ. ಆದರೂ ಅವನ ಮದುವೆಗೆ ಖರ್ಚಾದ ಹಣ 20 ಕೋಟಿ ರೂಪಾಯಿಗಳು!

ಕರ್ನಾಟಕದ ಅತೀ ಹಿಂದುಳಿದ ಜಿಲ್ಲೆ ಬಳ್ಳಾರಿ. ಅಷ್ಟೇ ಅಲ್ಲ, ಅತೀ ಹೆಚ್ಚು ಅನಕ್ಷರಸ್ಥರಿರುವ, ಬಡವರಿರುವ, ಬಾಲಕಾರ್ಮಿಕರಿರುವ ಬಳ್ಳಾರಿಯಲ್ಲೇ ಈ ರೆಡ್ಡಿಗಳು ಯಾವುದೇ ನಾಚಿಕೆ, ಮಾನಮರ್ಯಾದೆಗಳಿರದವರಂತೆ ಭಾರಿ ಅದ್ದೂರಿಯಾಗಿ ತಮ್ಮ ಬಾಲ ಸೇವಕ ಸುರೇಶ್‌ನ ಮದುವೆ ಮಾಡಿ ಮೀಸೆ ತಿರುವಿಕೊಂಡಿದ್ದಾರೆ. ರೆಡ್ಡಿಗಳು ಈ ಮದುವೆಯನ್ನೇ ಒಂದು ನೆಪ ಮಾಡಿಕೊಂಡು ತಮ್ಮ ದುಡ್ಡಿನ ಅಹಂ ಪ್ರದರ್ಶನ ಮಾಡಿದ್ದಲ್ಲದೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಕಡಿಮೆ ಲೀಡ್ ಬಂದು ಜನ ತಿರಸ್ಕರಿಸಿದ್ದನ್ನು ಪ್ಯಾಚ್‌ಅಪ್ ಮಾಡಲು ಹಾಗೂ ರಾಜ್ಯ ರಾಜಕೀಯದಲ್ಲಿ ತಮ್ಮ ಕಿಮ್ಮತ್ತು ಕಡಿಮೆಯಾಗಿರುವುದನ್ನು ರಿಪೇರಿ ಮಾಡಿಕೊಳ್ಳಲೂ ಬಳಸಿಕೊಂಡರು.

ನಿರ್ಲಜ್ಜರ ಶ್ರೀಮಂತಿಕೆ ಪ್ರದರ್ಶನ

ಈ ಸುರೇಶ್‌ನ ಮದುವೆಯಲ್ಲಿ ರೆಡ್ಡಿಗಳು ಯಾವ ಪರಿ ಹಣದ ಮದ ತೋರಿಸಿದರೆಂದು ಹೇಳಲು ಒಂದಲ್ಲ, ಎರಡಲ್ಲ ನೂರಾರು ಉದಾಹರಣೆಗಳಿವೆ. ನೀವು ಏರ್ ಕಂಡೀಷನ್ ಸೌಲಭ್ಯವನ್ನು ಎಲ್ಲಾದರೂ ನೋಡಿರುತ್ತೀರಿ. ಒಂದು ರೂಮಿಗೋ ಇಲ್ಲಾ ಹೆಚ್ಚೆಂದರೆ ಒಂದಿಡೀ ಕಟ್ಟಡಕ್ಕೇ ಏಸಿ ವ್ಯವಸ್ಥೆ ಕೆಲವೆಡೆ ಇರುತ್ತದೆ. ಆದರೆ ಬಡವರ ಸೇವಕರಾದ ರೆಡ್ಡಿಗಳು ಇನ್ನೂ ಹತ್ತು ಹೆಜ್ಜೆ ಮುಂದೆಹೋಗಿದ್ದಾರೆ. ಸುರೇಶ್‌ನ ಮದುವೆಗೆಂದು ಬಳ್ಳಾರಿಯ ಕಂಟೋನ್‌ಮೆಂಟ್ ಏರಿಯಾದ ಟಿ.ಬಿ. ಸ್ಯಾನಿಟೋರಿಯಂ ಬಳಿ 30 ಎಕರೆ ಪ್ರದೇಶದಲ್ಲಿ ವಿಶಾಲ ಶಾಮಿಯಾನ ಹಾಕಲಾಗಿತ್ತು.

ರೆಡ್ಡಿಗಳು ಈ ಮುವತ್ತು ಎಕರೆ ಪೂರ್ತಿ ಏಸಿ ವ್ಯವಸ್ಥೆ ಮಾಡಿಸಿದ್ದರೆಂದರೆ ನಂಬುತ್ತೀರಾ?

ಇದಕ್ಕೆ ಬಳಸಿದ್ದು ಬರೋಬ್ಬರಿ 500 ಏಸಿಗಳು!!

ಈ ಏಸಿ ವ್ಯವಸ್ಥೆ ಇದ್ದದ್ದು ಬರೀ ಶಾಮೀಯಾನದ ಒಳಗಡೆ ಮಾತ್ರವಲ್ಲ, ಏಸಿ ಕಾರಿನಲ್ಲಿ ಬಂದು ಇಳಿಯುವ ಜಾಗದಲ್ಲೂ ಈ ತಂಡಿ ಗಾಳಿ ವ್ಯವಸ್ಥೆಯನ್ನು ಮಾಡಲಾಗಿತ್ತು!!

ಮುಂಗಾರು ಮಳೆ ಶುರುವಾಗಿದ್ದರೂ ಬಳ್ಳಾರಿಯಲ್ಲಿ ಈಗಲೂ 38 ರಿಂದ 40 ಡಿಗ್ರಿವರೆಗೆ ಟೆಂಪರೇಚರ್ ಇದೆ. ಹಾಗಾಗಿ ಮದುವೆಗೆ ಬರುವ ಪುಢಾರಿಗಳಿಗೆ, ಭ್ರಷ್ಟ ಅಧಿಕಾರಿಗಳಿಗೆ, ತಲೆಹಿಡುಕರು, ಖದೀಮರುಗಳಿಗೆ ಸೆಖೆಯಾಗಬಾರದೆಂದು ಈ ವ್ಯವಸ್ಥೆಯಾಗಿತ್ತು.

ಪಾಪ, ರೆಡ್ಡಿಗಳಿಗೆ ಓಟು ಕೊಟ್ಟು ಗೆಲ್ಲಿಸಿದ ಬಳ್ಳಾರಿಯ ಜನ ಉರಿಬಿಸಿಲಲ್ಲೇ ಗೇಟಿನ ಆಚೆ ನಿಂತು ಇದನ್ನು ನೋಡಿ ಬೆರಗಾದರು. ಅಷ್ಟೇ ಅಲ್ಲ ಹೈದರಾಬಾದ್, ಬೆಂಗಳೂರುಗಳಿಂದ ಗಣ್ಯ ಅತಿಥಿಗಳನ್ನು ಕರೆತರಲು ರೆಡ್ಡಿಗಳು ನಾಲ್ಕು ಹೆಲಿಕಾಪ್ಟರ್‌ಗಳನ್ನು ಉಪಯೋಗಿಸಿದರು. ಕಳೆದ ಬುಧವಾರ-ಗುರುವಾರ ಈ ಹೆಲಿಕಾಪ್ಟರ್‌ಗಳ ಹಾರಾಟ ರಸ್ತೆ ಮೇಲಿನ ಗಣಿ ಲಾರಿಗಳಿಗಿಂತ ಹೆಚ್ಚಾಗಿಯೇ ನಡೆಯಿತು. ಬಿಸಿಲಲ್ಲಿ ನಿಂತು ಬಸ್ಸಿಗೆ ಕಾಯುತ್ತಿದ್ದ ಜನ ತಮ್ಮ ಧಣಿಗಳ ಹೆಲಿಕಾಪ್ಟರ್ ದರ್ಬಾರನ್ನು ನೋಡಿ ಏನೆಂದುಕೊಂಡರೋ ಏನೊ?

ಹೈದರಾಬಾದ್, ಬೆಂಗಳೂರೆಂದು ಹತ್ತಾರು ಸಾರಿ ಹಾರಾಡಿದ ಈ ಹೆಲಿಕಾಪ್ಟರ್‌ಗಳೇ ಹಲವು ಕೋಟಿ ರೂಪಾಯಿ ತಿಂದು ಹಾಕಿದವಂತೆ.

ಇನ್ನು ಮದುವೆಗೆ ಬಂದಿದ್ದ ಹತ್ತು ಸಾವಿರ ಜನರಿಗೆ ಅಡುಗೆ ಮಾಡಲು ಕರೆಸಿದ್ದ ಅಡುಗೆ ಭಟ್ಟರ ಸಂಖ್ಯೆಯೇ ಇನ್ನೂರು ದಾಟಿತ್ತು. ಇವರ ಸಾಗಾಟಕ್ಕೆ ಹತ್ತಾರು ಕಾರು, ಬಸ್‌ಗಳಿದ್ದವು. ವಿಪರ್ಯಾಸ ಏನು ಗೊತ್ತಾ?

ಮದುವೆಗೆ ಬಂದಿದ್ದ 10 ಸಾವಿರ ಜನರಲ್ಲಿ ಒಬ್ಬರೂ ಬಳ್ಳಾರಿಯ ಸಾಮಾನ್ಯ ಜನರಿರಲಿಲ್ಲ. ಈ ಸುರೇಶ್ ಹಾಲಿ ಕಂಪ್ಲಿಯ ಶಾಸಕನಾದ್ದರಿಂದ ಅಲ್ಲಿನ ಕೆಲ ಪ್ರಮುಖರನ್ನು ಒಳಬಿಟ್ಟುಕೊಂಡಿದ್ದ.



ಸಾಯಿಕುಮಾರ್

ನಟ ಸಾಯಿಕುಮಾರ ಕೂಲಿ ಮಾಡಿದ

ಸ್ವಾಭಿಮಾನ ಕಳೆದುಕೊಂಡ ಜನ ಹಣಕ್ಕಾಗಿ, ಕಂಡವರ ಚಪ್ಪಲಿ ತಲೆಮೇಲಿಟ್ಟುಕೊಳ್ಳಲೂ ನೋ ಎನ್ನುವುದಿಲ್ಲ ಎನ್ನಲು ನಟ ಸಾಯಿಕುಮಾರನೇ ಸಾಕ್ಷಿ.

ಸುರೇಶ್‌ನ ಮದುವೆಯ ಆಂಕರ್ ಆಗಿದ್ದ ಸಾಯಿಕುಮಾರ್ ಇಡೀ ಮದುವೆ ಹಾಲ್‌ನ ಅಲಂಕಾರ, ಬೇರೆ ಏರ್ಪಾಡುಗಳನ್ನೆಲ್ಲಾ ನೋಡಿಕೊಂಡ. ತೆಲುಗು ಸಿನಿಮಾ ಸೆಟ್ ಥರ ಇದ್ದ ವೇದಿಕೆಯಲ್ಲಿ ನಿಂತು ರೆಡ್ಡಿಗಳ ಎಂಜಲು ಕಾಸಿಗಾಗಿ ಗಂಟಲು ಹರಿದುಕೊಂಡ ಸಾಯಿ ಸ್ಥಿತಿ ಅಸಹ್ಯಕರವಾಗಿತ್ತು. ಡೈಲಾಗ್ ಕಿಂಗ್ ಬಿರುದಿನ ಈ ಕೂಲಿ ನಟನ ಜೊತೆಗೆ ತೆಲುಗಿನ ಅರುಂಧತಿ ಸಿನಿಮಾದ ಇಡೀ ಟೀಂ ಅಲ್ಲಿತ್ತು.

ಈ ಮದುವೆಗಾಗಿಯೇ ಬಳ್ಳಾರಿಯ ಕೆಲ ರಸ್ತೆಗಳಿಗೆ ಹೊಸ ಟಾರು ಹಾಕಿಸಲಾಗಿತ್ತು... ಸರ್ಕಾರಿ ಖರ್ಚಿನಲ್ಲಿ!

ಶಾಮಿಯಾನ ಹಾಕಲು, ಏಸಿ ಅಳವಡಿಸಲು ನೂರಾರು ಜನ ಹತ್ತು ದಿನ ದುಡಿದಿದ್ದರು.


ರೆಡ್ಡಿಗಳ ದೌಲತ್ತಿನ ಅಸಹ್ಯ ಪ್ರದರ್ಶನ ಹೀಗೆ ನಡೆಯುತ್ತಿದ್ದಾಗಲೇ ಮೊನ್ನೆ ಬಳ್ಳಾರಿ ಜಿಲ್ಲಾಧಿಕಾರಿ ಶಿವಪ್ಪ ಒಂದು ಮೀಟಿಂಗ್ ಮಾಡಿ 248 ಹಳ್ಳಿಗಳಲ್ಲಿ ಈ ಬೇಸಿಗೆಯಲ್ಲಿ ಕುಡಿಯಲು ನೀರಿಲ್ಲದೆ ಕಷ್ಟ ಎದುರಾಗಿದೆ ಎಂದಿದ್ದಾರೆ. 2008 ರಿಂದೀಚೆಗೆ ಬಳ್ಳಾರಿ ಜಿಲ್ಲೆಯೊಂದರಲ್ಲೇ ಹತ್ತು ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕರ್ನಾಟಕದ 29 ಜಿಲ್ಲೆಗಳ ಪೈಕಿ ಅಭಿವೃದ್ಧಿ, ಸಾಕ್ಷರತೆ ಮುಂತಾದ ಮಾನದಂಡದಡಿ ಬಳ್ಳಾರಿಯ ಸ್ಥಾನ 22 ನೇಯದು. ಹತ್ತಿಪ್ಪತ್ತು ವರ್ಷಗಳ ಹಿಂದೆ ಕೇರಾಫ್ ಫುಟ್‌ಪಾತ್ ಆಗಿದ್ದ ರೆಡ್ಡಿ ಬ್ರದರ್ಸ್ ಈಗ ಸಂಪತ್ತಿನ ಗುಡ್ಡೆ ಹಾಕಿಕೊಂಡಿದ್ದಾರೆ. ಜೈಲಿನಲ್ಲಿರಬೇಕಾದವರನ್ನು ಜನ ತಮ್ಮ ನಾಯಕರನ್ನಾಗಿ ಆರಿಸಿಕೊಂಡ ತಪ್ಪಿಗೆ ಈ ನಾಯಕರು ಜನರ ಮುಖಕ್ಕೆ ರಾಚುವಂತೆ ತಮ್ಮ ಸಂಪತ್ತಿನ ಅಸಹ್ಯ ಪ್ರದರ್ಶನ ಮಾಡುತ್ತಿದ್ದಾರೆ. ಬಾಲಕ ಸುರೇಶ್ ಬಾಬುನ ಮದುವೆಯ ಇನ್ನೊಂದು ವಿಚಿತ್ರ ವಿಚಾರ



ಮದುವೆಯ ಮಂಟಪದ ಒಳನೋಟ



ಸುರೇಶ್ ಮದುವೆಯಲ್ಲಿ ಯಡಿ-ಶೋಭಾ



ಹೆಲಿಕಾಪ್ಟರ್‌ನಲ್ಲಿ ಬಂದ ಅತಿಥಿಗಳು

ಮದುವೆ ಹೆಣ್ಣಿನದ್ದು!

ಎಸ್. ದೀಪಾ ಹೆಸರಿನ ಈಕೆ ಮಿಡಲ್ ಕ್ಲಾಸ್ ರೇಂಜಿನ ಕುಟುಂಬದ ಹುಡುಗಿ.

ಬೇರೆಲ್ಲಾ ವಿಚಾರದಲ್ಲೂ ತಮ್ಮ ಪ್ರತಿಷ್ಠೆ, ತಾಕತ್ತು, ಅಂತಸ್ತು, ಪ್ರದರ್ಶಿಸಲು ಹಾತೊರೆಯುವ ಈ ಗುಂಪಿನ ಜನ ಮದುವೆಯಾಗುವಾಗ ಮಾತ್ರ ಹುಡುಗಿ ಕೆಳ ಅಂತಸ್ತಿನವಳಾಗಿರಲಿ ಅನ್ನುತ್ತಾರೇಕೊ?

● ಈಶ

ಸಿದ್ದುಗೆ ಕೊಕ್ ಕೊಡಲು ಪರಮೇಶ್ವರ್, ಜಯಚಂದ್ರ ಸಂಚು

ಕೆಟ್ಟ ಮೇಲೆ ಬುದ್ಧಿ ಕಲಿಯುತ್ತಾರೆಂಬ ಮಾತಿದೆ. ಆದರೆ ರಾಜ್ಯ ಕಾಂಗ್ರೆಸ್ ನಾಯಕರಿಗೆ ಸೋತ ಮೇಲೂ ಬುದ್ಧಿ ಬಂದಂತೆ ಕಾಣುತ್ತಿಲ್ಲ. ಹೀಗಾಗಿ ಕಾಲೆಳೆಯುವ ರಾಜಕೀಯ ಮುಂದುವರೆಸಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯವಾಗಿ ಸೋಲಲು ಪಕ್ಷದ ಮುಂಚುಣಿಯಲ್ಲಿರುವ ನಾಯಕರೇ ಕಾರಣ ಎಂಬುದರಲ್ಲಿ ಅನುಮಾನವೇ ಇಲ್ಲ. ಈ ಬಾರಿ ಮೇಲ್ನೋಟಕ್ಕೆ ಒಗ್ಗಟ್ಟಿನಿಂದ ಇದ್ದವರಂತೆ ತೋರಿಸಿಕೊಂಡರೂ ಅಂತರಾಳದಲ್ಲಿ ಯಾರು ಗೆದ್ದರೆ ಯಾರಿಗೆ ಲಾಭವಾಗಲಿದೆ, ಯಾರನ್ನು ಸೋಲಿಸಿದರೆ ಏನಾಗಲಿದೆ ಎಂಬ ಕುತಂತ್ರ ನಡೆಸುವುದರಲ್ಲಿ ಯಾರೇನೂ ಹಿಂದೆ ಬಿದ್ದಿರಲಿಲ್ಲ.

ಕೇಂದ್ರದಲ್ಲಿ ಯುಪಿಎ ಮತ್ತೆ ಅಧಿಕಾರಕ್ಕೆ ಬಂದಿರುವುದರಿಂದ ರಾಜ್ಯ ನಾಯಕರು ಹೈಕಮಾಂಡ್‌ನ ಬಿಗುಣ್ಣಿನಿಂದ ಸದ್ಯ ತಪ್ಪಿಸಿಕೊಂಡಿದ್ದಾರೆ. ಈ ಹಿಂದೆ ನೆಲೆ ಕಳೆದುಕೊಂಡಿದ್ದ ರಾಜ್ಯಗಳಲ್ಲಿಯೇ ಪಕ್ಷ ಮತ್ತೆ ಚಿಗುರುತ್ತಿರುವಾಗ, ಸಾಕಷ್ಟು ಅವಕಾಶಗಳಿದ್ದ ಕರ್ನಾಟಕದಲ್ಲಿ ಪಕ್ಷವೇಕೆ ಸೋತಿತು ಎಂದು ಕಾರಣ ಹುಡುಕುವ, ತಪ್ಪನ್ನು ತಿದ್ದಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ರಾಜ್ಯ ನಾಯಕರು ಈಗಲಾದರೂ ಮಾಡಬೇಕಿತ್ತು. ಆದರೆ ನೆಪಮಾತ್ರಕ್ಕೆ ಇದಕ್ಕಾಗಿ ಸಮಿತಿಯೊಂದನ್ನು ರಚಿಸಿ, ತಾವು ಕಾಲೆಳೆಯುವ ರಾಜಕೀಯ ಮುಂದುವರೆಸಿದ್ದಾರೆ.

ಎಲ್ಲರಿಗೂ ಅಧಿಕಾರ ಬೇಕು!

ಅಗ್ರಪಂಕ್ತಿಯಲ್ಲಿರುವ ಕೆಲ ಕಾಂಗ್ರೆಸ್ ನಾಯಕರಿಗೆ ಅಧಿಕಾರ ಮಾತ್ರ ತಮಗೆ ಬೇಕು. ಆದರೆ ಪಕ್ಷ ಸಂಘಟಿಸುವ ಜವಾಬ್ದಾರಿಯನ್ನೆಲ್ಲ, ಕೆಳ ಹಂತದ ನಾಯಕರು ಮತ್ತು ಕಾರ್ಯಕರ್ತರು ಹೊತ್ತುಕೊಳ್ಳಬೇಕು. ಹೀಗಾಗಿ ಚುನಾವಣೆ ಬಂದಾಗ ಒಂದಿಷ್ಟು ದುಡ್ಡು ಹಿಡಿದುಕೊಂಡು ಹೋಗಿ, ದೊಡ್ಡ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರೆ ತಮ್ಮ ಪಕ್ಷ ಕಟ್ಟುವ ಕೆಲಸ ಮುಗಿದಂತೆ ಎಂದೇ ಅವರೆಲ್ಲ ಭಾವಿಸುತ್ತಾರೆ. ಬದಲಾಗಿ ಬಣ್ಣಬಣ್ಣದ ಮಾತುಗಳನ್ನಾಡುತ್ತಾ ಸೋನಿಯಾ ಮತ್ತು ರಾಹುಲ್ ಜಪ ಮಾಡಿಕೊಂಡು ರಾಜಕಾರಣ ಮಾಡುತ್ತಾರೆ.

ಅಷ್ಟು ಬಿಟ್ಟರೆ, ಅಕಸ್ಮಾತ್ ಪಕ್ಷ ಗೆದ್ದರೆ ತಾವು ಅಧಿಕಾರ ಹಿಡಿಯಲು ಏನು ಮಾಡಬೇಕು, ಯಾರ ಕಾಲ ಎಳೆಯಬೇಕು, ಯಾರನ್ನು ಬಗ್ಗುಬಡಿಯಲು ಯಾವ ವಾದ ಮಂಡಿಸಬೇಕು ಎಂದೆಲ್ಲ ಲೆಕ್ಕ ಹಾಕುವುದೇ ಈ ನಾಯಕರ ಪ್ರಮುಖ ಕೆಲಸ. ಇವರ ಇಂತಹ ಧೋರಣೆಯಿಂದಾಗಿ ಪಕ್ಷ ದಿನದಿಂದ ದಿನಕ್ಕೆ ಜನರಿಂದ ದೂರವಾಗುತ್ತಿದೆ, ನೂರಾರು ಸಮಸ್ಯೆಗಳನ್ನು ಹೊತ್ತಿರುವ ಮತದಾರರು, ಪಕ್ಷದ ಕಾರ್ಯಕರ್ತರು ತಮ್ಮ ಬಗ್ಗೆ ಅಸಹ್ಯ ಪಡುತ್ತಿದ್ದಾರೆ ಎಂಬ ಅರಿವು ಕೂಡ ಇವರೆಲ್ಲರಿಗೆ ಇದ್ದಂತಿಲ್ಲ.



ಈಗ ಪಕ್ಷದ ಪ್ರಮುಖ ನಾಯಕರು ಏನು ಮಾಡುತ್ತಿದ್ದಾರೆ ಗೊತ್ತೇ? ಮಲ್ಲಿಕಾರ್ಜುನ ಖರ್ಗೆ ರಾಜೀನಾಮೆಯಿಂದ ತೆರವಾಗಿರುವ ವಿರೋಧ ಪಕ್ಷದ ನಾಯಕತ್ವವನ್ನು ಸಿದ್ದರಾಮಯ್ಯರಿಗೆ ಸಿಗದಂತೆ ಮಾಡುವುದು ಹೇಗೆ ಮತ್ತು ತಾವು ಆ ಸ್ಥಾನ ಪಡೆಯುವುದು ಹೇಗೆ ಎಂಬ ಲೆಕ್ಕಾಚಾರ ಹಾಕುವುದರಲ್ಲಿ ಕಾಲಕಳೆಯುತ್ತಿದ್ದಾರೆ. ಇದಕ್ಕೆ ಜಾತಿಯ ಲೆಕ್ಕಾಚಾರದಿಂದ ಹಿಡಿದು ಪಕ್ಷಕ್ಕಾಗಿ ತಾವೆಷ್ಟು ವರ್ಷ 'ದುಡಿದಿದ್ದೇವೆ' ಎಂಬ ಅಂಕಿ-ಅಂಶ ನೀಡುವುದನ್ನೂ ಮಾಡುತ್ತಿದ್ದಾರೆ.

ಅಧಿಕಾರಕ್ಕಾಗಿ ಆಸೆ ಪಡುವುದು ಖಂಡಿತಾ ತಪ್ಪಲ್ಲ. ಆದರೆ, ತಾವೆಷ್ಟು ಈ ಹುದ್ದೆಗೆ ಅರ್ಹರು, ಈ ಅಧಿಕಾರ ದೊರೆತರೆ ಪಕ್ಷವನ್ನು ಬೇರೆಲ್ಲ ನಾಯಕರಿಗಿಂತ ಚೆನ್ನಾಗಿ ಮುನ್ನಡೆಸುವ ಸಾಮರ್ಥ್ಯ ತಮಗಿದೆಯೇ ಎಂಬ ಆತ್ಮವಿಮರ್ಶೆ ಮಾಡಿಕೊಂಡು ಈ ನಿಟ್ಟಿನಲ್ಲಿ ಮುಂದುವರೆಯಬೇಕು. ಆದರೆ ಅದನ್ನು ಮಾಡದ ಕಾಂಗ್ರೆಸ್ ನಾಯಕರು ಕಳೆದ ಚುನಾವಣೆಯಲ್ಲಿ ತಮ್ಮ ಕ್ಷೇತ್ರದಲ್ಲಿಯೇ ಕಳಪೆ ಸಾಧನೆ ಮಾಡಿದ್ದರೂ ಅಧಿಕಾರಕ್ಕೆ ಆಸೆ ಪಡುವಷ್ಟು ಅಧಿಕಾರದ ಹುಚ್ಚು ಅವರನ್ನು ಹಿಡಿದಿದೆ.

ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕ ಸ್ಥಾನದ ಮೇಲೆ ಹಿಂದಿನಿಂದಲೂ ಕಣ್ಣಿಟ್ಟಿರುವುದು ಬಹಿರಂಗ ಸತ್ಯ. ಅದಕ್ಕಾಗಿ ಅವರು ಹಲವೊಮ್ಮೆ ಒಂದಿಷ್ಟು ಒರಟು ಒರಟಾಗಿ ವರ್ತಿಸಿ, ಪಕ್ಷಕ್ಕೆ ಮುಜುಗರ ಉಂಟುಮಾಡಿದ್ದರೂ, ಮೈಸೂರು ಮತ್ತು ಚಾಮರಾಜನಗರದಲ್ಲಿ ಪಕ್ಷವನ್ನು ಗೆಲ್ಲಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಹಾವೇರಿ ಮತಕ್ಷೇತ್ರದಲ್ಲಿ ಅವರ ವರ್ಚಸ್ಸು ಅಷ್ಟು ಕೆಲಸ ಮಾಡಿರದಿದ್ದರೂ ಮಲ್ಲಿಕಾರ್ಜುನ ಖರ್ಗೆಯ ಗೆಲುವಿನ ಹಾದಿಯನ್ನು ಸುಗಮಗೊಳಿಸಿದ್ದರು. ಅವರ ಅನುಭವ, ಹಿರಿತನ, ಚಾರಿಸ್ಮಾ, ಜಾತಿ ಬೆಂಬಲ, ಇತರೆ ಸಮುದಾಯಗಳ ಬೆಂಬಲ, ಎಲ್ಲವನ್ನೂ ಪರಿಗಣಿಸಿ ಅವರಿಗೆ ವಿರೋಧ ಪಕ್ಷದ ನಾಯಕನ ಸ್ಥಾನ ನೀಡುವುದರಲ್ಲಿ ತಪ್ಪೇನೂ ಇಲ್ಲ.

ಆದರೆ ಕಾಂಗ್ರೆಸ್‌ನ ಡಾ.ಜಿ. ಪರಮೇಶ್ವರ ಮತ್ತು ಟಿ.ಬಿ. ಜಯಚಂದ್ರರಂತಹ ನಾಯಕರಿಗೆ ಈ ಸ್ಥಾನವನ್ನು ಅಷ್ಟು ಸುಲಭವಾಗಿ ಸಿದ್ದರಾಮಯ್ಯನವರಿಗೆ ಬಿಟ್ಟುಕೊಡುವ ಮನಸ್ಸಿಲ್ಲ. ಆದ್ದರಿಂದ ತಾವೂ ಈ ಸ್ಥಾನದ ಆಕಾಂಕ್ಷಿಗಳು ಎಂದು ಹೇಳಿ ಗೊಂದಲ ಸೃಷ್ಟಿಸಿದ್ದಾರೆ.


ಅದರಲ್ಲೂ ಪ್ರಚಾರ ಸಮಿತಿಯ ಅಧ್ಯಕ್ಷರಾಗಿದ್ದ ಡಾ.ಜಿ.ಪರಮೇಶ್ವರ್‌ಗೆ ತಮ್ಮ ಸ್ವಕ್ಷೇತ್ರದಲ್ಲಿಯೇ ಪಕ್ಷಕ್ಕೆ ಮುನ್ನಡೆ ದೊರಕಿಸಿಕೊಡಲು ಸಾಧ್ಯವಾಗಿಲ್ಲ. ಆದ್ದರಿಂದ ತಮ್ಮಿಂದ ಎಲ್ಲಿ ತಪ್ಪಾಗಿದೆ ಎಂದು ಪರಿಶೀಲಿಸಿ, ತಮ್ಮ ಕ್ಷೇತ್ರದಲ್ಲಿ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಮತ್ತು ಪ್ರಚಾರ ಸಮಿತಿಯ ಅಧ್ಯಕ್ಷರಾಗಿ ತಾವು ಮಾಡಿದ ತಪ್ಪುಗಳು ಮರುಕಳಿಸದಂತೆ ನೋಡಿಕೊಳ್ಳುವಂತೆ ಕ್ರಮ ತೆಗೆದುಕೊಳ್ಳಬೇಕಾಗಿದ್ದ ಅವರೀಗ ಅದ್ಯಾವುದನ್ನೂ ಮಾಡದೆ ವಿರೋಧ ಪಕ್ಷದ ಸ್ಥಾನ ಕನಸು ಕಾಣುತ್ತಿದ್ದಾರೆ. ಪಕ್ಷ ಅಧಿಕಾರಕ್ಕೆ ಬಂದಾಗ ಸಚಿವರಾಗಿ ಅಧಿಕಾರ ಅನುಭವಿಸಿದ್ದ ಪರಮೇಶ್ವರ್‌ಗೆ ಪಕ್ಷ ಸೋತಾಗಲೂ ಅಧಿಕಾರ ಬೇಕಾಗಿದೆ!

ಇನ್ನು ವಿರೋಧ ಪಕ್ಷದ ಉಪನಾಯಕರಾಗಿರುವ ಜಯಚಂದ್ರ ಕೂಡ ಇದೇ ರೀತಿ ಹಗಲುಗನಸು ಕಾಣುತ್ತಾ ಪಕ್ಷವನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ಉಪನಾಯಕರಾಗಿದ್ದಾಗ ತಾನೆಷ್ಟು ಕೆಲಸ ಮಾಡಿದ್ದೇನೆ, ಪಕ್ಷವನ್ನು ತಮ್ಮ ಕ್ಷೇತ್ರದಲ್ಲಿ ಏಕೆ ಗೆಲ್ಲಿಸಲು ಸಾಧ್ಯವಾಗಿಲ್ಲ ಎಂದು ಚಿಂತಿಸಬೇಕಾಗಿದ್ದ ಅವರು "ವಿರೋಧ ಪಕ್ಷದ ನಾಯಕರು ರಾಜೀನಾಮೆ ನೀಡಿರುವುದರಿಂದ ಉಪನಾಯಕರಿಗೇ ಈ ಸ್ಥಾನ ನೀಡಬೇಕಾಗುತ್ತದೆ. ಇದು ಪಕ್ಷದ ಸಿದ್ಧಾಂತ ಕೂಡ" ಎಂದು ಹೇಳಿಕೊಂಡು ಓಡಾಡುತ್ತಾ ಸಿದ್ದರಾಮಯ್ಯನವರ ಬಣವನ್ನು ಗೊಂದಲಕ್ಕೆ ತಳ್ಳಿ ಮಜಾ ನೋಡುತ್ತಿದ್ದಾರೆ.

ಇದೇ ಮಾತನ್ನು ಇವರಿಬ್ಬರಂತೆ ಈ ಸ್ಥಾನದ ಮೇಲೆ ಕಣ್ಣಿಟ್ಟಿರುವ ಇತರ ನಾಯಕರಿಗೂ ಹೇಳಬಹುದು. ಇದು ಕಾಲೆಳೆಯುವ ರಾಜಕೀಯವಲ್ಲದೆ ಮತ್ತಿನ್ನೇನು? ಇವರ ರಗಳೆ ನೋಡಿದರೆ, ರಾಜ್ಯ ಕಾಂಗ್ರೆಸ್ ಇನ್ನು ಹತ್ತು ಬಾರಿ ಸೋತರೂ ಪಾಠ ಕಲಿಯುವಂತೆ ಕಾಣುತ್ತಿಲ್ಲ.


● ವರದಿಗಾರ

ಆಸ್ಟ್ರೇಲಿಯದಲ್ಲಿ ಭಾರತೀಯ ವಿದ್ಯಾರ್ಥಿಗಳ ಮೇಲೆ ಹಲ್ಲೆ


ಆಸ್ಟ್ರೇಲಿಯಾದಲ್ಲಿ ಭಾರತೀಯ ವಿದ್ಯಾರ್ಥಿಗಳ ಮೇಲಿನ ಹಲ್ಲೆಗಳು ನಿರಂತರವಾಗಿ ಮುಂದುವರೆದಿವೆ. ಈಗಾಗಲೇ ಹಲ್ಲೆಗೊಳಗಾದ ಇಬ್ಬರು ವಿದ್ಯಾರ್ಥಿಗಳು ಆಸ್ಪತ್ರೆ ಸೇರಿದ್ದು ಒಬ್ಬನ ಪರಿಸ್ಥಿತಿ ಗಂಭೀರವಾಗಿದೆ. ಇತ್ತ ಭಾರತದಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಎಂ.ಕೃಷ್ಣ 'ಭಾರತೀಯ ವಿದ್ಯಾರ್ಥಿಗಳಿಗೆ ಸೂಕ್ತ ರಕ್ಷಣೆ ಕೊಡುವುದು ಆಸ್ಟ್ರೇಲಿಯಾ ಸರ್ಕಾರದ ಕರ್ತವ್ಯ' ಎಂದು ಗದರಿಸಿದ್ದರೆ ಅತ್ತ ಆಸ್ಟ್ರೇಲಿಯಾದಲ್ಲಿ ಭಾರತೀಯ ವಿದ್ಯಾರ್ಥಿಗಳು ಮೆಲ್ಬೋರ್ನ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಿ ಭಾರತೀಯ ವಿದ್ಯಾರ್ಥಿಗಳ ಮೇಲಿನ ದಾಳಿಗಳನ್ನು ಖಂಡಿಸಿದ್ದಾರೆ. ಹಲವಾರು ವಿದ್ಯಾರ್ಥಿಗಳು ತಮ್ಮ ಮೇಲೆ ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಜನಾಂಗೀಯ ತಾರತಮ್ಯಗಳನ್ನು, ಜನಾಂಗೀಯ ನಿಂದನೆಗಳನ್ನು ಮಾಧ್ಯಮದೆದುರು ತೋಡಿಕೊಂಡಿದ್ದಾರಲ್ಲದೇ ಉನ್ನತ ವಿದ್ಯಾಭ್ಯಾಸಕ್ಕಾಗಿ ಆಸ್ಟ್ರೇಲಿಯಾವನ್ನು ಆಯ್ಕೆ ಮಾಡಿಕೊಳ್ಳದಂತೆ ಭಾರತೀಯ ವಿದ್ಯಾರ್ಥಿಗಳಲ್ಲಿ ಮನವಿ ಮಾಡಿಕೊಂಡಿದ್ದಾರೆ. ಈ ಎಲ್ಲ ಬೆಳವಣಿಗೆಗಳು ಪ್ರಾಯಶಃ ಮೊದಲ ಬಾರಿಗೆ ಆಸ್ಟ್ರೇಲಿಯಾದಲ್ಲಿ ಭಾರತೀಯರ ಮೇಲೆ ನಡೆಯುತ್ತಿರುವ ಜನಾಂಗೀಯ ನಿಂದನೆ, ತಾರತಮ್ಯಗಳನ್ನು ಅನಾವರಣಗೊಳಿಸಿವೆ. ಮಾತ್ರವಲ್ಲ, ಉನ್ನತ ವಿದ್ಯಾಭ್ಯಾಸ ಎಂಬ ಕನಸುಗಳನ್ನು ಹೊತ್ತುಕೊಂಡು ವಿದೇಶಕ್ಕೆ ಹಾರುವುದಕ್ಕೆ ತುದಿಗಾಲಲ್ಲಿ ನಿಂತಿರುವ ಭಾರತೀಯ ವಿದ್ಯಾರ್ಥಿಗಳ ಕಣ್ಣು ತೆರೆಸುತ್ತಿವೆ.

ವಾಸ್ತವದಲ್ಲಿ ಈ ಬೆಳವಣಿಗೆಗಳು ಎರಡೂ ದೇಶದ ಆಳುವ ಸರ್ಕಾರಗಳಿಗೆ ಕೆಲವು ಪಾಠಗಳನ್ನಂತೂ ಕಲಿಸಲೇಬೇಕಿದೆ. ಮೊದಲನೆಯದಾಗಿ, ಆಸ್ಟ್ರೇಲಿಯಾದ ಆರ್ಥಿಕತೆಯ ಮೇಲೆ ಇದರಿಂದ ಒಂದಿಷ್ಟು ಹೊಡೆತ ಬೀಳುವುದಂತೂ ಗ್ಯಾರಂಟಿ. ಆ ದೇಶದ ಪ್ರತಿ ನಗರದಲ್ಲೂ ನೂರಾರು ಶೈಕ್ಷಣಿಕ ಸಂಸ್ಥೆಗಳು ನಾಯಿಕೊಡೆಯಂತೆ ತಲೆಯೆತ್ತಿ ವಿಶ್ವದಾದ್ಯಂತ ಎಲ್ಲ ದೇಶಗಳ ವಿದ್ಯಾರ್ಥಿಗಳನ್ನು ತನ್ನೆಡೆ ಸೆಳೆದುಕೊಳ್ಳಲು ಹತ್ತಾರು ವರ್ಷಗಳಿಂದ ಪ್ರಯತ್ನ ನಡೆಸುತ್ತಲೇ ಬಂದಿವೆ. ಅದರಲ್ಲೂ ಭಾರತದಂತಹ ತೃತೀಯ ಜಗತ್ತಿನ ದೇಶಗಳ ಪತ್ರಿಕೆಗಳಲ್ಲಿ ಪ್ರತೀ ಅಕಾಡೆಮಿಕ್ ವರ್ಷ ಪ್ರಾರಂಭವಾಗುವ ಸಮಯದಲ್ಲಿ 'ಆಸ್ಟ್ರೇಲಿಯಾದಲ್ಲಿ ಕಡಿಮೆ ಖರ್ಚಿನಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಿ' ಎಂಬಂತಹ ಬಣ್ಣಬಣ್ಣದ ಜಾಹಿರಾತುಗಳನ್ನು ಕೊಟ್ಟು ವಿದ್ಯಾರ್ಥಿಗಳನ್ನು ಆಕರ್ಷಿಸುತ್ತವೆ. ಇಲ್ಲಿನ ವಿದ್ಯಾರ್ಥಿಗಳಿಗೆ ಅಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿ ಪ್ರವೇಶ ಕೊಡಿಸುವುದಕ್ಕಾಗಿಯೇ ಹಲವಾರು ಮಧ್ಯವರ್ತಿ ಸಂಸ್ಥೆಗಳೂ ಹುಟ್ಟಿಕೊಂಡಿದ್ದು ಇಲ್ಲಿನ ಪ್ರಮುಖ ನಗರಗಳಲ್ಲಿ ವರ್ಷಕ್ಕೆ ಎರಡೆರಡು ಬಾರಿ ಸಂದರ್ಶನಗಳನ್ನು ನಡೆಸುತ್ತಿವೆ.



ಭಾರತದಂತಹ ಹಿಂದುಳಿದ ದೇಶಗಳಲ್ಲಿ ವಿದೇಶದಲ್ಲಿ ವಿದ್ಯಾಭ್ಯಾಸ ಮಾಡುವುದು ಒಂದು ರೀತಿಯಲ್ಲಿ ಪ್ರತಿಷ್ಠೆಯ ಪ್ರಶ್ನೆಯಾಗಿರುವುದರಿಂದ ಹಲವಾರು ವಿದ್ಯಾರ್ಥಿಗಳು ಆಸ್ಟ್ರೇಲಿಯಾದ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯಲು ಮುಗಿಬೀಳುತ್ತಾರೆ. ಎಷ್ಟೋ ಬಾರಿ ಇಲ್ಲಿನ ಆರ್ಡಿನರಿ ಕಾಲೇಜಿಗಿಂತಲೂ ಅಲ್ಲಿನ ವಿಶ್ವವಿದ್ಯಾನಿಲಯಗಳು ಕಳಪೆಯಾಗಿರುತ್ತವೆ. ಆದರೂ, 'ವಿದೇಶದಲ್ಲಿ ಓದಿದವರು' ಎಂಬ ಹಣೆಪಟ್ಟಿ ಕಟ್ಟಿಕೊಳ್ಳುವ ಗೀಳಿಗೆ ಬಿದ್ದಿರುವ ನಮ್ಮ ವಿದ್ಯಾರ್ಥಿಗಳು ಮತ್ತು ಪೋಷಕರು ಆಸ್ಟ್ರೇಲಿಯಾಕ್ಕೆ ಓಡುವುದಕ್ಕೆ ತುದಿಗಾಲಲ್ಲಿ ನಿಂತಿರುತ್ತಾರೆ. ಆಸ್ಟ್ರೇಲಿಯಾದಲ್ಲಿ ಏನಿಲ್ಲವೆಂದರೂ ಸುಮಾರು ನಾಲ್ಕು ಲಕ್ಷ ವಿದೇಶಿ ವಿದ್ಯಾರ್ಥಿಗಳಿದ್ದು ಅವರಲ್ಲಿ ಬಹುತೇಕರು ಭಾರತೀಯರೇ ಆಗಿದ್ದಾರೆ. ಹೀಗೆ ಭಾರತೀಯ ಮೂಲದ ವಿದ್ಯಾರ್ಥಿಗಳೇ ವಿದ್ಯಾಭ್ಯಾಸಕ್ಕಾಗಿ ಪ್ರತಿವರ್ಷ ಎರಡೂವರೆ ಸಾವಿರ ಕೋಟಿ ರೂಪಾಯಿಗಳನ್ನು ಆಸ್ಟ್ರೇಲಿಯಾಕ್ಕೆ ಒಯ್ದು ಸುರಿಯುತ್ತಿದ್ದಾರೆ. ಮುಂದಿನ ವರ್ಷದಿಂದ ಈ ಸಂಖ್ಯೆಯನ್ನು ಇನ್ನೂ ಜಾಸ್ತಿ ಮಾಡಬೇಕೆಂದು ಆಸ್ಟ್ರೇಲಿಯಾ ಸರ್ಕಾರ ಯೋಜನೆ ರೂಪಿಸುತ್ತಿದೆ. ಈಗ ಅಲ್ಲಿ ಭಾರತೀಯ ವಿದ್ಯಾರ್ಥಿಗಳ ಮೇಲೆ ಜನಾಂಗೀಯ ದಾಳಿ ನಡೆಯುತ್ತಿರುವುದರಿಂದ ಅಲ್ಲಿಗೆ ವಿದ್ಯಾಭ್ಯಾಸಕ್ಕಾಗಿ ಹೋಗಬೇಕೆಂದುಕೊಂಡಿದ್ದ ಸಾವಿರಾರು ವಿದ್ಯಾರ್ಥಿಗಳು ತಮ್ಮ ಯೋಜನೆಯನ್ನು ಬದಲಿಸುತ್ತಿದ್ದಾರೆ. ಇದು ಆಸ್ಟ್ರೇಲಿಯಾ ಸರ್ಕಾರಕ್ಕೆ ಬೀಳುತ್ತಿರುವ ಮೊದಲ ಪೆಟ್ಟು.

ಎರಡನೆಯದಾಗಿ, ಆಸ್ಟ್ರೇಲಿಯಾದಲ್ಲಿ ಪ್ರವಾಸೋದ್ಯಮವೂ ಬೃಹತ್ತಾಗಿ ಬೆಳೆದು ನಿಂತಿದೆ. ಪ್ರತಿ ವರ್ಷ ಆ ದೇಶಕ್ಕೆ ಭೇಟಿ ನೀಡುತ್ತಿರುವವರಲ್ಲಿ ಭಾರತೀಯರ ಸಂಖ್ಯೆ ದೊಡ್ಡದಿದೆ. ಈಗ ಭಾರತೀಯರ ಮೇಲಿನ ದಾಳಿಗಳ ಹಿನ್ನೆಲೆಯಲ್ಲಿ ಈ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುವ ನಿರೀಕ್ಷೆಯಿದೆ. ಇದು ಆಸ್ಟ್ರೇಲಿಯು ಸರ್ಕಾರಕ್ಕೆ ಬೀಳುತ್ತಿರುವ ಎರಡನೇ ಪೆಟ್ಟು.

ಮೂರನೆಯದಾಗಿ, ಭಾರತೀಯರ ಮೇಲಿನ ಆಸ್ಟ್ರೇಲಿಯಾನ್ನರ ಜನಾಂಗೀಯ ದಾಳಿಗಳು ಅದರ ರಫ್ತು ವಹಿವಾಟಿನ ಮೇಲೂ ಅಗಾಧವಾಗಿ ಪರಿಣಾಮ ಬೀರುವ ಸಾಧ್ಯತೆಯಿದೆ. ಆಸ್ಟ್ರೇಲಿಯಾ ನಿರ್ಮಿತ ವಸ್ತುಗಳನ್ನು ಭಾರತದಲ್ಲಿ ಅಘೋಷಿತವಾಗಿ ಬಹಿಷ್ಕರಿಸುವ ದನಿ ಅಲ್ಲಲ್ಲಿ ಕೇಳಿಬರುತ್ತಿದೆ. ಹಾಗೇನಾದರೂ ಆದರೆ, ಅದು ಆಸ್ಟ್ರೇಲಿಯಾಕ್ಕೆ ಬಹುದೊಡ್ಡ ಆರ್ಥಿಕ ಪೆಟ್ಟನ್ನು ನೀಡಿದಂತಾಗುತ್ತದೆ. ಏಕೆಂದರೆ, ಆಸ್ಟ್ರೇಲಿಯಾವು ಉಳಿದೆಲ್ಲ ದೇಶಗಳಿಗಿಂತ ಹೆಚ್ಚಾಗಿ ತಮ್ಮ ಸರಕು-ಸೇವೆಗಳನ್ನು ಭಾರತಕ್ಕೇ ರಫ್ತು ಮಾಡುತ್ತಿದೆ. ವರ್ಷವೊಂದಕ್ಕೆ ಏನಿಲ್ಲವೆಂದರೂ ನಲ್ವತ್ತು ಸಾವಿರ ಕೋಟಿ ರೂಪಾಯಷ್ಟು ಸರಕು-ಸೇವೆಗಳನ್ನು ಭಾರತಕ್ಕೆ ರಫ್ತು ಮಾಡುತ್ತದೆ. ಅದರಲ್ಲಿ ಕಾಲು ಭಾಗ ಬಹಿಷ್ಕಾರಗೊಂಡರೂ ಆಸ್ಟ್ರೇಲಿಯಾ ಆ ಹೊಡೆತದಿಂದ ತತ್ತರಿಸಬೇಕಾಗುತ್ತದೆ.

ಭಾರತವೂ ಕೂಡ ಈ ಬೆಳವಣಿಗೆಗಳಿಂದ ಪಾಠ ಕಲಿತುಕೊಳ್ಳುವ ಅವಶ್ಯಕತೆಯಿದೆ. ಭಾರತೀಯ ವಿದ್ಯಾರ್ಥಿಗಳು ವಿದೇಶದಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕಾಗಿಯೇ ಪ್ರತಿವರ್ಷ ಐವತ್ತೆರಡು ಸಾವಿರ ಕೋಟಿ ರೂಪಾಯಿಗಳನ್ನು ಸುರಿಯುತ್ತಿದ್ದಾರೆ. ಭಾರತದ ಈ ದುಡ್ಡಿನಿಂದ ವಿದೇಶಗಳ ಶೈಕ್ಷಣಿಕ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ಸರ್ಕಾರಗಳು ಉದ್ಧಾರವಾಗುತ್ತಿವೆ. ನಮ್ಮದೇ ಸರ್ಕಾರ ಅತ್ಯುತ್ತಮ ಗುಣಮಟ್ಟದ ಶಿಕ್ಷಣ ನೀಡುವುದಕ್ಕಾಗಿ ಉತ್ತಮ ಶಿಕ್ಷಣ ಸಂಸ್ಥೆಗಳನ್ನು, ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿದರೆ ಭಾರತದ ದುಡ್ಡಿನ ಮತ್ತು ಭಾರತೀಯ ವಿದ್ಯಾರ್ಥಿಗಳ ಈ ಹೊರಮುಖ ಹರಿವನ್ನು ಒಂದಷ್ಟು ಮಟ್ಟಿಗೆ ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಅದೇ ದುಡ್ಡಿನಲ್ಲಿ ಮತ್ತೆ ಹೆಚ್ಚೆಚ್ಚು ಶಿಕ್ಷಣ ಸಂಸ್ಥೆಗಳನ್ನು ಬೆಳೆಸುತ್ತಾ ಹೋಗಬಹುದು.


ಸುತ್ತ ಮುತ್ತ
▶▶ ಕುಮಾರ್ ಬುರಡಿಕಟ್ಟಿ

ಆದರೆ, ಅಂತಹ ದಿಟ್ಟ ನಿರ್ಧಾರ ತೆಗೆದುಕೊಳ್ಳುವುದಕ್ಕೆ ರಾಜಕೀಯ ಇಚ್ಛೆ ಬೇಕಾಗುತ್ತದೆ. ಕ್ಯೂಬಾ ಕ್ರಾಂತಿಯ ಹರಿಕಾರ ಫೀಡೆಲ್ ಕ್ಯಾಸ್ಟ್ರೋ ಅಧಿಕಾರಕ್ಕೇರಿದ ಒಂದೇ ವರ್ಷದಲ್ಲಿ ಇಡೀ ದೇಶವನ್ನು ಸಾಕ್ಷರಗೊಳಿಸಿದರು. ಅವರು ಮಾಡಿದ ಕೆಲಸ ಏನೆಂದರೆ, ಒಂದು ವರ್ಷದ ಅವಧಿಗೆ ರಾಷ್ಟ್ರದ ಎಲ್ಲಾ ಶಾಲಾ-ಕಾಲೇಜುಗಳನ್ನು ಮುಚ್ಚಿ ಅದರಲ್ಲಿ ಬೋಧಿಸುತ್ತಿದ್ದ ಶಿಕ್ಷಕರನ್ನು ಮತ್ತು ಕಲಿಯುತ್ತಿದ್ದ ವಿದ್ಯಾರ್ಥಿಗಳನ್ನು ಹಳ್ಳಿಗಳಿಗೆ ಕಳುಹಿಸಿ ಅನಕ್ಷರಸ್ಥ ಜನರಿಗೆ ಅಕ್ಷರ ಕಲಿಸುವಂತೆ ಹೇಳಿದರು. ಆದ್ದರಿಂದಲೇ ಕ್ಯೂಬಾ ಒಂದೇ ವರ್ಷದಲ್ಲಿ ಸಂಪೂರ್ಣ ಸಾಕ್ಷರ ರಾಷ್ಟ್ರವಾಗಲು ಸಾಧ್ಯವಾಯಿತು. ನಮ್ಮ ದೇಶದ ರಾಜಕೀಯ ನಾಯಕತ್ವಕ್ಕೆ ಅಷ್ಟೊಂದು ರ್ಯಾಡಿಕಲ್ ಕೆಲಸ ಮಾಡುವಷ್ಟು ಶಕ್ತಿಯಿಲ್ಲದಿದ್ದರೂ ಕನಿಷ್ಠ ಉನ್ನತ ಶಿಕ್ಷಣಕ್ಕಾಗಿ ವಿದೇಶಗಳಿಗೆ ಹೋಗುತ್ತಿರುವ ಭಾರತೀಯ ದುಡ್ಡು ಮತ್ತು ವಿದ್ಯಾರ್ಥಿಗಳನ್ನು ತಡೆಯುವಷ್ಟು ಶಕ್ತಿಯಂತೂ ಇದೆ. ಅದನ್ನು ಮಾಡಬೇಕಷ್ಟೆ. ■

ಜಿಹಾದಿ ಮುಷ್ಟಿಯಲ್ಲಿ ಪಾಕಿಸ್ತಾನ

26/11ರ ಮುಂಬೈ ದಾಳಿಯ ಸೂತ್ರಧಾರಿಯಾಗಿದ್ದ ಹಫೀಜ್ ಮೊಹ್ಮದ್ ಸಯೀದ್‌ನನ್ನು ಲಾಹೋರ್ ನ್ಯಾಯಾಲಯ ಗೃಹಬಂಧನದಿಂದ ಬಿಡುಗಡೆ ಮಾಡುವಂತೆ ತೀರ್ಪು ನೀಡಿದೆ. ಪಾಕಿಸ್ತಾನ ಸರ್ಕಾರ, ಕೋರ್ಟುಗಳು ಎಷ್ಟರಮಟ್ಟಿಗೆ ಜಿಹಾದಿ ಭಯೋತ್ಪಾದಕರ ಕಪಿಮುಷ್ಠಿಯಲ್ಲಿ ಸಿಕ್ಕಿಕೊಂಡಿವೆ ಎನ್ನುವುದಕ್ಕೆ ಇದು ಇನ್ನೊಂದು ನಿದರ್ಶನ.


ಹಫೀಜ್ ಮೊಹ್ಮದ್ ಸಯೀದ್ ನಿಷೇಧಿತ ಜಮಾತ್-ಉದ್-ದಾವಾ ಎಂಬ ಭಯೋತ್ಪಾದಕ ಸಂಘಟನೆಯ ಮುಖ್ಯಸ್ಥ. ಅಲ್ಲದೇ ಭಾರತ-ಪಾಕ್ ಗಡಿಯಲ್ಲಿ, ಕಾಶ್ಮೀರದಲ್ಲಿ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿರುವ ಲಷ್ಕರ್-ಇ-ತೊಯ್ಬಾ ಸಂಘಟನೆಯ ಸಂಸ್ಥಾಪಕ. ಕಳೆದ ನವೆಂಬರ್ 26 ರಂದು ಮುಂಬೈ ಮೇಲೆ ನಡೆದ ಭಯೋತ್ಪಾದಕ ದಾಳಿಯನ್ನು ರೂಪಿಸಿದ ರೂವಾರಿಯೀತ. ಅಲ್ಲದೇ ಈ ಹಿಂದೆ ಗುಜರಾತ್‌ನ ಅಕ್ಷರಧಾಮ ಮಂದಿರದ ಮೇಲೆ ದಾಳಿ ಮಾಡಿಸಿದ್ದೂ ಈತನೆ.

ಮುಂಬೈ ದಾಳಿಯಲ್ಲಿ ಬದುಕುಳಿದ ಏಕೈಕ ಭಯೋತ್ಪಾದಕ ಕಸಬ್ ದಾಳಿಯ ಯೋಜನೆ ರೂಪಿಸಿದ್ದು ದಾಳಿಗಾಗಿ ಭಯೋತ್ಪಾದಕರ ದಂಡನ್ನು ಸೃಷ್ಟಿಸಿದ್ದು



ಅವರಿಗೆ ಪ್ರಚೋದನಾಕಾರಿ ಭಾಷಣ ಮಾಡಿದ್ದು ಹಫೀಜ್ ಮೊಹ್ಮದ್ ಸಯೀದನೇ ಎಂಬುದನ್ನು ಒಪ್ಪಿಕೊಂಡಿದ್ದಾನೆ. ಈ ಹಿನ್ನೆಲೆಯಲ್ಲಿ ಭಾರತ ಮುಂಬೈ ದಾಳಿಗೆ ಕಾರಣರಾದವರನ್ನು ಶಿಕ್ಷಿಸಬೇಕೆಂದು ಪಾಕ್ ಮೇಲೆ ಒತ್ತಡ ತಂದಿತ್ತು. ಒಂದು ಹಂತದಲ್ಲಿ ಪಾಕ್ ಮೇಲೆ ಯುದ್ಧ ಮಾಡುವುದಕ್ಕೂ ತಯಾರಾಗಿತ್ತು. ಇದೇ ವೇಳೆಯಲ್ಲಿ ಅಂತಾರಾಷ್ಟ್ರೀಯ ಸಮುದಾಯವೂ ಪಾಕ್‌ನಲ್ಲಿ ಬೇರೂರುತ್ತಿರುವ ಜಿಹಾದಿ ಭಯೋತ್ಪಾದನೆಯನ್ನು ಹತ್ತಿಕ್ಕುವಂತೆ ಅದರ ಮೇಲೆ ಒತ್ತಡ ಹೇರಿತ್ತು. ಅಲ್ಲದೇ, ವಿಶ್ವಸಂಸ್ಥೆಯ ಭದ್ರತಾ ಸಮಿತಿ ಕೂಡ ಹಫೀಜ್ ಮೇಲೆ ದಿಗ್ಬಂಧನ ಹೇರಿತ್ತು. ಈ ಎಲ್ಲ ಬೀಸುವ ದೊಣ್ಣೆಗಳಿಂದ ರಕ್ಷಿಸಿಕೊಳ್ಳಲು ಪಾಕ್ ಕಣ್ಣೊರೆಸುವ ತಂತ್ರವಾಗಿ ಹಫೀಜ್ ಮೊಹ್ಮದ್ ಸಯೀದ್‌ನನ್ನು ಗೃಹಬಂಧನದಲ್ಲಿಟ್ಟಿತು.

ಈಗ ಆರು ತಿಂಗಳು ತುಂಬುವುದರೊಳಗಾಗಿ ಆತ ಮತ್ತೆ ಹೊರಬಂದಿದ್ದಾನೆ. ವಿಶ್ವಸಂಸ್ಥೆಯ ದಿಗ್ಬಂಧನವನ್ನು ಬಿಟ್ಟು ಆತನ ವಿರುದ್ಧ ಯಾವುದೇ ಬಲಿಷ್ಠ ಸಾಕ್ಷ್ಯಾಧಾರಗಳಿಲ್ಲ ಹಾಗೂ ವಿಶ್ವಸಂಸ್ಥೆಯ ನಿಬಂಧನೆಗಳಿಗೆ ಪಾಕ್ ಕೋರ್ಟುಗಳು ಬದ್ಧವಾಗಿರಬೇಕಿಲ್ಲ ಎಂಬ ತರ್ಕವನ್ನು ಮುಂದಿಟ್ಟುಕೊಂಡು ಲಾಹೋರ್ ನ್ಯಾಯಾಲಯ ಅವನನ್ನು ಬಿಡುಗಡೆ ಮಾಡಬೇಕೆಂದು ತೀರ್ಪಿತ್ತಿದೆ.



ಹಫೀಜ್ ಗೃಹಬಂಧನದಿಂದ ಹೊರಬರುವುದಕ್ಕೆ ಪಾಕಿಸ್ತಾನಿ ಸರ್ಕಾರವೇ ನೇರ ಕಾರಣ ಎಂದರೆ ತಪ್ಪಲ್ಲ. ಏಕೆಂದರೆ, ಹಫೀಜ್‌ನಂಥ ಉಗ್ರನೊಬ್ಬನನ್ನು ಗೃಹಬಂಧನದಲ್ಲಿಡುವುದಕ್ಕೆ ಪಾಕಿಸ್ತಾನ ಸರ್ಕಾರಕ್ಕೆ ಮನಸ್ಸೂ ಇಲ್ಲ, ತಾಕತ್ತೂ ಇಲ್ಲ. ಮುಂಬೈ ದಾಳಿಯ ನಂತರ ವಿಶ್ವದ ಎಲ್ಲಾ ಕಡೆಯಿಂದಲೂ ಒತ್ತಡಗಳು ಹೆಚ್ಚಾದಾಗ ಒಂದಿಷ್ಟು ಕಾಲ ಆತನನ್ನು ಗೃಹಬಂಧನದಲ್ಲಿಟ್ಟಂತೆ ನಾಟಕ ಮಾಡಿತು. ಆದರೆ, ಆತನ ವಿರುದ್ಧ ಪ್ರಬಲ ಸಾಕ್ಷ್ಯಾಧಾರಗಳನ್ನು ಒದಗಿಸದೇ ಕೇಸು ಬಿದ್ದುಹೋಗುವಂತೆ ಮಾಡಿ ಆತನ ಬಿಡುಗಡೆಗೆ ಸರ್ಕಾರವೇ ಸಿದ್ಧತೆ ನಡೆಸಿತ್ತು. ಪರಿಣಾಮವಾಗಿ ಈಗ ಆತ ಹೊರಬಂದಿದ್ದಾನೆ.

ವಾಸ್ತವದಲ್ಲಿ ಪಾಕಿಸ್ತಾನ ಸರ್ಕಾರಕ್ಕೂ, ಸೇನೆಗೂ ಮತ್ತು ಉಗ್ರವಾದಕ್ಕೂ ಮೊದಲಿನಿಂದಲೂ ಗಾಢವಾದ ನಂಟಿದೆ. ಲಷ್ಕರ್-ಎ-ತೊಯ್ಬಾ, ಜೈಷೇ ಮೊಹ್ಮದ್, ಮುಜಾಹಿದೀನ್‌ಗಳಂಥ ಭಯೋತ್ಪಾದಕ ಸಂಘಟನೆಗಳು ಆ ದೇಶದಲ್ಲಿ ನೆಲೆಯೂರುವುದಕ್ಕೆ ಪಾಕ್ ಸೇನೆ ಮತ್ತು ಸರ್ಕಾರಗಳೇ ನೇರವಾಗಿ ಸಹಕರಿಸಿವೆ. ಈ ಉಗ್ರಗಾಮಿ ಸಂಘಟನೆ ಮತ್ತು ಸೇನೆ ನಡುವೆ ಎಷ್ಟರಮಟ್ಟಿನ ಅನ್ಯೋನ್ಯ ಸಂಬಂಧವಿದೆಯೆಂದರೆ ಕಾರ್ಗಿಲ್ ಯುದ್ಧದ ಸಮಯದಲ್ಲಿ ಅವೆರಡೂ ಶಕ್ತಿಗಳು ಒಗ್ಗೂಡಿ ಭಾರತೀಯ ಸೇನೆಯೊಂದಿಗೆ ಕಾದಾಡಿದ್ದವು. ವಿಶ್ವದ ಬೇರೆ ಬೇರೆ ರಾಷ್ಟ್ರಗಳಲ್ಲಿ ನಿಷೇಧಕ್ಕೊಳಗಾಗಿರುವ ಭಯೋತ್ಪಾದಕ ಸಂಘಟನೆಗಳು ಪಾಕ್‌ನಲ್ಲಿ ರಾಜಾರೋಷವಾಗಿ ಕಾರ್ಯನಿರ್ವಹಿಸುತ್ತಿವೆ. ಪಾಕ್ ನೆಲದಲ್ಲೇ ಭಯೋತ್ಪಾದಕ ಚಟುವಟಿಕೆಗಳ ಯೋಜನೆಗಳನ್ನು ಸಿದ್ಧಪಡಿಸಿ ಬೇರೆ ಬೇರೆ ದೇಶಗಳಲ್ಲಿ ಕಾರ್ಯಗತಗೊಳಿಸುತ್ತಿವೆ. ಹೀಗೆ ಪಾಕ್‌ನಲ್ಲಿ ಬೇರೂರಿರುವ, ಬೇರೂರುತ್ತಿರುವ ಉಗ್ರವಾದವನ್ನು ನಾಶಪಡಿಸುವುದಕ್ಕಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಒತ್ತಡಗಳು ಹೆಚ್ಚಾಗುತ್ತಿದ್ದರೂ ಅದಕ್ಕೆ ಪಾಕ್ ತಲೆಕೆಡಿಸಿಕೊಂಡಿರಲಿಲ್ಲ. ಉಗ್ರವಾದಿ ಶಕ್ತಿಗಳು ಈಗ ಎಷ್ಟು ಪ್ರಬಲರಾಗಿದ್ದಾರೆಂದರೆ ಪಾಕ್ ಸರ್ಕಾರವೇನಾದರೂ ಈಗ ನಿಜಕ್ಕೂ ಅವರನ್ನು ಮಟ್ಟಹಾಕುವುದಕ್ಕೆ ಮುಂದಾದರೆ ಸರ್ಕಾರವನ್ನೇ ಉರುಳಿಸುವಷ್ಟು ತಾಕತ್ತು ಅವರಿಗೆ ಬಂದುಬಿಟ್ಟಿದೆ.

ಇನ್ನೊಂದೆಡೆ ನೋಡಿ. ಪಾಕ್-ಅಫ್ಘನ್ ಗಡಿಯ ಸ್ವಾತ್ ಕಣಿವೆಯಲ್ಲಿ ಅಡಗಿರುವ ತಾಲಿಬಾನ್ ಉಗ್ರರನ್ನು ಸದೆಬಡಿಯುವುದಕ್ಕಾಗಿ ಇದೇ ಪಾಕ್ ಸರ್ಕಾರ ತನ್ನ ಸೇನೆಯನ್ನು ಕಳಿಸಿಕೊಟ್ಟಿದೆ. ನಿಜ ಹೇಳಬೇಕೆಂದರೆ, ಪಾಕಿಸ್ತಾನದಲ್ಲಿ ತಾಲೀಬಾನ್ ಭಯೋತ್ಪಾದಕರು ನೆಲೆ ಕಂಡುಕೊಳ್ಳುವುದಕ್ಕೆ ಇದೇ ಪಾಕಿಸ್ತಾನೀ ಸರ್ಕಾರ ಮತ್ತು ಸೇನೆಯೇ ಸಹಾಯ ಮಾಡಿತ್ತು. 2001ಕ್ಕಿಂತ ಮೊದಲು ಅಲ್‌ಕೈದಾ ಎಂಬ ಇಸ್ಲಾಮಿಕ್ ಉಗ್ರವಾದಿಗಳು ಅಫಘಾನಿಸ್ತಾನವನ್ನು ತಮ್ಮ ನೆಲೆಯನ್ನಾಗಿ ಮಾಡಿಕೊಂಡಿದ್ದರು. 2001ರ ಸೆಪ್ಟೆಂಬರ್ 11ರಂದು ಅಮೆರಿಕದ ವಿಶ್ವ ವಾಣಿಜ್ಯ ಸಂಕೀರ್ಣದ ಮೇಲೆ ದಾಳಿಯಾದ ತಕ್ಷಣವೇ ಅದಕ್ಕೆ ಅಲ್‌ಖೈದಾ ಸಂಘಟನೆ ಮತ್ತದರ ಸುಪ್ರೀಮ್ ಕಮ್ಯಾಂಡರ್ ಒಸಾಮಾ ಬಿನ್ ಲಾಡೆನ್‌ನೇ ನೇರಹೊಣೆ ಎಂದು ಆರೋಪಿಸಿ ಅಮೆರಿಕವು ಮುಂದಿನ ತಿಂಗಳಲ್ಲೇ (ಅಕ್ಟೋಬರ್ 7, 2001) ಇಂಗ್ಲೆಂಡ್‌ನ ಸಹಾಯದೊಂದಿಗೆ **Operation Enduring Freedom** ಹೆಸರಿನ ಸೈನಿಕ ಕಾರ್ಯಾಚರಣೆ ಪ್ರಾರಂಭಿಸಿತು. ಕೆಲವೇ ದಿನಗಳಲ್ಲಿ ಉಗ್ರರ ಹಿಡಿತದಲ್ಲಿದ್ದ ಅಫ್ಘನ್‌ನಲ್ಲಿ ತಾಲೀಬಾನ್ ಸರ್ಕಾರ ಪತನಗೊಂಡು ಅಮೆರಿಕ ಪ್ರಾಯೋಜಿತ ಹಮೀದ್ ಖರ್ಜಾಯ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂತು. ಮೇಲ್ನೋಟಕ್ಕೆ ಇದು ಅಮೆರಿಕ ಮತ್ತು ತಾಲೀಬಾನ್ ನಡುವಿನ ಯುದ್ಧದ ಅಂತ್ಯ ಎಂಬಂತೆ ಕಂಡಿದ್ದು ನಿಜ. ಆದರೆ, ವಾಸ್ತವವೇನೆಂದರೆ ಅದು ಯುದ್ಧದ ಅಂತ್ಯವಾಗಿರಲಿಲ್ಲ, ಆರಂಭವಾಗಿತ್ತು.


ಆ ಹೊತ್ತು ನೆಲೆ ಕಳೆದುಕೊಂಡ ಅಲ್‌ಕೈದಾ ಉಗ್ರಗಾಮಿಗಳು ನಂತರ ತಮ್ಮ ನೆಲೆಗಳನ್ನು ಪುನರ್ ಸ್ಥಾಪಿಸಿಕೊಂಡಿದ್ದು ಪಾಕಿಸ್ತಾನ-ಅಫಘಾನಿಸ್ತಾನಗಳ ಗಡಿಗಳಲ್ಲಿರುವ ಆದಿವಾಸಿ ಸಮುದಾಯಗಳು ವಾಸಿಸುವ ಗುಡ್ಡಗಾಡು ಪ್ರದೇಶಗಳಲ್ಲಿ. ಅಲ್ಲಿಂದಲೇ ಅಮೆರಿಕನ್ ಸೈನ್ಯದ ಮೇಲೆ ಗೆರಿಲ್ಲಾ ಮಾದರಿಯ ಆಕ್ರಮಣ ಮಾಡಲಾರಂಭಿಸಿದರು. ಒಂದು ವೇಳೆ ಪಾಕಿಸ್ತಾನ ಆ ದಿನಗಳಲ್ಲೇ ಮುಂದೆ ಎದುರಾಗಬಹುದಾದ ಅನಾಹುತಗಳನ್ನು ಮನಗಂಡು ಅಲ್‌ಕೈದಾ ನಿಗ್ರಹಕ್ಕೆ ಮುಂದಾಗಿದ್ದರೆ ಈ ಹೊತ್ತು ಸ್ವಾತ್ ಕಣಿವೆ ತಾಲೀಬಾನ್ ಉಗ್ರರ ನೆಲೆಯಾಗುತ್ತಿರಲಿಲ್ಲ.



ಂೀಗೆ ಇತ್ತ ಪಾಕಿಸ್ತಾನ ಅಲ್‌ಕೈದಾ ಬಗ್ಗೆ ಮೃದು ಧೋರಣೆ ತಳೆಯುತ್ತಾ ತಳ್ಳುತ್ತಿದ್ದ ಸಮಯದಲ್ಲೇ ಅತ್ತ ಅಫಘಾನಿಸ್ತಾನದಲ್ಲಿ ಅಮೆರಿಕದ ಮತ್ತು ತಾಲೀಬಾನ್‌ಗಳ ನಡುವಿನ ಕದನ ಮುಂದುವರೆದೇ ಇತ್ತು. ಅಮೆರಿಕ ಸೈನ್ಯವೊಂದರಿಂದಲೇ ತಾಲೀಬಾನ್ ಉಗ್ರರನ್ನು ಡಿಯುವುದು ಅಸಾಧ್ಯ ಎಂದು ಮನವರಿಕೆಯಾದಾಗ 2006ರಲ್ಲಿ ೂೀದ ಅಂತಾರಾಷ್ಟ್ರೀಯ ಭದ್ರತಾ ಸಹಾಯ ಪಡೆ (International Security Assistance Force - ISAF) ರೂಪಿಸಿ ತು ತಾಲೀಬಾನ್ ಮೇಲೆ ಯುದ್ಧಕ್ಕಿಳಿದರು. ಈ ಪಡೆಯಲ್ಲಿ ಇಂಗ್ಲೆಂಡ್, ಿಯ, ಕೆನಡಾ, ನೆದರ್‌ಲ್ಯಾಂಡ್ಸ್, ಡೆನ್ಮಾರ್ಕ್ ಮುಂತಾದ ದೇಶಗಳ ಮೂ ಇದ್ದರು. ಈ ಪಡೆ ಒಂದಿಷ್ಟು ಜಯ ಸಾಧಿಸಿತಾದರೂ ತಾಲಿಬಾನ್ ಸಂಪೂರ್ಣವಾಗಿ ಸದೆಬಡಿಯಲು ಅದಕ್ಕೂ ಸಾಧ್ಯವಾಗಲಿಲ್ಲ.

ಈ ಯುದ್ಧ ಎಷ್ಟೊಂದು ಭೀಕರವಾಗಿದೆಯೆಂದರೆ 2008ರ ಒಂದೇ ದಲ್ಲಿ 5220 ವಿದೇಶಿ ಸೈನಿಕರನ್ನು, 7552 ಅಫಘನ್ ಸೈನಿಕರನ್ನೂ ಿರುವುದಲ್ಲದೇ 31 ಯುದ್ಧ ವಿಮಾನಗಳನ್ನು, 2818 ನ್ಯಾಟೋ ು ಮಿಲಿಟರಿ ವಾಹನಗಳನ್ನು ನಾಶಪಡಿಸಿರುವುದಾಗಿ ತಾಲೀಬಾನ್ ಕೊಂಡಿದೆ. ಇದು ತುಸು ವೈಭವೀಕೃತ ಹೇಳಿಕೆಯಾಗಿರುವುದು ಾದರೂ ಸಂಪೂರ್ಣ ಸುಳ್ಳಂತೂ ಅಲ್ಲ. ನಿಜ ಹೇಳಬೇಕೆಂದರೆ 1ರಲ್ಲಿ ಅಫಘಾನಿಸ್ತಾನವನ್ನು ವಶಪಡಿಸಿಕೊಳ್ಳುವುದಕ್ಕಾಗಿ ಅಮೆರಿಕ ಕೊಂಡ ಸೈನಿಕರಿಗಿಂತಲೂ 2008ರ ತಾಲಿಬಾನ್ ಗೆರಿಲ್ಲಾ ಯುದ್ಧದಲ್ಲಿ ಬ್ಬಿಟ್ಟ ಸೈನಿಕರ ಸಂಖ್ಯೆಯೇ ಜಾಸ್ತಿಯಾಗಿತ್ತು!


ಪಾಕಿಸ್ತಾನ ತಾಲೀಬಾನ್ ಬಗ್ಗೆ ಮೃದು ಧೋರಣೆ ತಾಳಿರುವುದರಿಂದ ೂಮ್ಮೆ ಅಫಘಾನಿಸ್ತಾನವನ್ನು ಆಕ್ರಮಿಸಿಕೊಂಡು ರಾಜ್ಯಭಾರ ದಂತೆಯೇ ಮುಂದೊಂದು ದಿನ ತಾಲೀಬಾನ್ ಪಾಕಿಸ್ತಾನವನ್ನು ಕ್ಕೆ ತೆಗೆದುಕೊಳ್ಳಬಹುದೆಂಬ ಭೀತಿ ಅಮೆರಿಕಕ್ಕಿತ್ತು. ಹಾಗೇನಾದರೂ , ಪಾಕಿಸ್ತಾನ ಅಣ್ವಸ್ತ್ರಗಳನ್ನು ಹೊಂದಿದ ದೇಶವಾಗಿದ್ದರಿಂದ ಯುಕಾರಿ ಅಣ್ವಸ್ತ್ರಗಳು ಆಲ್‌ಕೈದಾ ಉಗ್ರರ ಕೈವಶವಾಗುತ್ತವೆ. ಅದು ಿಕದ ಪಾಲಿಗೆ ಚರಮಗೀತೆ ಬರೆದಂತಾಗುತ್ತದೆ. ಅಂತಹದ್ದೊಂದು



ುವನ್ನು ತಪ್ಪಿಸುವುದಕ್ಕಾಗಿ ಈಗ ಅಮೆರಿಕದ ಅಧ್ಯಕ್ಷ ಬರಾಕ್ ಮಾ ತಾಲಿಬಾನ್ ಮತ್ತು ಆಲ್‌ಕೈದಾಗಳನ್ನು ಸಂಪೂರ್ಣವಾಗಿ ಡಿಯುವುದಕ್ಕೆ ಪಾಕಿಸ್ತಾನದ ಮೇಲೆ ಹಿಂದೆಂದಿಗಿಂತಲೂ ಹೆಚ್ಚಿನ ತಂದಿದ್ದಾರೆ. ಮೊನ್ನೆ ಮೇ 8ರಂದು ವಾಷಿಂಗ್ಟನ್‌ನಲ್ಲಿ ಪಾಕ್ ಆಸೀಫ್ ಅಲಿ ಜರ್ದಾರಿ, ಅಫ್ಘಾನಿಸ್ತಾನದ ಅಧ್ಯಕ್ಷ ಹಮೀದ್ ಯ್‌ರೊಂದಿಗೆ ಅವರು ಗಂಭೀರವಾಗಿ ಮಾತುಕತೆ ನಡೆಸಿದರು. ಕದಂತಹ ದೈತ್ಯ ಶಕ್ತಿಯೊಂದನ್ನು ಎದುರುಹಾಕಿಕೊಳ್ಳಲು ಪಾಕ್ ಲ್ಲ, ಅದೂಅಲ್ಲದೇ, ಆಲ್‌ಕೈದಾವನ್ನು ಹೀಗೇ ಬೆಳೆಯಲು ಬಿಟ್ಟರೆ ಪಾಕಿಸ್ತಾನ ತಾಲೀಬಾನ್ ಉಗ್ರರ ವಶವಾಗುವ ಭೀತಿಯೂ ಅದನ್ನು ರಂಭಿಸಿದೆ. ಹಾಗಾಗಿ, ಅನಿವಾರ್ಯವಾಗಿ ಈಗ ಪಾಕಿಸ್ತಾನ ಸೇನೆಯೂ ದಾ ಮತ್ತು ತಾಲೀಬಾನ್ ನೆಲೆಗಳ ಮೇಲೆ ಆಕ್ರಮಣ ಪ್ರಾರಂಭಿಸಿದೆ.

ೀಗೆ, ಒಂದೆಡೆ ತಾಲೀಬಾನ್ ಉಗ್ರವಾದವನ್ನು ನಿಗ್ರಹಿಸಲು ತನ್ನ ನ್ನು ಕಳಿಸಿರುವ ಪಾಕ್ ಅದೇ ಸಮಯದಲ್ಲಿ ಹಫೀಜ್ ಮೊಹ್ಮದ್ ದ್‌ನಂಥ ಉಗ್ರನೊಬ್ಬ ಬಂಧನದಿಂದ ಹೊರಬರುವುದಕ್ಕೂ ವಾಗಿದೆ. ವಾಸ್ತವದಲ್ಲಿ ಇದು ಪಾಕ್ ರಾಜಕಾರಣದ ಪ್ರಸಕ್ತ ದ್ವಂದ್ವವನ್ನು ವಾಗಿ ಹೇಳುವಂತಿದೆ. ಸಾರಾಂಶದಲ್ಲಿ ಹೇಳಬೇಕೆಂದರೆ, ಒಂದೆಡೆ ಕದ ಒತ್ತಡ, ಇನ್ನೊಂದೆಡೆ ಪಾಕ್ ಉಗ್ರವಾದಿಗಳ ಒತ್ತಡ, ಮಗ ಸಿ ಸೈನ್ಯದ ಒತ್ತಡ. ಇವೆಲ್ಲವುಗಳ ನಡುವೆ ಜನರಿಂದ ಚುನಾಯಿತವಾದ ಕುಲುಗುತ್ತಿದೆ. ಎಲ್ಲಿಯವರೆಗೆ ಪಾಕ್‌ನಲ್ಲಿ ಚುನಾಯಿತ ಸರ್ಕಾರವೊಂದು ರ ಅಧಿಕಾರ ನಡೆಸುವ ಪರಿಸ್ಥಿತಿ ನಿರ್ಮಾಣವಾಗುವುದಿಲ್ಲವೋ ವರೆಗೆ ಅದು ಭಾರತಕ್ಕೆ ಅಪಾಯಕಾರಿಯಾಗಿಯೇ ಇರುತ್ತದೆ. ●

ಜೈಟ್ಲಿಯ ರಾಜಿ ಸೂತ್ರ



ಜೂನ್ 3 ರ ಬುಧವಾರದ ದೆಹಲಿ ರಾಜಿ ಪಂಚಾಯ್ತಿ ಮೇಲುನೋಟಕ್ಕೆ ಯಡ್ಡಿಗೆ ಮುಗುದಾರ ಹಾಕಿದಂತೆ ಕಂಡರೂ ವಾಸ್ತವವಾಗಿ ಬಿಜೆಪಿ ಹೈಕಮಾಂಡ್ ಯಡ್ಡಿಗೇ ಮಣಿದಂತಿದೆ.

ರಾಜ್ಯದ ಉಸ್ತುವಾರಿಗೆಂದು ನೇಮಕಗೊಂಡ ಅರುಣ್ ಜೈಟ್ಲಿಗೆ ಯಡ್ಡಿಯನ್ನು ನಿಯಂತ್ರಿಸುವಷ್ಟು 'ಮೀಟರ್' ಇಲ್ಲ. ಇನ್ನು ಜೈಟ್ಲಿಯೇ ಮುಂದಿಟ್ಟ ರಾಜಿ ಸೂತ್ರವಾದರೂ ಎಂಥದ್ದು?


ಜಗದೀಶ್ ಶೆಟ್ಟರ್‌ರನ್ನು ಕ್ಯಾಬಿನೆಟ್ ಮಂತ್ರಿಯನ್ನಾಗಿ ಮಾಡಬೇಕೆಂಬ ಷರತ್ತಿಗೆ ಯಡ್ಡಿ ಒಪ್ಪಿದ್ದಾರಾದರೂ ಅದು ಆರು ತಿಂಗಳ ನಂತರ! ಈ ವಾರಕ್ಕೋ ಮುಂದಿನ ವಾರಕ್ಕೋ ನಡೆಯಬೇಕಿದ್ದ ಸಂಪುಟ ಪುನರಚನೆ ಇನ್ನು ಆರು ತಿಂಗಳು ಮುಂದೆ ಹೋಗಿದೆಯೆಂದರೆ ಅದು ಯಡ್ಡಿಗೇ ಲಾಭ ತಾನೆ? ಇನ್ನು ಈಶ್ವರಪ್ಪನವರಿಗಾದ ಅನುಕೂಲವೆಂದರೆ ಷೋಕಾಸ್ ನೋಟೀಸ್ ರದ್ದಾಗಿದ್ದು!

ಈ ಪುರುಷಾರ್ಥಕ್ಕೆ ಈಶ್ವರಪ್ಪ ಗುಡುಗಬೇಕಿತ್ತೆ? ಗಣಿ ರೆಡ್ಡಿಗಳಿಗೆ ಉಪಮುಖ್ಯಮಂತ್ರಿಗಿರಿ ಕೊಡುವುದು ಅಸಲೀ ಸಮಸ್ಯೆಯಲ್ಲವಾದ್ದರಿಂದ ಆ ಬಗ್ಗೆ ಹೈಕಮಾಂಡ್ ಮುಗುಮ್ಮಾಗಿದೆ. ಅದರರ್ಥ ಗಣಿರೆಡ್ಡಿಗಳ ಕಳ್ಳಗಣಿಗಳೆಲ್ಲ ಮತ್ತೆ ಶುರುವಾಗುತ್ತವೆ ಎಂದೇ ಅರ್ಥ ತಾನೆ?

ದೇಶಾವರಿ ಕೃಷ್ಣರಿಗೆ 'ವಿದೇಶಾಂಗ ಟೂರ್'

ಇದನ್ನು ಕೃಷ್ಣರ ಒಟ್ಟು ರಾಜಕೀಯದ ಚಿತ್ರಣ ಎನ್ನಬಹುದೇನೊ? ಒಂಥರಾ ಅವರದು ದೇಶಾವರಿ ಅಂದರೆ ಅಲೆಮಾರಿ ಬದುಕೇ! ಆದರೆ ಈ ಅಲೆಮಾರಿ ಓಡಾಟಗಳಲ್ಲಿ ಅವರದು ಸದಾ ಐಷಾರಾಮಿ ಎನ್ನುವಂತಹ ಬದುಕೇ; ಅಲ್ಲಿಂದಿಲ್ಲೊಂದು ಕಡೆ ಅಧಿಕಾರದ ಭಾಗ್ಯವೇ!

ಸುಮಾರು ಐದು ದಶಕಗಳ ಕಾಲ ಅವರು ನಂಬಿದ್ದು ಕಾಂಗ್ರೆಸ್ಸನ್ನೇ. ಅಂದರೆ ಅವರು ಕಾಂಗ್ರೆಸ್ಸಿನ ನೆರಳಲ್ಲೇ ಅಧಿಕಾರ ಅನುಭವಿಸಿದರು; ಪಕ್ಷ ಬಿಟ್ಟು ಪಕ್ಷಕ್ಕೆ ಜಿಗಿಯುವ ಅಲೆಮಾರಿ ಆಗಲಿಲ್ಲ. ರಾಜ್ಯದಲ್ಲಿ ಇಂತಹ ಕಾಂಗ್ರೆಸ್ ನಿಷ್ಠೆಯ ಹಲವಾರು ನಾಯಕರಿದ್ದಾರೆ. ಸದ್ಯಕ್ಕೆ ಉದಾಹರಿಸುವುದಾದರೆ ಮಲ್ಲಿಕಾರ್ಜುನ ಖರ್ಗೆ, ಧರಂಸಿಂಗ್... ಆದರೆ ಇವರ್‍ಯಾರಿಗೂ ನಿರಂತರವಾಗಿ ಸಿಗದ 'ಭಾಗ್ಯ' ಕೃಷ್ಣರಿಗೆ ಮಾತ್ರ ಸಲೀಸಾಗಿ ಸಿಗುತ್ತಲೇ ಬಂತು. ದೊಡ್ಡಮನೆತನದ ಹಿನ್ನೆಲೆ, ತಲೆ ಮೇಲೆ ಫಾರಿನ್ ವಿದ್ಯಾಭ್ಯಾಸದ ಗುಚ್ಛ, ಕಾಲಕ್ಕೆ ತಕ್ಕಂತೆ ಹೈಕಮಾಂಡ್ ಜೊತೆಗಿನ ಒಡನಾಟ... ಇವೆಲ್ಲಕ್ಕಿಂತ ಹೆಚ್ಚಾಗಿ ತೀರ ಇತ್ತೀಚೆಗೆ, ಅಂದರೆ 90ರ ದಶಕದ ಅಂತ್ಯದಿಂದ ಐ.ಟಿ. ಲೋಕದ ಗಣ್ಯರ ಒಡನಾಟ, ಆ ಮೂಲಕ ದೇಶದ ವಾಣಿಜ್ಯೋದ್ಯಮಿಗಳ ನಿಕಟ ಸಂಪರ್ಕ... ಈ ಎಲ್ಲವೂ ಅವರಿಗೆ ಅನುಕೂಲಕರವಾಗಿ, ಸೋನಿಯಾ, ಮನಮೋಹನರಿಗೆ ಇನ್ನಷ್ಟು ಹತ್ತಿರ ತಂದವು. 1999ರಲ್ಲಿ ದಿಢೀರನೆ ಎಂಬಂತೆ ರಾಜ್ಯ ಕಾಂಗ್ರೆಸ್ ಚುನಾವಣಾ ಸಾರಥ್ಯವನ್ನು ಪಡೆದುಕೊಂಡು ಪಾಂಚಜನ್ಯ ಮೊಳಗಿಸಿ ಕಣಕ್ಕೆ 'ಇಳಿದ' ಈ ಕೃಷ್ಣ ಪರಮಾತ್ಮರಿಗೆ ಆರಾಮಾಗಿ 'ಒಲಿದು' ಬಂತು ಮುಖ್ಯಮಂತ್ರಿ ಪಟ್ಟ. ಮುಂದೆ ಅವರು ಐ.ಟಿ, ಬಿ.ಟಿ ಗುಂಗಿನಲ್ಲಿ ಬೆಂಗಳೂರಿನಲ್ಲಿ ಸಾಕಷ್ಟು ಕೆಲಸ ಮಾಡಿದ್ದು ನಿಜವೇ. ಆದರೆ ವಿಶಾಲ ಕರ್ನಾಟಕದ ಜನಹಿತ ಕಡೆಗಣಿಸಿದ್ದರಿಂದ ರಾಜ್ಯದಲ್ಲಿ ಕಾಂಗ್ರೆಸ್ ಬಹುಮತ ಕಳೆದುಕೊಳ್ಳುವಂತಾಯ್ತು... ಮುಂದೆ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರ ಬರುವಂತಾಗಿ, ದೇವೇಗೌಡರ ಅಘೋಷಿತ ಶರತ್ತುಗಳ ಕಾರಣಗಳಿಂದ ಕೃಷ್ಣ ರಾಜ್ಯ ರಾಜಕಾರಣದಿಂದ ತೆರೆಮರೆಗೆ ಸರಿಯಬೇಕಾಗಿತು. ಆದರೆ...?



ಹೇಳಿಕೇಳಿ ಅಲೆಮಾರಿ ಅಧಿಕಾರಸ್ಥ ರಾಜಕಾರಣಿಯಲ್ಲವೇ? 2004ರಿಂದ 2009ರವರೆಗೆ ತಣ್ಣಗೆ ಮಹಾರಾಷ್ಟ್ರದ ರಾಜ್ಯಪಾಲರಾಗಿ ಹೈಕಮಾಂಡ್‌ಗೆ ಹತ್ತಿರವಾಗಲು ಎಲ್ಲ ಕಸರತ್ತು ನಡೆಸಿದರು. ನಂತರ ರಾಜ್ಯಸಭೆಗೆ ಎಂಟ್ರಿ ಪಡೆದರು. ಮೊನ್ನೆಯ ಚುನಾವಣೆಗೆ ಮೊದಲು ತಮ್ಮ ಅನುಯಾಯಿಗಳಾದ ದೇಶಪಾಂಡೆ, ಡಿ.ಕೆ.ಶಿವಕುಮಾರಗಳ ಕೈಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸಿಗುವಂತೆ ನೋಡಿಕೊಂಡರು. ಆದರೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಮಣ್ಣು ಮುಕ್ಕಿದರೂ, ದೆಹಲಿಯಲ್ಲಿ ಕೃಷ್ಣರ ವಿಗ್ ಕಳಚಲಿಲ್ಲ. ಲೋಕಸಭಾ ಚುನಾವಣೆ ವೇಳೆ ಮತ್ತೆ ರಾಜ್ಯಕ್ಕೆ ಧಾವಿಸಿದ ಕೃಷ್ಣರಿಂದ ಕಾಂಗ್ರೆಸ್‌ಗೇನೂ ಲಾಭವಾಗಲಿಲ್ಲ. ತಮ್ಮ ಸ್ವಸಾಮರ್ಥ್ಯ ಮತ್ತು ಸ್ಥಳೀಯ ಅಂಶಗಳಿಂದಾಗಿ ಆರು ಜನ ಕಾಂಗ್ರೆಸ್‌ನಿಂದ ಚುನಾಯಿತರಾದರು. ಇಂತಹ ವೇಳೆ ಈ ಕೃಷ್ಣರಿಗೆ ಸಚಿವ ಸ್ಥಾನ ಸಿಗುವುದನ್ನು ನೆನೆಸಿಕೊಳ್ಳುವುದೂ ಅಸಾಧ್ಯವಾಗಿತ್ತು. ಆದರೆ ಅವರ ಹೈಟೆಕ್ ಇಮೇಜ್ ಅವರಿಗೆ ಕೊನೇ ಕ್ಷಣದಲ್ಲಿ ಸಚಿವಗಿರಿ ತಂದು ಕೊಟ್ಟಿದೆ.

ಅದಕ್ಕೇ ನಾವು ಹೇಳಿದ್ದು ದೇಶಾವರಿಗೆ ವಿದೇಶಾಂಗ ಖಾತೆ ಎಂದು. ಇಷ್ಟು ದಿನ ದೆಹಲಿ, ಮುಂಬೈ, ಬೆಂಗಳೂರುಗಳಂತಹ ಅಧಿಕಾರ ಕೇಂದ್ರಗಳ ನಡುವೆ ಓಡಾಡಿಕೊಂಡಿದ್ದ ದೇಶಾವರಿ ಕೃಷ್ಣರೀಗ 'ವಿದೇಶಾವರಿ'. ಇನ್ನು ಅವರ ಓಡಾಟ, sorry sorry, ಹಾರಾಟವೆಲ್ಲ ದೆಹಲಿ, ವಾಷಿಂಗ್ಟನ್, ಪ್ಯಾರಿಸ್ etcಗಳ ಮಧ್ಯೆ!


ಈಗ ಅಲ್ಲಿ ವಿಶೇಷ ಸಾಧನೆ ಮಾಡಲಾದರೂ ಅವರಿಗೆ ಅವಕಾಶವೆಲ್ಲಿದೆ? ಬಹುಕಾಲದಿಂದ ವಿದೇಶಾಂಗ ವ್ಯವಹಾರದ ನೀತಿನಿಯಮಗಳನ್ನೆಲ್ಲ ನಿರ್ಧರಿಸುತ್ತಿರುವುದು ಪ್ರಧಾನಮಂತ್ರಿ ಕಾರ್ಯಾಲಯ (P.M.O) ಪ್ರಣಬ್ ಮುಖರ್ಜಿ ಮಾತ್ರ ತಮ್ಮ ಅನುಭವ, ಪ್ರಭಾವದ ಮೂಲಕ ಕಷ್ಟಪಟ್ಟು ಇಡೀ ಇಲಾಖೆಯ ಮೇಲೆ ಹಿಡಿತ ಸಾಧಿಸಿದ್ದರು. ದೃಢ ಮನಸ್ಸು ಮಾಡಿದರೆ ಕೃಷ್ಣರಿಗೂ ಅದು ಸಾಧ್ಯ.

ಇದೆಲ್ಲ ಇರಲಿ, ಭಾರತದ ವಿದೇಶಾಂಗ ನೀತಿ ಫಿಕ್ಸ್ ಆಗಿಬಿಟ್ಟಿದೆಯಲ್ಲವೆ? ಅಮೆರಿಕಾ ಅಧೀನದಲ್ಲಿರುವುದು, ಆ ಕಾರಣಕ್ಕೆ ಇಸ್ರೇಲ್‌ನ ಮಿಲಿಟರಿ ಸಹಕಾರ ಪಡೆಯುವುದು, ಮುಸ್ಲಿಂ ರಾಷ್ಟ್ರಗಳನ್ನು ಸದಾ ಅನುಮಾನದಿಂದ ನೋಡುವಂತೆ ಬಿಂಬಿಸುವುದು, ವಿಶ್ವ ವಾಣಿಜ್ಯದಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ನೆರವಾಗುತ್ತಾ ಈ ದೇಶದ ಶ್ರಮಿಕರ ಶೋಷಣೆ ಮಾಡುವುದು... ಹೀಗೇ ಸಾಗುವ ನಮ್ಮ ವಿದೇಶಾಂಗ ನೀತಿಯನ್ನು ಕಾಂಗ್ರೆಸ್, ಬಿಜೆಪಿಗಳು ಮತ್ತು ಇತರ ಪ್ರಾದೇಶಿಕ ಪಕ್ಷಗಳು (ಕಮ್ಯುನಿಸ್ಟರನ್ನು ಬಿಟ್ಟು) ಸಂಪೂರ್ಣ ಒಪ್ಪಿಕೊಂಡಿರುವುದರಿಂದ ಅಲ್ಲಿ ಕೃಷ್ಣರಿಗೆ ಹೊಸ ಭರವಸೆ ಮೂಡಿಸುವ, ಸಾಧನೆ ಮಾಡುವ ಅವಕಾಶಗಳೇ ಕಡಿಮೆ.

ನಮ್ಮ ನೆರೆ ರಾಷ್ಟ್ರಗಳೊಂದಿಗಿನ ಸಂಬಂಧವನ್ನು ಗಟ್ಟಿಗೊಳಿಸುವ ತುರ್ತು ಕೆಲಸದಲ್ಲಿ ಕೂಡಲೇ ತೊಡಗಿಸಿಕೊಳ್ಳುವ ಮೂಲಕ ಕೃಷ್ಣ ಕಾರ್ಯಪ್ರವೃತ್ತರಾಗಲಿ ಮತ್ತು ರಾಜ್ಯಕ್ಕೆ ಕೇಂದ್ರದಿಂದ ಹೆಚ್ಚಿನ ನೆರವು ಕೊಡಿಸಲು ಮುಂದಾಗಲಿ ಎಂದು ಸದ್ಯಕ್ಕೆ ಆಶಿಸಬಹುದಷ್ಟೇ.

● ಪಿ.ಕೆ.ಮಲ್ಲನಗೌಡರ್

ಮುಂದಿನ ವಾರ ಮಾರುಕಟ್ಟೆಯಲ್ಲಿ




ಓ ಈಳಂ ಪುಸ್ತಕ

ಶ್ರೀಲಂಕಾದ ತಮಿಳರ ನಾಯಕ ಪ್ರಭಾಕರನ್‌ನ ಬದುಕು ಮತ್ತು ಸಾವು. ಈಳಂ ಜನರ ಮೇಲೆ ಸಿಂಹಳೀಯರ ದೌರ್ಜನ್ಯ ಮತ್ತು ಸ್ವಾಭಿಮಾನದ ಬದುಕಿಗಾಗಿ ಅವರು ನಡೆಸಿದ ಹೋರಾಟ, ಇವೆಲ್ಲವನ್ನು ಕುರಿತ ಸಮಗ್ರ ಪುಸ್ತಕವೊಂದನ್ನು ಲಂಕೇಶ್ ಪ್ರಕಾಶನ ಪ್ರಕಟಿಸುತ್ತಿದೆ. ಮುಂದಿನ ವಾರವೇ ಇದು ಮಾರುಕಟ್ಟೆಯಲ್ಲಿ ಲಭ್ಯವಿರುತ್ತದೆ. ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಮೈಷುಗರ್ ಪುನಶ್ಚೇತನ ಸಾಧ್ಯವಾ?

ಅವಿವೇಕಿ ನಾಗರಾಜಪ್ಪನ ಅಡ್ನಾಡಿ ಕ್ರಮಗಳು



ಭಾಗ 1


ಸರ್ಕಾರಿ ಸ್ವಾಮ್ಯದ ಹತ್ತಾರು ಕಾರ್ಖಾನೆಗಳು ಈ ರಾಜ್ಯದಲ್ಲಿ ಮುಚ್ಚಿಕೊಂಡಿವೆ. ಆಡಳಿತ ಮಂಡಳಿಗಳ ಭ್ರಷ್ಟಾಚಾರ, ಸರ್ಕಾರೀ ವ್ಯವಸ್ಥೆಯ ಪುರಾತನ ರೋಗಗಳ ಜೊತೆಗೆ ಜಾಗತೀಕರಣವೆಂಬ ಖಾಸಗೀಕರಣ ನೀತಿ ಅವಕ್ಕೆ ಮುಖ್ಯ ಕಾರಣಗಳಾಗಿವೆ. ಆದರೆ ಮೈಷುಗರ್‌ನ ಕಥೆಯೇ ಬೇರೆ. ಮಂಡ್ಯ ಜಿಲ್ಲೆಯ ಇತಿಹಾಸದ ಚಕ್ರವನ್ನು ಬದಲಾಯಿಸಿದ ಮೂರು ಮುಖ್ಯ ಅಂಶಗಳಲ್ಲಿ ಮೈಷುಗರ್ ಸಹ ಒಂದು. ಅಂತಹ ಮೈಷುಗರ್ ಕಾರ್ಖಾನೆಗೆ ಮಂಡ್ಯದ ಮಣ್ಣಿನ ಮಗ ಯಡಿಯೂರಪ್ಪನವರು ಜಾತಿಬಾಂಧವ ನಾಗರಾಜಪ್ಪರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಇದೇ ಕಾರ್ಖಾನೆಯಲ್ಲಿ 20 ವರ್ಷಗಳ ಹಿಂದೆ ಉದ್ಯೋಗಿಯಾಗಿದ್ದು ಹೊರದಬ್ಬುವ ಮುನ್ನ, ರಾಜೀನಾಮೆ ನೀಡಿ ಹೊರನಡೆದಿದ್ದ ಈ ಶರಣ ಕುಲತಿಲಕ ಈಗ ಅಧ್ಯಕ್ಷರಾಗಿ ಮರಳಿ ಬಂದಿದ್ದಾರೆ. ಕಳೆದೊಂದೂವರೆ ತಿಂಗಳಿಂದ ಇವರು ಮಾಡಿಕೊಂಡಿರುವ ಭಾನಗಡಿಗಳು, ಮೈಷುಗರ್‌ನ ಭವ್ಯ ಇತಿಹಾಸಕ್ಕೆ ಮಸಿ ಬಳಿದಿವೆ. ಅಂತಿಮವಾಗಿ ಈ ನಾಗರಾಜಪ್ಪ ಮೈಷುಗರ್ ಉಳಿಸುತ್ತಾರಾ, ಇಲ್ಲಾ ಇದನ್ನು ಮುಚ್ಚಲೆಂದೇ ಇವರು ಅಧ್ಯಕ್ಷರಾಗಿ ಬಂದಿದ್ದಾ ಎಂಬ ಪ್ರಶ್ನೆ ಮಂಡ್ಯದ ಪ್ರಜ್ಞಾವಂತರದ್ದಾಗಿದೆ. ಈ ಕುರಿತು ಪ್ರಸ್ತುತ ಸಂಚಿಕೆಯಲ್ಲಿ ಬರೆಯಲಾಗಿದೆ.

ಮೈಷುಗರ್‌ಗೆ ಬಂದಿರುವ ಖಾಯಿಲೆ ಕೇವಲ ಮಾಜಿ ಕೇನ್ ಸೂಪರಿಂಟೆಂಡೆಂಟ್ ನಾಗರಾಜಪ್ಪರೆಂಬ ವೈರಸ್‌ನಿಂದ ಬಂದದ್ದಲ್ಲ. ಅದಕ್ಕೆ ಸಕ್ಕರೆ ಕಾಯಿಲೆಯೇ ಬಂದಿದೆ. ಕಬ್ಬು ಮತ್ತು ಸಕ್ಕರೆ ಎನ್ನುವುದೇ ಮಂಡ್ಯದಿಂದ ಮರೆಯಾಗಿಬಿಡಬಹುದು ಎಂಬ ಆತಂಕ ಇಂದು ಆವರಿಸಿದೆ. ಕರ್ನಾಟಕದ ಪ್ರಮುಖ ವಿದ್ಯಮಾನಗಳಲ್ಲಿ ಇದೊಂದು ಎಂದೆನಿಸಿದ್ದರಿಂದ 'ಲಂಕೇಶ್' ಮೂರು ಕಂತುಗಳಲ್ಲಿ ಇದರ ಕುರಿತ ಮಾಹಿತಿ ಪೂರ್ಣ ವಿಶ್ಲೇಷಣೆಯನ್ನು ನಿಮ್ಮ ಮುಂದಿಡಲಿದೆ.

ಏಕಕಾಲದಲ್ಲಿ ಪುಣ್ಯಕೋಟಿ ಎಂಬ ಬಿರುದು, ಬಾಯಿಗೊಂದಿಷ್ಟು ಮೊಸರು ಎರಡನ್ನೂ ಸಂಪಾದಿಸುವ ಆಸೆ ಕೆಲವರದ್ದಾಗಿರುತ್ತದೆ. ಮೊಸರಿನ ಜೊತೆ ಕೆಸರನ್ನೂ ತಿನ್ನಬೇಕಾಗುತ್ತದೆ ಎಂಬ ಅರಿವಿಲ್ಲದೆ ಅವರು ನಡೆಸುವ ಭ್ರಷ್ಟಾಚಾರ, ಅಕ್ರಮಗಳು ಹೊರಬಿದ್ದಾಗ ಮೈ ಪರಚಿಕೊಳ್ಳುತ್ತಾರೆ. ಮಂಡ್ಯ ಬಿಜೆಪಿಯ ಪುರಾತನ ಶರಣ, ಹಾಲಿ ಮೈಷುಗರ್ ಅಧ್ಯಕ್ಷ ನಾಗರಾಜಪ್ಪ ಈ ಟೈಪಿಗೆ ಸೇರಿದವರು. ಅರ್ಧರಾತ್ರಿಯಲ್ಲಿ ಅಧಿಕಾರ ಬಂದಾಗ ಬಿಜೆಪಿಯವರು ಯಾವ ರೀತಿ ಆಡುತ್ತಾರೆ ಎಂಬುದನ್ನು ಕಣ್ಣಾರೆ ನೋಡಬೇಕೆಂದರೆ ನೀವೊಮ್ಮೆ ಮಂಡ್ಯಕ್ಕೆ ಬಂದು ಕಳೆದ ಒಂದು ತಿಂಗಳಿಂದ ತಮ್ಮ ತಿಕ್ಕಲು ವರ್ತನೆಗಳಿಂದ ಸುದ್ದಿಯಲ್ಲಿರುವ ನಾಗರಾಜಪ್ಪನನ್ನು ನೋಡಬೇಕು.

1933ರಷ್ಟು ಹಿಂದೆಯೇ ಪ್ರಾರಂಭವಾಗಿ, ಬೃಹತ್ತಾಗಿ ಬೆಳೆದು, ಮಂಡ್ಯವೆಂಬ ಜಿಲ್ಲೆಗೆ ಸಕ್ಕರೆ ಜಿಲ್ಲೆ ಎಂಬ ಖ್ಯಾತಿ ತಂದು ಕೊಟ್ಟದ್ದು ಇದೇ ಮೈಷುಗರ್ ಕಾರ್ಖಾನೆ. ಜಾಗತೀಕರಣ ನೀತಿಯ ಭಾಗವಾಗಿ ಸರ್ಕಾರೀ ಕಾರ್ಖಾನೆಗಳೆಲ್ಲವನ್ನೂ ನಷ್ಟಕ್ಕೆ ದೂಡುತ್ತಿದೆ. ಮೈಷುಗರ್ ಕೂಡಾ ಅದಕ್ಕೆ ಹೊರತಲ್ಲ. ನಷ್ಟದಲ್ಲಿರುವ ಸಾರ್ವಜನಿಕ ಕ್ಷೇತ್ರ ಕಾರ್ಖಾನೆ ಎಂಬ ಪಟ್ಟ ಹೊತ್ತು, ಇಂತಹ ಕಾರ್ಖಾನೆಗಳನ್ನು ಮುಚ್ಚುವುದಾ ಅಥವಾ ಏನಾದರೂ ಮಾಡಬಹುದಾ ಎಂದು ತೀರ್ಮಾನಿಸುವ ಕೇಂದ್ರ ಸರ್ಕಾರದಡಿಯ ಬಿಐಎಫ್‌ಆರ್ ಸಂಸ್ಥೆಯ ಮುಂದೆ ಮೈಷುಗರ್ ಹೋಗಿದ್ದು 2004ರಲ್ಲಿ. ಏನೇ ಕೊರತೆಗಳಿದ್ದರೂ ಅಲ್ಲಿಯವರೆಗೆ ಮೈಷುಗರ್ ಸಿಹಿಯಾಗಿಯೇ ಇತ್ತು. ಅಲ್ಲಿಂದಾಚೆಗೆ ಏನೇನೋ ತಾರಾತಿಗಡಿಗಳು ನಡೆದು, ಬೂಕನಕೆರೆ ಯಡಿಯೂರಪ್ಪನೆಂಬ ಮಂಡ್ಯದ 'ಮಣ್ಣಿನ ಮಗ' ಅಧಿಕಾರಕ್ಕೆ ಬರುವ ಹೊತ್ತಿಗೆ 'ಮಂಡ್ಯ ಸಕ್ರೆ ಪ್ಯಾಕ್ಟ್ರಿ' ಮುಚ್ಚಬಿಡ್ತಾರೆ ಎಂಬ ಸುದ್ದಿಯು ಹರಿದಾಡಲಾರಂಭಿಸಿತ್ತು. ಮಾಡ್ರನ್ ಬ್ರೆಡ್ ಕಾರ್ಖಾನೆ, ಮೈಸೂರು ಲ್ಯಾಂಪ್ಸ್, ಮಂಡ್ಯದ್ದೇ ಅಸಿಟೇಟ್ ಕಾರ್ಖಾನೆಗಳೆಲ್ಲವನ್ನೂ ಮುಚ್ಚಿದಷ್ಟು ಸುಲಭವಲ್ಲ ಇದನ್ನು ಮುಚ್ಚುವುದು. ಇದೊಂಥರಾ ಕೋಲಾರದ ಚಿನ್ನದ ಗಣಿ ಮುಚ್ಚಿದಂಗೆ. ಒಂದು ವೇಳೆ ಮುಚ್ಚಿ, ಖಾಸಗಿಯವರಿಗೆ ಕೊಟ್ಟು ಬಿಡುವುದಾದರೂ, ಅದಕ್ಕೆ ಮುನ್ನ ಮಾಡಬೇಕಾದ್ದೆಲ್ಲವನ್ನೂ ಮಾಡಿ, ಶಾಸ್ತ್ರೋಕ್ತವಾಗಿ ಗೋಳಾಡಿದ ನಂತರವೇ ಅದು ಸಾಧ್ಯ.

ಜನವರಿಯ ಹೊತ್ತಿಗೆ ಬಿಜೆಪಿಯ ಜಿಲ್ಲಾ ನಾಯಕ ನಾಗರಾಜಪ್ಪನನ್ನು ಯಡ್ಡಿ ಮೈಷುಗರ್‌ಗೆ ಅಧ್ಯಕ್ಷರನ್ನಾಗಿ ಮಾಡಿದರು. ಈ ಕುರ್ಚಿಯೇರುವುದಕ್ಕೆ ನಾಗರಾಜಪ್ಪನ ಹತ್ತಿರ ಇದ್ದುದು ಎರಡು ಕ್ವಾಲಿಫಿಕೇಶನ್‌ಗಳು. ಮೊದಲನೆಯದ್ದು ಮತ್ತು ಅತೀ ಮುಖ್ಯವಾದದ್ದು ಎಂದರೆ ಆತ ಯಡಿಯೂರಪ್ಪನವರ ಸ್ವಜಾತಿ ಬಾಂಧವ ಎಂಬುದು. ಹಾಗೇ ನೋಡಿದರೆ ಈವತ್ತಿನ ಕರ್ನಾಟಕದಲ್ಲಿ ಯಾವುದೇ ಅತೀ ಮುಖ್ಯ ಸರ್ಕಾರಿ ಹುದ್ದೆ ಏರಬೇಕೆಂದರೆ ಇದು ಅತೀ ಮುಖ್ಯ ಕ್ವಾಲಿಫಿಕೇಶನ್ ಆಗಿದೆ. ಇನ್ನು ನಾಗರಾಜಪ್ಪಾಗಿದ್ದ ಎರಡನೇ ಕ್ವಾಲಿಫಿಕೇಶನ್ ಎಂದರೆ ಈತ ಇದೇ ಫ್ಯಾಕ್ಟರಿಯಲ್ಲಿ 17 ವರ್ಷ ಕೇನ್ ಸೂಪರಿಂಟೆಂಡೆಂಟ್ ಆಗಿ ಕೆಲಸ ಮಾಡಿದ್ದರು. ಅಲ್ಲಿ ಈತ ಪುಷ್ಕಳವಾಗಿ



ಮೈಷುಗರ್ ಕಾರ್ಖಾನೆ...

ಮೇಯ್ದು ಅದೇ ಕಾರಣಕ್ಕೆ ಇನ್ನೇನು ಕಾರ್ಖಾನೆಯಿಂದ ಹೊರದಬ್ಬಲಾಗುತ್ತೆ ಅನ್ನೋ ಹೊತ್ತಿನಲ್ಲಿ ರಾಜೀನಾಮೆ ಕೊಟ್ಟು ಹೊರನಡೆದಿದ್ದ.


ಇಂತಹ ಅಮೋಘ ಇತಿಹಾಸವುಳ್ಳ ನಾಗರಾಜಪ್ಪರನ್ನು ಮಂಡ್ಯ ಜಿಲ್ಲೆಯ ಶುಗರ್ ಫ್ಯಾಕ್ಟರಿಗೆ ಅಧ್ಯಕ್ಷರನ್ನಾಗಿ ತರಬೇಕೆಂದು ಯಡಿಯೂರಪ್ಪನವರಿಗೆ ಆ ಸಿದ್ಧಲಿಂಗೇಶ್ವರ ಯಾಕಾಗಿ ಬುದ್ಧಿ ಕೊಟ್ಟನೋ ಗೊತ್ತಿಲ್ಲ, ಒಟ್ಟನಲ್ಲಿ ನಾಗರಾಜಪ್ಪನವರು ಸಕಲ ಭಾಜಾ, ಭಜಂತ್ರಿ ಮತ್ತು ಭಟ್ಟಂಗಿಗಳೊಂದಿಗೆ ಮೈಷುಗರ್ ಕಾರ್ಖಾನೆಗೆ ಬಿಜಯಂಗೈದರು. ಮಂಡ್ಯದ ಜನರು ಸಿನಿಕರಲ್ಲ, ಹಳೆಯ ಎಡವಟ್ಟುಗಳನ್ನು ಬಹುಬೇಗ ಮರೆತುಬಿಡುತ್ತಾರೆ. ಹಾಗಾಗಿ, ಇವರು ಅಧಿಕಾರ ವಹಿಸಿಕೊಂಡಾಗ ಪಕ್ಷಭೇದವನ್ನೆಲ್ಲಾ ಮರೆತು ಖುಷಿ ಪಟ್ಟರು. ಕಾರ್ಖಾನೆಯಲ್ಲೇ ದುಡಿದ ಅನುಭವವಿದ್ದ ಇವರು ಇದನ್ನು ಸರಿಯಾದ ದಾರಿಗೆ ತರಬಹುದು ಎಂದು ಭಾವಿಸಿದರು. ಇದುವರೆಗೆ ಬಂದು ಹೋದ ಹಲವಾರು ಎಂಡಿಗಳು, ಐಎಎಸ್ ಅಥವಾ ಐಪಿಎಸ್ ಅಧಿಕಾರಿಗಳಿಗಿರುತ್ತಿದ್ದರು. ಅವರಿಗೆ ತಾಂತ್ರಿಕ ಜ್ಞಾನ ಇಲ್ಲದಿರುವುದರಿಂದಲೇ ಕಾರ್ಖಾನೆ ನೆಟ್ಟಗಾಗುತ್ತಿಲ್ಲ ಎಂಬ ಅಭಿಪ್ರಾಯ ಬೇರೆ ಇತ್ತು, ಅದಕ್ಕೆ ಸರಿಯಾಗಿ ನಾಗರಾಜಪ್ಪ "ಮೈಷುಗರ್‌ಅನ್ನು ಮತ್ತೆ ಹಳೆಯ ವೈಭವಕ್ಕೆ ತೆಗೆದುಕೊಂಡು ಹೋಗುವುದೇ ನನ್ನ ಗುರಿ'' ಎಂದು ಘೋಷಿಸಿದರು.

ಮಂಡ್ಯದಲ್ಲಿ 'ಮಂಡ್ಯ ಶಿಲ್ಪಿ' ಎಂದು ಕರೆಸಿಕೊಳ್ಳುತ್ತಿರುವ ರಾಜಕಾರಣಿಗಳ ಸಂಖ್ಯೆ ದೊಡ್ಡದಿದೆ. ಕೆ.ವಿ.ಶಂಕರೇಗೌಡರಿಗೆ ಅವರಿವರು ಆ ಬಿರುದು ಕೊಟ್ಟರೆ, ಹೆಚ್.ಡಿ.ಚೌಡಯ್ಯನವರು ತಾವು ಬದುಕಿದ್ದಾಗಲೇ, ತಾವೇ ಅಧ್ಯಕ್ಷರಾಗಿರುವ ಸಂಸ್ಥೆಯ ಆವರಣದಲ್ಲೇ ತಮ್ಮ ಪ್ರತಿಮೆಯನ್ನು ಹಾಕಿಸಿಕೊಂಡು ಬಿಟ್ಟರು. ಎಸ್.ಡಿ.ಜಯರಾಂಗೂ ಈ ಮಾತನ್ನು ಹೇಳುವುದುಂಟು. ಇನ್ನು ಚೆಲುವರಾಯಸ್ವಾಮಿಯಂಥ ಚೆಲುವರಾಯಸ್ವಾಮಿಗೇ 'ಮಂಡ್ಯ ಶಿಲ್ಪಿ' ಎನ್ನುತ್ತಿರುವಾಗ, ತಾನೇಕೆ ಹಿಂದೆ ಬೀಳಬೇಕು ಎಂದು ನಾಗರಾಜಪ್ಪ ಯೋಚಿಸಿದರು. ನಷ್ಟದಲ್ಲಿದ್ದ ಕಾರ್ಖಾನೆಯಲ್ಲಿ ಪೈಸಾ ದುಡ್ಡಿಲ್ಲದಿದ್ದರೂ ಹೊಸ ಹೊಸ ಯೋಜನೆಗಳನ್ನು ಘೋಷಿಸಿದರು. ಸಿಎಂ ಯಡ್ಡಿಯ ಹತ್ತಿರ ಹೋಗಿ 'ಹೆಂಗಾರ ಮಾಡಿ ಒಂದ್ಯವತ್ತು ಕೋಟಿ ಕೊಡಿ' ಎಂದು ಬೇಡಿಕೊಂಡರು. ಬಜೆಟ್ ಭಾಷಣದಲ್ಲಿ ಸಿಎಂ ಕಂ ಎಫ್‌ಎಂ ಆಗಿದ್ದ ಯಡ್ಡಿ ತಥಾಸ್ತು ಎಂದರು. ಆ ದುಡ್ಡು ಬಂದು ಸೇರುವ ಮುನ್ನವೇ (ಇವತ್ತಿನವರೆಗೂ ಬಂದಿಲ್ಲ) ಇಲ್ಲಿ ಘೋಷಣೆಗಳು ಮೊಳಗಿದವು. 'ವಿದ್ಯುತ್ ತಯಾರಿಸುವ ಕೋಜನರೇಷನ್ ಅನ್ನು ಜುಲೈಗೆ ಪ್ರಾರಂಭಿಸುತ್ತೇನೆ', 'ಮೈಷುಗರ್‌ನ ಹಳೆಯ ಬ್ರಾಂಡ್‌ಗಳಾದ ಮೈರಂ, ಮೈವಿಸ್ಕಿಗಳನ್ನು ತಯಾರಿಸಿ ದಿನಕ್ಕೆ ಒಂದು ಕೋಟಿ ಲಾಭ ಮಾಡುತ್ತೇನೆ', 'ಮೈ ಮಿನರಲ್ ವಾಟರ್‌ಅನ್ನೂ ತಯಾರಿಸುತ್ತೇವೆ' ಇತ್ಯಾದಿ. ಇಷ್ಟೆಲ್ಲಾ ಮಾಡಲು ರೈತರು ಕಬ್ಬು ತಂದು ಹಾಕಬೇಕಲ್ಲಾ? ಕಳೆದ ಸಾರಿ ಘೋಷಿತ ರೇಟನ್ನು ಕೊಡಲೂ ಸತಾಯಿಸಿದ ಸರ್ಕಾರದ ನೀತಿಗೆ ಬೇಸತ್ತು ಈ ಬಾರಿ ಕಬ್ಬು ಬೆಳೆದದ್ದೇ ಕಡಿಮೆ. ಅದರ ಜೊತೆಗೆ ಸಕ್ಕರೆ ಮತ್ತು ಬೆಲ್ಲದ ರೇಟೂ ಏರಿದ್ದರಿಂದ ಇದ್ದಬದ್ದ ಕಬ್ಬನ್ನೂ ಆಲೆಮನೆಯವರೂ, ಅಕ್ಕಪಕ್ಕದ ಖಾಸಗಿ ಕಾರ್ಖಾನೆಯವರೂ ಹೊತ್ತೊಯ್ಯುತ್ತಿದ್ದರು. ಹೀಗಾಗಿ ನಾಗರಾಜಪ್ಪ ಇನ್ನೂ ಒಂದು ಐಡಿಯಾ ಮಾಡಿದರು. ಥೇಟ್ ಕುಮಾರಸ್ವಾಮಿ ಸ್ಟೈಲಿನಲ್ಲಿ 'ಕಬ್ಬನ್ನು ನಮ್ಮ ಫ್ಯಾಕ್ಟರಿಗೇ ಹೊಡೆಯಲು ಗ್ರಾಮ ವಾಸ್ತವ್ಯ ಮಾಡುತ್ತೇನೆ' ಎಂದುಬಿಟ್ಟರು. ಚುನಾವಣಾ ನೀತಿಸಂಹಿತೆ ಬೇರೆ ಅಡ್ಡ ಬಂದರೂ ಬಿಡದೆ, ವಿಶೇಷ ಪರವಾನಗಿ ಪಡೆದು ಗ್ರಾಮ ವಾಸ್ತವ್ಯವನ್ನು ಸಕಲ ಪ್ರಚಾರ ಸಾಮಗ್ರಿಗಳೊಂದಿಗೆ ಚಾಲೂ ಮಾಡಿಯೇ ಬಿಟ್ಟರು.

ಇತ್ತ ಕಡೆ ಮೈ ರಮ್, ಮೈ ವಿಸ್ಕಿಗಳೂ ತಯಾರಾದವು. ಆದರೆ ಹೊಸ ಬ್ರಾಂಡ್ ಬಿಕರಿಯಾಗಲಿಲ್ಲ. ಲೋಡುಗಟ್ಟಲೆ ಮಾಲು ಗೋಡೌನ್‌ನಲ್ಲೇ ಉಳಿಯಿತು.

▶▶▶

ಸಸ್ಪೆಂಡಾಗಲಿದ್ದ ನೌಕರನೇ ಅಧ್ಯಕ್ಷ!




ಮಂಡ್ಯದ ವೀರಶೈವ ವಿದ್ಯಾರ್ಥಿ ನಿಲಯ

ನಾಗರಾಜಪ್ಪ ಕೇನ್ ಸೂಪರಿಂಟೆಂಡೆಂಟ್ ಆಗಿದ್ದು ರಾಜೀನಾಮೆ ಕೊಡಬೇಕಾಗಿ ಬಂದದ್ದರ ಬಗ್ಗೆ ಅಧಿಕೃತ ಮೂಲದ ಕಾರಣವೇನು ಗೊತ್ತೇ? ಮೈಷುಗರ್‌ಗೆ ಬರಬೇಕಿದ್ದ ಕಬ್ಬನ್ನು ಹಬೀಬ್ ಖಂಡಸಾರಿಯ ಫ್ಯಾಕ್ಟರಿಗೆ ಸಾಗಿಸಿದರು ಎಂಬ ಆರೋಪ ಇವರ ಮೇಲೆ ಇತ್ತು. ತನ್ನದೇ ಕುಟುಂಬದ ಒಡೆತನದ ಚೇತನ್ ಉದ್ಯೋಗ್ ಲಿಮಿಟೆಡ್ ಎಂಬ ಕೈಗಾರಿಕೆಯನ್ನು ತೂಬಿನಕೆರೆ ಇಂಡಸ್ಟ್ರಿಯಲ್ ಏರಿಯಾದಲ್ಲಿ ನಾಗರಾಜಪ್ಪ ನಡೆಸುತ್ತಿದ್ದರು. ಮೈಷುಗರ್ ಕಾರ್ಖಾನೆಗೆ ಸಂಬಂಧಪಟ್ಟ ವಾಹನಗಳಲ್ಲಿ ಈ ಕೈಗಾರಿಕೆಗೆ ಪೈಪ್‌ಗಳನ್ನು ಸಾಗಿಸುತ್ತಿದ್ದಾಗ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದರು. ಆಗ ಜನರಲ್ ಮ್ಯಾನೇಜರ್ ಆಗಿದ್ದವರು ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿ ರಾಮೇಗೌಡರು. ಅವರು ನಾಗರಾಜಪ್ಪರನ್ನು ಸಸ್ಪೆಂಡ್ ಮಾಡಲು ಶಿಫಾರಸು ಮಾಡಿ ಮೇಲಧಿಕಾರಿಗಳಿಗೆ ಪತ್ರ ಬರೆದರು. ಇದನ್ನು ತಿಳಿದ ನಾಗರಾಜಪ್ಪ ಕೂಡಲೇ ರಾಜೀನಾಮೆ ಬರೆದು ಫ್ಯಾಕ್ಟರಿಯಿಂದ ಓಡಿಬಿಟ್ಟರು.

ಸಸ್ಪೆಂಡಾಗುವುದಕ್ಕೆ ಮುಂಚೆ ನಾಗರಾಜಪ್ಪ ಮೈಷುಗರ್ ಹುದ್ದೆಯನ್ನು ಯಾವ ಯಾವ ರೀತಿಯಲ್ಲಿ ಕುಟುಂಬದ ಸೇವೆಗೆ ಬಳಸಿದ್ದರೆನ್ನುವುದರ ಬಗ್ಗೆ ಈಗಲಾದರೂ ತನಿಖೆ ನಡೆಯಬೇಕಿದೆ. ಮಂಡ್ಯ-ಬನ್ನೂರು ಮಾರ್ಗದ ಗಾಮನಹಳ್ಳಿ-ಲಾಳನಕೆರೆ ಹತ್ತಿರದಲ್ಲಿ ನಾಗರಾಜಪ್ಪನ ತಮ್ಮ ರತ್ನಪ್ಪನ ಒಡೆತನದಲ್ಲಿ ಖಂಡಸಾರಿ ಫ್ಯಾಕ್ಟರಿ ನಡೆಯುತ್ತಿತ್ತು, ಹಬೀಬ್ ಖಂಡಸಾರಿಗೆ ಸಾಗಿಸುತ್ತಿದ್ದಂತೆ ತನ್ನದೇ ಒಡೆತನದ ಫ್ಯಾಕ್ಟರಿಗೂ ಕಬ್ಬನ್ನು ಡೈವರ್ಟ್ ಮಾಡಲಾಗುತ್ತಿತ್ತು ಎಂದು ಫ್ಯಾಕ್ಟರಿಯ ಕಾರ್ಮಿಕರು ಹೇಳುತ್ತಾರೆ.


ಮಾತಿಗೆ ನಿಂತರೆ ಸದಾ ಬಸವಣ್ಣನವರ ವಚನಗಳನ್ನೇ ಉದುರಿಸುವ ನಾಗರಾಜಪ್ಪನವರಿಗೆ ಮಂಡ್ಯದ ವೀರಶೈವ ಸಮುದಾಯದೊಳಗೇ ತೀವ್ರ ವಿರೋಧವಿದೆ. ಬಸವ ಸಮಿತಿಯ ಅಧ್ಯಕ್ಷರಾಗಿದ್ದ ನಾಗರಾಜಪ್ಪ ವೀರಶೈವ ವಿದ್ಯಾರ್ಥಿ ನಿಲಯದ ಆಸ್ತಿಯನ್ನು ಖಾಸಗಿ ಟ್ರಸ್ಟ್ ಒಂದರ ಹೆಸರಿಗೆ ಮಾಡಿಕೊಂಡಿದ್ದಾರೆಂದು 5 ವರ್ಷಗಳ ಕೆಳಗೇ ಸಮುದಾಯದಲ್ಲಿ ವಿರೋಧ ಕೇಳಿಬಂತು. ಬಸವ ಜಯಂತಿ ಕಾರ್ಯಕ್ರಮ ಬಿಟ್ಟು ಇನ್ನೇನನ್ನೂ ಮಾಡದಿದ್ದ ಅಧ್ಯಕ್ಷರ ನಡವಳಿಕೆಯ ಬಗ್ಗೆ ಅಸಮಾಧಾನ ಮೂಡಿ, ನಂತರ ಬಸವ ಜಯಂತಿಗೂ ಯಾರೂ ಕಾಸು ಕೊಡಲಿಲ್ಲ, ಬಸವ ಸಮಿತಿಯ ಹಣಕಾಸಿನ ಲೆಕ್ಕಪತ್ರವನ್ನು ನೀಡದಿರುವುದೂ ಸೇರಿದಂತೆ ಹಲವು ಸಂಗತಿಗಳನ್ನು ವೀರಶೈವ ಮಹಾಸಭಾದವರು ಹೇಳುತ್ತಾರೆ.



Thanking you.
Yours faithfully,
MANAGING DIRECTOR

...ದಿಮೆ ಬೆಲೆಗೆ ಸಕ್ಕರೆ ಮಾರಾಟ.... ಸಕ್ಕರೆ ಸ್ಕ್ರಾಪ್ ಮಾರಲು ಅನುಮತಿಗಾಗಿ ಪತ್ರ..

ನಿರೀಕ್ಷೆ ಗೊಬ್ಬರ, ಕೊಟ್ಟಿದ್ದು ಗೋಲಿ ಏಟು ಅಂತ್ಲ ಸಾರ್

ಮುಂದಿನ ವರ್ಷಕ್ಕೆ ಕಬ್ಬು ಸರಾಸರಿಯ ಅರ್ಧದಷ್ಟೂ ಒಪ್ಪಿಗೆಯಾಗಲಿಲ್ಲ, ಕಬ್ಬು ಬರದೆ ಕೋಜನ ರೇಷನ್ (ವಿದ್ಯುತ್ ಉತ್ಪಾದನೆ) ಮಾಡುವುದೂ ಸಾಧ್ಯವಿಲ್ಲ, ನಷ್ಟದಲ್ಲಿರುವ ಕಾರ್ಖಾನೆ ಮೇಲೆ ಏಳುವುದೂ ಸಾಧ್ಯವಿಲ್ಲ, ಇಂತಹ ಸಂದರ್ಭ ದಲ್ಲೂ ಮುಂದಕ್ಕೆ ತೆಗೆದುಕೊಂಡು ಹೋಗಬೇ ಕೆಂದರೆ, ಸರ್ಕಾರದಿಂದ ಧಾರಾಳವಾಗಿ ಸಹಾಯಧನ ಹರಿದು ಬರಬೇಕು. ಗಣಿ ಧಣಿಗಳಿಗೂ, ಮಠಮಾನ್ಯಗಳಿಗೂ, ತಮ್ಮ ಸ್ವಂತ ಮಕ್ಕಳಿಗೂ ರಾಜ್ಯದ ಬೊಕ್ಕಸ ಹಂಚಿಕೊಟ್ಟಿರುವ ಸಿಎಂ ಯಡ್ಡಿ ಸಕ್ಕರೆ ಫ್ಯಾಕ್ಟ್ರಿಗೆ ಎಲ್ಲಿಂದಾ ಕೊಟ್ಟಾರು ದುಡ್ಡಾ? ಇನ್ನುಳಿದದ್ದು ಮೈಷುಗರ್ ಆಸ್ತಿ ಮಾರುವುದು. ಕೊನೆಗೆ ಯಡಿಯೂರಪ್ಪ ಮಾಡುವುದು ಅದನ್ನೇ ಆದರೂ, ಅರ್ಜೆಂಟಾಗಿ ಮಾರಿಬಿಡುವುದು ಕಷ್ಟವಿತ್ತು, ಅದಕ್ಕೆ ನಾಗರಾಜಪ್ಪ ಹೊಸದೊಂದು ಹಾದು ಹರುವಿಟ್ಟುಕೊಂಡರು.


ಅಶ್ವತ್ಥನಾರಾಯಣರೆಡ್ಡಿ


ಕೃಷ್ಣ

ಹಳೇ ಪೇಪರ್, ಹಳೇ ಕಬ್ಣಾ!

ಮೈಷುಗರ್‌ನಲ್ಲಿ ಬಿದ್ದಿದ್ದ ಹಳೇ ಪೇಪರ್, ಹಳೇ ಕಬ್ಬಿಣ (ಸ್ಕ್ರಾಪ್)ವನ್ನು ಮಾರಿ ಒಂದಷ್ಟು ಹಣನೂ ಗುಂಜಿಕೊಂಡು, ಫ್ಯಾಕ್ಟರಿಗೂ ಒಂದಷ್ಟು ಹಣ ಬಂದಂತೆ ತೋರಿಸುವ ಚಿಲ್ಲರೆ ವ್ಯವಹಾರಕ್ಕೆ ಕೈ ಹಾಕಿದರು. 347 ಟನ್ ಇದ್ದ ಕಬ್ಬಿಣವನ್ನು, ಗುಡ್ಡೆ ಲೆಕ್ಕದಲ್ಲಿ 200 ಟನ್ ಎಂದು ತೋರಿಸಿ ಮಾರಿಬಿಟ್ಟರು. ಅದಲ್ಲದೆ 50 ಟನ್ ಇದ್ದ ಹಳೇ ಪೇಪರ್‌ಅನ್ನು ಕೆಜಿಗೆ 1.15 ರೂ.ನಂತೆ ಮಾರಿದರು. ಅದಕ್ಕೆ ಮುಂಚೆ ಕೆಜಿಗೆ 10 ರೂ.ನಂತೆ ಕೊಳ್ಳಲು ಸಿದ್ಧರಾಗಿ ಬಂದವರನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ ಎನ್ನುವುದು ಬಹಿರಂಗವಾಯಿತು. ಇವನ್ನು ಮಾಡುವಾಗ ಯಾವ ಟೆಂಡರ್ ಸಹ ಕರೆಯಲಿಲ್ಲ, ಇವೆಲ್ಲವೂ ಸರ್ಕಾರದ ಪಾರದರ್ಶಕ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿತ್ತು. ಸ್ಕ್ರಾಪ್ ಕಬ್ಬಿಣವನ್ನು ಸಾಗಿಸುವಾಗ



ಸಾವಿರಾರು ಅಡಿ ತಾಮ್ರದ ಪೈಪ್‌ಗಳನ್ನೂ ಕಳ್ಳತನದಿಂದ ಸಾಗಿಸಿದ್ದಾರೆ ಎಂದು ಕಾರ್ಖಾನೆಯ ಒಳಗಿದ್ದ ಕಾರ್ಮಿಕರೇ ಹೊರಗೆ ಸುದ್ದಿ ಹೇಳಿದರು.

ಈ ಮಧ್ಯೆ ಬಾಟಲಿ ಕಾಂಟ್ರಾಕ್ಟ್‌ಅನ್ನು ನೀಡಲು ಟೆಂಡರ್ ಕರೆಯಲಾಗಿತ್ತು, ಟೆಂಡರ್‌ನಲ್ಲಿ ಅತ್ಯಂತ ಕಡಿಮೆ ಬಿಡ್ ಮಾಡಿದ್ದ ಶ್ರೀಕಂಠೇಶ್ವರ ಬಾಟಲ್ ಸಪ್ಲೈಸ್‌ನವರನ್ನು ಬಿಟ್ಟು, ಟೆಂಡರ್‌ನಲ್ಲೇ ಭಾಗವಹಿಸದಿದ್ದ ವಂದನಾ ಎಂಟರ್ ಪ್ರೈಸಸ್‌ರಿಗೆ ಗುತ್ತಿಗೆಯನ್ನು ನಾಗರಾಜಪ್ಪ ದಯಪಾಲಿಸಿದರು. ಅವರ ಜೊತೆಗೆ ತನ್ನ ಕುಕೃತ್ಯಗಳಿಗೆ ಸಾಥ್ ನೀಡುವ ಕೀಲು ಬಿ.ರಾಮಲಿಂಗಯ್ಯನ ಅಳಿಯನಿಗೆ ಬ್ಲಾಸ್ಟ್ ತುಂಬುವ ಕಂಟ್ರಾಕ್ಟ್‌ಅನ್ನು ನೀಡಿದರು.

ಇವೆಲ್ಲಕ್ಕೆ ತಿಲಕವಿಟ್ಟಂತೆ 6,746 ಕ್ವಿಂಟಾಲ್ ಸಕ್ಕರೆಯನ್ನು (ಬಫರ್ ಸ್ಟಾಕ್ ಶುಗರ್) ಯಾವ ಟೆಂಡರ್ ಕರೆಯದೆ ಮಾರಲಾಯಿತು. ಸಕ್ಕರೆ ಕಂಪೆನಿಯ ಇತಿಹಾಸದಲ್ಲೇ ಭಾನು ವಾರ ಇಂತಹ ವ್ಯವಹಾರ ನಡೆದಿರಲಿಲ್ಲ, ಎಲೆಕ್ಷನ್ ಡ್ಯೂಟಿ ಮೇಲೆ ಎಂಡಿ ಅಶ್ವತ್ಥನಾರಾಯಣ ಹೊರಗೆ ಹೋಗಿದ್ದಾಗ, ಆಫರ್ ಎಂದು ಈ ವ್ಯವಹಾರ ನಡೆದಿದೆ. ಟನ್‌ಗೆ 1,82 ರೂ.ನಂತೆ ಮಾರಲಾದ ಈ ವ್ಯವಹಾರ ಕೋಟ್ಯೋಟಕ್ಕೆ ನಾಟಾ ವ್ಯವಹಾರವಾಗಿರಲಿಲ್ಲ, ಒಂದೇ ದಿನ ಸಕ್ಕರೆ ಬೆಲೆ ಏರುತ್ತಿದ್ದರೂ, ಬಫರ್ ಸ್ಟಾಕ್ ಮಾರಲು ವಿಶೇಷ ಅನುಮತಿ ಪಡೆದ ನಾಗರಾಜಪ್ಪ ಈ ವ್ಯವಹಾರಕ್ಕೆ ಕೈ ಹಾಕಿದ್ದು ಏಕೆ ಎಂಬುದನ್ನು ಕೆದಕಿದರೆ ರಹಸ್ಯ ಸಿಗುತ್ತದೆ.

ಪುಣ್ಯಕೋಟಿ ಶರಣರನ್ನು ಯಾರೂ ಪ್ರಶ್ನೆ ಮಾಡಬಾರದು

ಈ ವಿಚಾರ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಇದರಿಂದ ಎಚ್ಚೆತ್ತುಕೊಂಡ ಕಬ್ಬು ಒಪ್ಪಿಗೆದಾರರ ಸಂಘ, ಅದರ ಅಧ್ಯಕ್ಷ ಶಂಭೂನಹಳ್ಳಿ ಕೃಷ್ಣರ ನೇತೃತ್ವದಲ್ಲಿ ಪತ್ರಿಕಾಗೋಷ್ಠಿ ನಡೆಸಿತು. ಬೇರೆ ಹೆಚ್ಚೇನೂ ಮಾತಾಡದೆ, ಇವೆಲ್ಲವೂ ಅನುಮಾನ ಹುಟ್ಟಿಸುತ್ತಿರುವುದರಿಂದ ಇದರ ಬಗ್ಗೆ ತನಿಖೆ ನಡೆಯಬೇಕು ಮತ್ತು ಸ್ಪಷ್ಟೀಕರಣ ನೀಡಬೇಕು ಎಂದು ಅವರು ಆಗ್ರಹಿಸಿದರು. ತನ್ನ ಅಮೋಘ ಕೃತ್ಯಗಳನ್ನು ಎಲ್ಲರೂ ಹೊಗಳುತ್ತಾ ಇರಬೇಕು ಎಂದು ಬಯಸುವ ನಾಗರಾಜಪ್ಪನವರಿಗೆ ಉರಿಯಬಾರದ ಜಾಗದಲ್ಲೆಲ್ಲಾ ಉರಿಯಲಾರಂಭಿಸಿತು. ತಾನು ಬಹಳ ಪ್ರಾಮಾಣಿಕ ಎಂದೇಳಿಕೊಳ್ಳುವ ವ್ಯಕ್ತಿ ಇದಕ್ಕೆ ನೇರ ಸ್ಪಷ್ಟೀಕರಣ ನೀಡಬಹುದಿತ್ತು, ಇಲ್ಲವೇ ತನಿಖೆಗೆ ಆದೇಶಿಸಬೇಕಿತ್ತು. ಅದಾವುದನ್ನೂ ಮಾಡದೆ, ತನ್ನ ಕೆಲವು ಚೇಲಾಗಳನ್ನು ಬಿಟ್ಟು ಕೆಸರೆರಚಲು ಪ್ರಾರಂಭಿಸಿದರು. ಜಿತೇಂದ್ರನೆಂಬ ಒಬ್ಬ ಫೋರ್ಜರಿ ಬಾಲಕ ಮತ್ತು ಸಕ್ಕರೆ ಕಂಪೆನಿಗೆ ಯಾವ ರೀತಿಯಲ್ಲೂ ಸಂಬಂಧ ಪಡದ ಕೆಲವು ಹೈದರ ಕೈಲಿ ಈ ಕೆಲಸ ಶುರು ಹಚ್ಚಿಕೊಂಡರು. ಕಾರ್ಖಾನೆಯಲ್ಲಿನ ಕೆಲವು ಚೇಲಾ ಕಾರ್ಮಿಕರ ಮೂಲಕ ಪ್ರತಿಭಟನೆಯನ್ನೂ ಮಾಡಿಸಿದರು.

ಆದರೆ ಇದರಿಂದ ಕಬ್ಬು ಒಪ್ಪಿಗೆದಾರರ ಸಂಘಕ್ಕೇನೂ ಕುಂದಾಗಲಿಲ್ಲ, ಬದಲಿಗೆ ನಾಗರಾಜಪ್ಪರೇ ನೇರವಾಗಿ ಸ್ಪಷ್ಟೀಕರಣ ನೀಡಲಿ ಎಂದು ಎಲ್ಲರೂ ಕೇಳಲಾರಂಭಿಸಿದರು. ಈಗಲಾದರೂ ಸಜ್ಜನನಂತೆ ವರ್ತಿಸಬಹುದಿದ್ದ ಆತ, ತನ್ನದು ಯಾವ ಮಟ್ಟ ಎಂದು ತೋರಿಸುವಂತೆ ಸಂಘದ ಪದಾಧಿಕಾರಿಗಳಿಗೆ ಸವಾಲಾಕಿದರು. 'ಅವರು ತಮ್ಮ ಹೆಂಡಂದಿರನ್ನು ಅರಿಶಿನ ಸೀರೆ ಉಡಿಸಿ ದೇವಸ್ಥಾನಕ್ಕೆ ಕರೆ ತರಲಿ, ನಾನೂ ನನ್ನ ಹೆಂಡತಿಯನ್ನು ಅರಿಶಿನ ಸೀರೆ ಉಡಿಸಿ ಕರೆದುಕೊಂಡು ಬರುತ್ತೇನೆ. ಯಾರದು ಸರಿ ಎಂದು ಪ್ರಮಾಣ ಮಾಡೋಣ' ಎಂದು ಬಹಿರಂಗವಾಗಿಯೇ ಈ ಬಸವ ಭಕ್ತ ಮಾತನಾಡಿದರು. ನಾಗರಾಜಪ್ಪನವರ ಪತ್ನಿ ಇದರ ಬಗ್ಗೆ ಪತಿಗೆ ಛೀಮಾರಿ ಹಾಕಿದ ಬಗ್ಗೆ ಸುದ್ದಿಯೇನೂ ಬಂದಿಲ್ಲವಾದರೂ, ಮಂಡ್ಯದ ಪ್ರಜ್ಞಾವಂತರು ಸುಮ್ಮನಿರಲಿಲ್ಲ, ಮರುದಿನಕ್ಕೇ ಸುನಂದಾ ಜಯರಾಂರವರು ಚಾಟಿ ಬೀಸಿ ಸರಿಯಾದ ಉತ್ತರವನ್ನು ಕೊಟ್ಟರು. ಮಹಿಳೆಯರೆಂದರೆ ಏನೆಂದು ತಿಳಿದುಕೊಂಡಿದ್ದೀರಿ ಎಂದು ಅವರು ದಬಾಯಿಸಿದ ಕೂಡಲೇ ಪುಣ್ಯಕೋಟಿಯ ಪಡೆ ಎಲ್ಲವನ್ನೂ ಮುಚ್ಚಿಕೊಂಡು ಬಿಟ್ಟಿತು.

ಆದರೆ ಸುಮ್ಮನೆ ಬಿಟ್ಟರೆ, ತನ್ನ ಮಾನ ಹೋಗುತ್ತದಲ್ಲಾ, ಪತ್ರಕರ್ತರಿಗೆ ಲಾಯರ್ ನೋಟೀಸು ಕೊಟ್ಟು ಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದರು. ಸಾಲದೆಂಬಂತೆ, ಕೋರ್ಟಿನ ಆದೇಶವನ್ನೇ ತಿರುಚಿ ಮಂಡ್ಯದ ಎಲ್ಲಾ ಪತ್ರಕರ್ತರಿಗೂ ನೋಟೀಸು ಕಳಿಸಿ ಯಾರೂ ತನ್ನ ವಿರುದ್ಧ ಅವಮಾನಕಾರಿ ಹೇಳಿಕೆಗಳನ್ನು ಬರೆಯಬಾರದೆಂದು ಫರ್ಮಾನು ಹೊರಡಿಸಿದರು. ತನ್ನ ಜಾಯಮಾನಕ್ಕೆ ತಕ್ಕಂತೆ ಮಂಡ್ಯ


ನಾಗರಾಜಪ್ಪನ ಗ್ರಾಮ ವಾಸ್ತವ್ಯ....

ಪತ್ರಕರ್ತರ ಸಂಘ ಇದಕ್ಕೊಂದು ಪತ್ರಿಕಾ ಹೇಳಿಕೆ ಕೊಟ್ಟು ಸುಮ್ಮನಾದ್ದರಿಂದ, ನಾಗರಾಜಪ್ಪ ತನ್ನದೇ ಸರಿ ಎನ್ನುವಂತೆ ಇದ್ದಾರೆ.

ಆದರೆ ಮಂಡ್ಯದಲ್ಲಿ ಬಹುತೇಕ ಎಲ್ಲಾ ಸಂಘಟನೆಗಳೂ, ಪ್ರಜ್ಞಾವಂತರೂ ನಾಗರಾಜಪ್ಪರ ಬಗ್ಗೆ ಅಸಹ್ಯ ಪಟ್ಟುಕೊಂಡಿದ್ದಾರೆ. ಎಲ್ಲರೂ ಒಟ್ಟು ಸೇರಿ ನಾಗರಾಜಪ್ಪರ ಭಾನಗಡಿಗಳನ್ನು ಖಂಡಿಸುವ ಮತ್ತು ಮೈಷುಗರ್ ಉಳಿಸುವ ಕೆಲಸಕ್ಕೆ ಕೈ ಹಾಕಲಿದ್ದಾರೆ. ಅಷ್ಟರಲ್ಲಿ ಈತ ಎಚ್ಚೆತ್ತುಕೊಂಡು, ಫ್ಯಾಕ್ಟರಿ ಉಳಿಸುವ ಕಾಯಕವನ್ನೇ ಕೈಲಾಸ ಎಂದು ತಿಳಿದು ಕೆಲಸ ಮಾಡಿದರೆ ಸರ್ವರಿಗೂ ಒಳಿತು ಎಂದು ಸ್ವತಃ ಬಚಿಟಿಯವರೇ ಮಾತಾಡಿಕೊಳ್ಳುತ್ತಿದ್ದಾರೆ. ನಾಗರಾಜಪ್ಪ ಅರಿತುಕೊಳ್ಳುತ್ತಾರೆ ಎಂದು ಆಶಿಸೋಣವೇ?

● ಲಕ್ಷ್ಮಣ್ ಚೀರನಹಳ್ಳಿ

ಎಂಟು ವರ್ಷ ದೇವರಾಜ ಅರಸು ಮಾಡಿದ ಸಾಧನೆಯನ್ನು ಒಂದೇ ವರ್ಷದಲ್ಲಿ ಮಾಡಿ ಮುಗಿಸಿ ಕೈತೊಳೆದುಕೊಂಡು, ಈಗ ಸಾಧನೆಯ ಸಮಾವೇಶ ಮಾಡುತ್ತಿರುವ ಎಡ್ಯೂರಪ್ಪನನ್ನ ಮಾತನಾಡಿಸಿದರೆ ಹೇಗೆ ಅನ್ನಿಸಿತಲ್ಲ, ಆ ಕೂಡಲೆ ಫೋನ್ ಮಾಡಲಾಗಿ ರಿಂಗಾಯ್ತು,

ರಿಂಗ್ ಟೋನ್: "ಅನಿಸುತಿದೆ ಯಾಕೊ ಇಂದು ನೀನೇನೆ ನನ್ನವಳೆಂದು. ಅನಿಸುತಿದೆ......

"ಹಲೋ ಯಾರು?"

"ನಾನು ಸಾರ್ ಯಾಹೂ ಅಂತ, ಪತ್ರಕರ್ತ."

"ಹೇಳಿ ಯಾಹೂ ಅವರೆ ಏನಾಗಬೇಕು?"

"ಒಂದು ವರ್ಷದ ಸಾಧನೆ ಬಗ್ಗೆ ಕೇಳನಾ ಅಂತ ಫೋನ್ ಮಾಡಿದೆ ಸಾರ್."

"ಕೇಳಿ, ನೀವು ಮಾಧ್ಯಮದವರು ಕೇಳಬೇಕು, ನಾವು ಹೇಳಬೇಕು."

"ಒಂದು ಸರ್ಕಾರದ ಸಾಧನೆ ಗೊತ್ತಾಗೋದು ಐದು ವರ್ಷದ ನಂತರ. ಅದೂ ಚುನಾವಣೆಲಿ. ಆದ್ರು ಒಂದೇ ವರ್ಷಕ್ಕೆ ಸಮಾವೇಶ ಮಾಡೋದು ಸರಿಯಾ?"

"ಜನಸಾಮಾನ್ಯರಿಗೆ ನಮ್ಮ ಸಾಧನೆನ ಪ್ರತಿವರ್ಷ ಇಂತ ಸಮಾರಂಭದ ಮುಖಾಂತರ ಮಾಡಿ ತೋರ್ಸದು ತಪ್ಪಲ್ಲ."

"ಈ ಒಂದು ವರ್ಷದಲ್ಲಿ ನಿಮಗೆ ಕಹಿಯಾದ ಘಟನೆ ಯಾವುದು? ಸಿಹಿಯಾದ ಘಟನೆ ಯಾವುದು ಸಾರ್?"

"ನನ್ನ ಮಗನಿಗೆ ಎಂಪಿ ಟಿಕೆಟ್ ಕೊಟ್ಟಾಗ ಕೆಲವರು ಟೀಕೆ ಮಾಡಿದ್ರು. ಆಗ ಮನಸ್ಸಿಗೆ ತುಂಬ ಕಹಿ ಆಯ್ತು, ಅವನು ಗೆದ್ದಾಗ ಸಿಹಿಯಾಯ್ತು."



"ಶಿವಮೊಗ್ಗಕ್ಕೆ ನೂರಾರು ಕೋಟಿ ರೂಪಾಯಿ ಸುರಿದ್ರೂ ಮಗನಿಗೆ ಒಳ್ಳೆ ಲೀಡ್ ಬರಲಿಲ್ಲ ಅಂದಿದ್ದೀರಿ?"

"ಹೌದು, ನಾವು ತಕ್ಕೊಂಡೋಗಿ ಸುರಿದ ದುಡ್ಡಿಗೂ, ಬಂದಿರೊ ಲೀಡಿಗೂ ತಾಳೆ ನೋಡಿದ್ರೆ ಮನಸಿಗೆ ತುಂಬ ಬೇಸರ ಆಗ್ತದೆ."

"ಖಂಡಿತ ಬೇಸರ ಆಗುತ್ತೆ ಸಾರ್. ಅದರಲ್ಲೂ ಭದ್ರಾವತಿಯ ಮಾಜಿ ಶಾಸಕನಿಗೆ ಅಡ್ವಾನ್ಸಾಗಿ ಇಪ್ಪತ್ತೈದು ಲಕ್ಷ ಕೊಟ್ಟು, ಆ ನಂತರ ಎರಡು ಕೋಟಿ ಕೊಟ್ರು ಕೂಡ ಅಲ್ಲಿ ಎದುರಾಳಿನೆ ಲೀಡು ಬಂದ್ರು."

"ಏನ್ರಿ ಮಾತಾಡ್ತಯಿರೋದು ನೀವು? ನಾನು ಶಿವಮೊಗ್ಗಕ್ಕೆ ತಂದಿರೊ ಹಣ ಅಭಿವೃದ್ಧಿ ಕಾರ್ಯದ್ದು, ಎಲೆಕ್ಷನ್ನಿಗೆ ಖರ್ಚಾದ ಹಣದ ಬಗ್ಗೆ ನಾನು ಮಾತಾಡ್ತಿಲ್ಲ."

"ಹಾಗಾದ್ರೆ, ಚುನಾವಣೆಗೆ ಖರ್ಚಾದ ಹಣ, ಅಭಿವೃದ್ಧಿಗಾಗಿ ಸುರಿದಿರೊ ಹಣನ ಟೋಟ್ಲು ಮಾಡಿದ್ರೆ ಸಾವಿರಾರು ಕೋಟಿ ಆಯ್ತದಲ್ಲಾ ಸಾರ್?"

"ಹೌದು ಕಂಡ್ರಿ, ನಾವು ಖರ್ಚು ಮಾಡಿರೋ ಹಣದಲ್ಲಿ ಒಂದೂವರೆ ಲಕ್ಷ ಲೀಡ್ ಬರಬೇಕು, ಕಡಿಮೆ ಬಂದಿದೆ ಅಂದ್ರೆ ಏನರ್ಥ?"

"ಅರ್ಥ ಇನ್ನೇನು ಸಾರ್? ರಾಘಣ್ಣನಿಗೆ ಟಿಕೆಟ್ ಕೊಟ್ಟಾಗ ಯಾರ್ಯಾರು ಒಳಗೊಳಗೆ ವಿರೋಧಿಸಿದ್ರೊ ಅವರೆಲ್ಲಾ ಕೈಕೊಟ್ಟದಾರೆ ಅಂತ."

"ಅವುರು ಕೈಕೊಟ್ರು ಜನ ಕೈಕೊಡಲಿಲ್ಲ, ಅದರಲ್ಲು ನೀವು ಮಾಧ್ಯಮದವರು ಚೆನ್ನಾಗಿ ಸಹಕಾರ ಕೊಟ್ರಿ."

"ನಾವಿರೋದೆ ಅದಕ್ಕಲ್ಲವ ಸಾರ್. ನೀವು ನಮ್ಮನ್ನ ಚೆನ್ನಾಗಿ ನೋಡಿಕೊಂಡಾಗ ನಾವು ನೋಡಿಕೊಳ್ಳೋದು ನಮ್ಮ ಧರ್ಮ. ನೇರವಾಗಿ ಅಲ್ಲದೆಯಿದ್ರು ಬರವಣಿಗೆಲಿ ಇರಬಹುದಾದ ಎಲ್ಲಾ ಒಳನೋಟಗಳನ್ನು ಬರಿತಿವಿ, ಬರದ್ವಿ."

"ಹೌದು, ರಾಘಣ್ಣನ ಕುರಿತು ಚೆನ್ನಾಗೇ ಬರದ್ರಿ. ಆ ಸಮಯದಲ್ಲಿ ನಮ್ಮ ಪಾರ್ಟಿ ಕಾರ್ಯಕರ್ತರಿಗಿಂತ್ಲೂ ಹೆಚ್ಚಿನ ಸಹಕಾರ ಕೊಟ್ರಿ. ಪಾಪ ಬೆಳಗಾಯ್ತು ಅಂದ್ರೆ ನನ್ನ ಮನೆಹತ್ರ ನಮ್ಮ ಪಾರ್ಟಿ ಜನಗಳು ಬರ್ತಿರಲಿಲ್ಲ, ನೀವು ಬಂದು ಏನು ಬರೀಬೇಕು ಅಂತ ಕೇಳತಿದ್ರಿ, ನಿಮ್ಮ ಸಹಕಾರನ ನಾನು ನನ್ನ ಜೀವನದಲ್ಲಿ ಮರಿಯಲ್ಲ ಅಂತ ರಕ್ತದಲ್ಲಿ ಬೇಕಾದ್ರೆ ಬರದು ಕೊಡ್ತಿನಿ."

"ಆ ತರ ಬರಕೊಡದೇನು ಬೇಡಿ ಸಾರ್. ಈಗಾಗ್ಲೆ ನಿಮ್ಮ ಮಗ ಕೊಟ್ಟಿರೊ ಹಣ, ನೀವು ಕೊಟ್ಟಿರೊ ಸೈಟ್‌ಗಳೇ ಸಾಕು. ನಮ್ಮ ಮಾಧ್ಯಮದವರು ಎಂದೂ ನಿಮ್ಮನ್ನ ಮರಿಯಲ್ಲ, ಹಣ ನೋಡಿದಾಗ ನಿಮ್ಮ ಮಗನ ನೆನಪಾಗುತ್ತೆ, ಸೈಟು ನೋಡಿದಾಗ ನಿಮ್ಮ ನೆನಪಾಗುತ್ತೆ, ಈಗ ನಮ್ಮಿಂದೇನಾಗಬೇಕು ಅಂತ ಹೇಳಿ ಸಾರ್."

"ಏನಿಲ್ಲ, ಈ ಭಿನ್ನಮತನ ಹೈಲೈಟ್ ಮಾಡಬೇಡಿ. ಸಾಧನೆ ಸಮಾವೇಶದ ಬಗ್ಗೆ ಚೆನ್ನಾಗಿ ಬರಿರಿ."

"ಅದೇ ಸಾರ್, ನನ್ನ ಮುಂದಿರೊ ಸಮಸ್ಯೇ. ಯಾವ ಸಾಧನೆ ಮಾಡಿದ್ದಿರಿ ಅಂತ ಎಷ್ಟು ಯೋಚನೆ ಮಾಡಿದ್ರೂ ಹೊಳಿತಾಯಿಲ್ಲ."

"ಹೇಳ್ತೀನಿ ಬರಕೊಳ್ಳಿ."

"ಆಯ್ತು ಹೇಳಿ ಸಾರ್."

"ನಮ್ಮ ರಾಜ್ಯದ ಜನರ ನಿರೀಕ್ಷೆ ಮೀರಿ ಅವರ ಅಪೇಕ್ಷೆ ಈಡೇರಿಸಲಾಗಿದೆ."

"ಅಂದ್ರೆ ನಿರೀಕ್ಷೆ ಗೊಬ್ಬರ, ಕೊಟ್ಟಿದ್ದು ಗೋಲಿ ಏಟು ಅಂತ್ಲ ಸಾರ್?"

"ರೀ ಯಾಹೂ, ನನ್ನ ತಾಳ್ಮೆ ಪರೀಕ್ಷೆ ಮಾಡಬೇಡಿ. ಮೊದ್ಲೆ ಬಳ್ಳಾರಿ ರೆಡ್ಡಿಗಳು, ಅದೇ ಮೂಲದಿಂದ ಬಂದು ಶಿವಮೊಗ್ಗದಲ್ಲಿ ನೆಲೆಸಿರೊ ವ್ಯಕ್ತಿಗಳಿಂದ ನನ್ನ ಮನಸ್ಸು ಹಾಳಾಗಿದೆ."

"ಸಾರಿ ಸಾರ್, ಹೇಳಿ."

"ಅಭಿವೃದ್ಧಿ ವೇಗನ ಆದಷ್ಟು ಹೆಚ್ಚಿಗೆ ಮಾಡ್ತಿನಿ."

"ಸ್ಪೀಡ್ ಲಿಮಿಟ್ಟೆಷ್ಟು ಸಾರ್?"

"ಸ್ಪೀಡ್ ಲಿಮಿಟ್ಟು ಅಂದ್ರೆ ಯುದ್ಧಮೋಪಾದಿಯಲ್ಲಿ ನಡಿಯೋ ಸ್ಪೀಡು."

"ಈಗಾಗ್ಲೆ ನಿಮ್ಮ ಪಾರ್ಟಿಲಿ ಯುದ್ಧ ಆರಂಭ ಆಗಿದೆಯಲ್ಲಾ ಸಾರ್. ಯತ್ನಾಳ್ ಕೋಟೆ ಹೊರಗಡೆ ನಿಂತು ಯುದ್ಧ ಸಾಮಗ್ರಿ ಸಂಗ್ರಹಿಸ್ತಾಯಿದಾರೆ. ಹರತಾಳನ ಮೇಲೆ ಬೇಲೂರ ಬದ್ಧವೈರಿ. ಶೋಭಾನ ಮೇಲೆ ಎಲ್ಲಾ ಅತೃಪ್ತ ಶಾಸಕರೂ ಕೆಂಡಕಾರತ ಅವುರೆ. ಗಣಿ ರೆಡ್ಡಿಗಳಂತೂ ಬಳ್ಳಾರಿ ಕೋಟೆಲಿ ಎಲ್ಲಾನು ಸಂಗ್ರಹಿಸಿಕೊಂಡು ಇನ್ನೇನು ಯುದ್ಧ ಘೋಷಣೆ ಮಾಡೋ ತರ ರೆಡಿಯಾಗ್ತಯಿದಾರೆ. ಇನ್ನ ನಿಮ್ಮೂರಿನ ಈಶ್ವರಪ್ಪನ ಹಿಂದ ಆರೆಸ್ಸೆಸ್ ಸೈನ್ಯ ಜಮಾವಣೆ ಆಗಿದೆಯಂತೆ. ನೀವು ಅಭಿವೃದ್ಧಿ ಯುದ್ಧ ಮಾಡ್ತಿರೊ, ನಿಮ್ಮ ಪಾರ್ಟಿ ಬಂಡಾಯದ ಸೈನ್ಯದ ವಿರುದ್ಧ ಯುದ್ಧ ಮಾಡ್ತಿರೊ ಅಂತ ಗೊತ್ತಾಗ್ತಾಯಿಲ್ಲಾ ಸಾರ್."

'ರೀ ಯಾಹೂ, ನಿಮ್ಮನ್ನ ಮಾತಾಡ್ಸಿದ್ದೇ ನನ್ನ ತಲೆ ಕೆಟ್ಟೋಗಿತ್ತು, ಇಡ್ರಿ ಫೋನ."

"ಥೂತ್ತೇರಿ!!!"

ಆಸನ ಬಿರುಕು

ಆಸನದಲ್ಲಿ ಮೂಡುವ ಆರೋಗ್ಯ ಸಮಸ್ಯೆಯೊಂದಕ್ಕೆ ಇಂಗ್ಲಿಷ್‌ನಲ್ಲಿ ಫಿಷರ್ ಅಂತಾರೆ. ಅದಕ್ಕೆ ಕನ್ನಡದಲ್ಲಿ 'ಆಸನ ಬಿರುಕು' ಎಂದೂ ಕರೆಯುತ್ತಾರೆ. ಆ ಸಮಸ್ಯೆಯಿಂದಾಗಿ ವ್ಯಕ್ತಿಯೊಬ್ಬ ಅಪಾರ ನೋವನ್ನು ಅನುಭವಿಸುತ್ತಾನೆ. 'ನನ್ನ ವೈರಿಗೂ ಇಂತಹ ಶಾಪ ಬೇಡಪ್ಪ' ಎಂದು ಕೊರಗುತ್ತಾನೆ. ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಪಾಪ ಈಗ ಇನ್ನೊಂದು ತರಹದ 'ಆಸನ ಬಿರುಕು' ಕಾಡುತ್ತಿದೆ.


ಶೋಭಾ

ತಮ್ಮ ಸರ್ಕಾರದ ಸಚಿವರುಗಳು ಮತ್ತು ಪಕ್ಷದ ಶಾಸಕರುಗಳು ಸಿಡಿಸಿದ 'ಸರಣಿ ಬಾಂಬ್'ಗಳಿಂದಾಗಿ ಯಡಿಯೂರಪ್ಪನವರ ಆಸನ ತತ್ತರಿಸುತ್ತಿದೆ. ಮೊನ್ನೆಯ ಲೋಕಸಭಾ ಚುನಾವಣೆಯಲ್ಲಿ 19 ಸ್ಥಾನಗಳನ್ನು ಗೆದ್ದು ಇಡೀ ದೇಶದಲ್ಲೇ ಅತ್ಯಂತ ಹೆಚ್ಚು ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಿದ ಸಂತೋಷದಲ್ಲಿದ್ದ, ಒಂದು ವರ್ಷ ಅಧಿಕಾರಾವಧಿಯನ್ನು ಸಂಪೂರ್ಣಗೊಳಿಸಿದ ಸಂತಸದಲ್ಲಿದ್ದ ಯಡ್ಡಿ ಮುಖ ಈಗ ಹರಳೆಣ್ಣೆ ಕುಡಿದಂತಾಗಿದೆ.

ಮೊದಲ 'ಬಾಂಬ್' ಸಿಡಿದದ್ದು ಯಡ್ಡಿಯ ತವರೂರಾದ ಶಿವಮೊಗ್ಗೆಯಲ್ಲಿ ಎಂಬುದೇ ವಿಶೇಷ. ಯಡ್ಡಿಯ ಬಹಳ ಸಮಯದ ಹಿತಶತ್ರು ಇಂಧನ ಸಚಿವ ಕೆ.ಎಸ್. ಈಶ್ವರಪ್ಪ ಪತ್ರಿಕಾಗೋಷ್ಠಿ ಕರೆದು ಯಡಿಯೂರಪ್ಪನವರ ವಿರುದ್ಧ ಅಧಿಕೃತವಾಗಿ ಬಂಡಾಯದ ಬಾವುಟವನ್ನು ಹಾರಿಸಿಯೇ ಬಿಟ್ಟರು. ಅಂದು ಈಶ್ವರಪ್ಪ ಯಾವುದೇ ಅಳುಕಿಲ್ಲದೇ ನೇರವಾಗಿಯೇ ಯಡಿಯೂರಪ್ಪನವರ ಆಡಳಿತ ಶೈಲಿಯನ್ನು ಪ್ರಶ್ನಿಸಿದರು.

ಅಷ್ಟೇ ಅಲ್ಲ, "ನನ್ನ ಕ್ಷೇತ್ರದಲ್ಲಿ ಅಸೆಂಬ್ಲಿ ಚುನಾವಣೆಯ ಮತಗಳಿಗಿಂತ ಲೋಕಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಪುತ್ರ ರಾಘವೇಂದ್ರನಿಗೆ ಮತಗಳು ಕಡಿಮೆ ಬಿದ್ದಿದೆ ನಿಜ. ಅದರ ತನಿಖೆ ನಡೆಯುವುದಾದರೆ ನಡೆಯಲಿ. ಆದರೆ ಮುಖ್ಯಮಂತ್ರಿ ಯಡಿಯೂರಪ್ಪನವರ ಶಿಕಾರಿಪುರ ಕ್ಷೇತ್ರದಲ್ಲೂ ರಾಘವೇಂದ್ರನಿಗೆ ಕಡಿಮೆ ಮತ ಬಿದ್ದಿದೆಯಲ್ಲವೇ?" ಎಂದು ಹೇಳಿ "ಅದರ ಬಗ್ಗೆಯೂ ತನಿಖೆಯಾಗಲಿ" ಎಂದು ಅಬ್ಬರಿಸಿದರು.


ಅದೇ ವೇಳೆ ಈಶ್ವರಪ್ಪ ಯಡ್ಡಿಯತ್ತ ಇನ್ನೊಂದು ಬಾಣವನ್ನೂ ಬಿಟ್ಟರು. "ನನ್ನ ಕ್ಷೇತ್ರದಲ್ಲಿ ಮತ ಕಡಿಮೆ ಬಿದ್ದಿದೆ ಎಂಬ ಕಾರಣಕ್ಕೆ ನನ್ನ ಖಾತೆಯನ್ನು ಬದಲಾಯಿಸುವುದಾದರೆ ಮೈಸೂರು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಪರಾಭವಗೊಂಡಿದ್ದಕ್ಕೆ ಆ ಜಿಲ್ಲೆಯ ಉಸ್ತುವಾರಿ ಸಚಿವೆ ಶೋಭಾ ಕರಂದ್ಲಾಜೆ ರಾಜೀನಾಮೆ ನೀಡಬೇಕು" ಎಂದು ಗುಡುಗಿದರು.

ಈ ದಾಳಿಯಿಂದ ಯಡ್ಡಿ ಚೇತರಿಸಿಕೊಳ್ಳುವ ಮುನ್ನ ಮರುದಿನವೇ ಬಳ್ಳಾರಿಯಲ್ಲಿ ಮತ್ತೊಂದು ಭಿನ್ನಮತೀಯ ಬಾಂಬ್ ಸ್ಫೋಟಗೊಂಡಿತು. ಅಲ್ಲಿ ರೆಡ್ಡಿಗಳ ಪಟಾಲಂ ಬ್ಲಾಸ್ಟ್ ಮಾಡಿದ ಬಾಂಬಿನ ವ್ಯಾಪ್ತಿ ಮತ್ತು ಪ್ರಭಾವ ಶಿವಮೊಗ್ಗದ ಬಾಂಬ್‌ಗಿಂತ ಹೆಚ್ಚು ಆಘಾತಕಾರಿಯಾಗಿತ್ತು. ಯಡಿಯೂರಪ್ಪ ಅಧಿಕಾರಕ್ಕೆ ಬರಲು ತನು-ಮನ-ಧನಗಳನ್ನು ಸಮರ್ಪಿಸಿದ ಬಳ್ಳಾರಿಯ ಗಣಿ ಮಾಲೀಕರಾದ ರೆಡ್ಡಿ ಸಹೋದರರು ಈಗ ಅದೇ ತನು-ಮನ-ಧನವನ್ನು ಯಡ್ಡಿಯನ್ನು ಅಧಿಕಾರದಿಂದ ಇಳಿಸಲು ವಿನಿಯೋಗಿಸುತ್ತಿದ್ದಾರೆ. ಬಳ್ಳಾರಿಯಲ್ಲಿ ಸುಮಾರು 15 ಬಿಜೆಪಿ ಶಾಸಕರು ರೆಡ್ಡಿ ಸಹೋದರರ ಜೊತೆ ಒಂದು ದಿನವಿಡೀ ಗುಪ್ತಸಮಾಲೋಚನೆಯಲ್ಲಿ ಮಗ್ನರಾಗಿದ್ದರು. ಇದರ ನಾಯಕತ್ವವನ್ನು ಬಳ್ಳಾರಿ ಶಾಸಕ ಜಿ. ಸೋಮಶೇಖರ ರೆಡ್ಡಿ ವಹಿಸಿದ್ದರು.


ಯಡಿಯೂರಪ್ಪ

ಇದಾದನಂತರ ಬಳ್ಳಾರಿಯಿಂದ ಭಿನ್ನಮತೀಯ ಗಾಳಿ ಪುನಃ ಯಡ್ಡಿ ತವರೂರು ಕಡೆಗೆ ಬೀಸಿತು. ಸಾಗರದ ಶಾಸಕ ಬೇಳೂರು ಗೋಪಾಲಕೃಷ್ಣ ಪತ್ರಿಕಾಗೋಷ್ಠಿ ಕರೆದು ಮುಖ್ಯಮಂತ್ರಿಯ ಬಲಗೈ ಬಂಟನಂತಿರುವ ಸಚಿವ ಹರತಾಳು ಹಾಲಪ್ಪ ವಿರುದ್ಧ ಹರಿಹಾಯ್ದರು. ಶಿವಮೊಗ್ಗ ಲೋಕಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಪುತ್ರ ರಾಘವೇಂದ್ರನ ಗೆಲುವಿನ ಸಂಪೂರ್ಣ ಜವಾಬ್ದಾರಿಯನ್ನು ಯಡ್ಡಿ ಈ ಹಾಲಪ್ಪನಿಗೆ ವಹಿಸಿಕೊಟ್ಟಿದ್ದರು. ಅಂತಹ ಹಾಲಪ್ಪನ ವಿರುದ್ಧ ಗೋಪಾಲಕೃಷ್ಣ ಆಪಾದನೆ ಮಾಡಿದ್ದಾರೆ ಎಂದರೆ ರಾಜಕೀಯವಾಗಿ ಅದು ಮುಖ್ಯಮಂತ್ರಿ ವಿರುದ್ಧ ಮಾಡಿದ ಆಪಾದನೆಯೇ.

ಇದು ಸಾಲದೆಂಬಂತೆ ಆರಂಭದಿಂದಲೂ ಯಡ್ಡಿಗೆ ತಲೆನೋವಾಗಿರುವ ಕೋಲಾರದ ಶಾಸಕ ವರ್ತೂರು ಪ್ರಕಾಶ್ ಕೂಡಾ ನೇರವಾಗಿ ಯಡಿಯೂರಪ್ಪನ ವಿರುದ್ಧ ಟೀಕಾಪ್ರಹಾರ ಮಾಡಿದರು.


ಈಶ್ವರಪ್ಪ

ಆರೆಸ್ಸೆಸ್ ಮುಖವಾಣಿ ಈಶ್ವರಪ್ಪ

ಬಿಜೆಪಿ ಸರ್ಕಾರದ ದ್ವಿತೀಯ ನಾಯಕ ಈಶ್ವರಪ್ಪ ಏಕಾಏಕಿ ತಾಳ್ಮೆಗೆಟ್ಟು ತನ್ನದೇ ಮುಖ್ಯಮಂತ್ರಿಯ ವಿರುದ್ಧ ತಿರುಗಿಬಿದ್ದಿದ್ದೇಕೆ?

ಯಡ್ಡಿಗೂ ಈಶ್ವರಪ್ಪನವರಿಗೂ ಹಳೆಯ ದುಷ್ಮನಿಯಿರುವುದು ಗುಟ್ಟೇನಲ್ಲ. ಪಕ್ಷದ ಬೈಠಕ್‌ಗಳಲ್ಲೇ ಪರಸ್ಪರ ವಾಚಾಮಗೋಚರ ಬೈದಾಡಿಕೊಂಡಿದ್ದೂ ಉಂಟು. ಹೀಗೆ ಬಹಿರಂಗವಾಗಿ ಅದೂ ಅಧಿಕಾರದ ಗದ್ದುಗೆಗೇರಿದ ಗಳಿಗೆಯಲ್ಲಿ ಮುಖ್ಯಮಂತ್ರಿಯ ಬುಡಕ್ಕೆ ಕೊಳ್ಳಿಯಿಟ್ಟಂತೆ ಪೆಟ್ಟುಕೊಟ್ಟ ಈಶ್ವರಪ್ಪನವರಿಗೆ ಈ ಪಾಟ ಧೈರ್ಯ ಬಂದಿದ್ದಾದರೂ ಎಲ್ಲಿಂದ?

ಕಳೆದ ನಾಲ್ಕು ದಿನಗಳ ಬಿಜೆಪಿ ಅಂತಃಕಲಹ ಬಲ್ಲ ಅನೇಕರನ್ನು ಕಾಡುವ ಪ್ರಶ್ನೆಯಿದು.

ಈಶ್ವರಪ್ಪನವರ ಸಿಟ್ಟು ಮತ್ತು ಧೈರ್ಯಕ್ಕಿರುವ ಅಗೋಚರ ಕಾರಣವೇ ಆರೆಸ್ಸೆಸ್. ಸದ್ಯ ಇಡೀ ಆರೆಸ್ಸೆಸ್ ಯಡ್ಡಿಯ ವಿರುದ್ಧ ಈಶ್ವರಪ್ಪನವರ ಬೆನ್ನಿಗೆ ನಿಂತಿದೆ. ಈಶ್ವರಪ್ಪ ಆರೆಸ್ಸೆಸ್‌ನ ಅದೃಶ್ಯ ಮುಖವಾಣಿಯಷ್ಟೆ. ನಿನ್ನೆ ಮೊನ್ನೆಯತನಕ ಕನಿಷ್ಠ ಜಾತಿಯ ಕಾರಣಕ್ಕಾದರೂ ಯಡ್ಡಿಗೆ ಕುಮ್ಮಕ್ಕು ಕೊಡುತ್ತಿದ್ದ ಆರೆಸ್ಸೆಸ್‌ನ ದಕ್ಷಿಣ ಭಾರತ ಕ್ಷೇತ್ರೀಯ ಕಾರ್ಯವಾಹ ಮೈ.ಚ.ಜಯದೇವ ಕೂಡ ಮುಖ್ಯಮಂತ್ರಿಯನ್ನು ಸಮರ್ಥಿಸಿಕೊಳ್ಳಲಾಗದಷ್ಟು ಯಡವಟ್ಟುಗಳನ್ನು ಯಡ್ಡಿ ಮಾಡಿಕೊಂಡಿದ್ದಾರೆ.

ಕರಂದ್ಲಾಜೆಗೆ ಮಂತ್ರಿಗಿರಿ ಕೊಟ್ಟಿದ್ದು, ಭಾರತಿ ಶೆಟ್ಟಿಯನ್ನು ಎಮ್ಮೆಲ್ಸಿ ಮಾಡಿದ್ದು, ಆರ್.ಪಿ. ಜಗದೀಶ್‌ರನ್ನು ತಂದು ಮುಖ್ಯಮಂತ್ರಿ ಕಚೇರಿಯಲ್ಲಿ ಪ್ರತಿಷ್ಠಾಪಿಸಿದ್ದು ಮತ್ತು ಮಗ ವಿಜಯೇಂದ್ರನ ಕೈಗೆ ಇಡೀ ಪೋಲೀಸ್ ಟ್ರಾನ್ಸ್‌ಫರ್‌ಗಿರಿ ಒಪ್ಪಿಸಿದ್ದರ ವಿರುದ್ಧ ಆರೆಸ್ಸೆಸ್ ಗೊಣಗಾಡುತ್ತಲೇ

▶▶▶ 12

ಸಾಕಿದ ಸರ್ಪ ಬುಸುಗುಡುತ್ತಿದೆ

ಅಧಿಕಾರ ಲಾಲಸೆಗೆ ಅಡ್ಡದಾರಿ ಹಿಡಿದರೆ ಅದು ಮುಟ್ಟಿಸಬೇಕಾದಲ್ಲಿಗೆ ತಪ್ಪದೇ ಕೊಂಡೊಯ್ಯುತ್ತದೆ. ಇವತ್ತು ಯಡ್ಡಿ ವಿರುದ್ಧ ಬುಸುಗುಡುತ್ತಿರುವ ಗಣಿರೆಡ್ಡಿಗಳೆಲ್ಲ ಯಡ್ಡಿಯೇ ಸಾಕಿದ ಸರ್ಪಗಳು. ಕರ್ನಾಟಕದ ಗಡಿಯನ್ನೇ ಆಕ್ರಮಿಸಿ ಸಾವಿರಾರು ಕೋಟಿ ಮೊತ್ತದ ಅದಿರನ್ನು ದೋಚಿ, ಅದೇ ದುಡ್ಡನ್ನು ಚುನಾವಣೆಯಲ್ಲಿ ಸುರಿದು ಗೆದ್ದ ಗಣಿಕಳ್ಳರ ಕೂಟ ಬಿಜೆಪಿಯ ಅಧಿಕಾರ ಗದ್ದುಗೆಯ ಆಧಾರಸ್ತಂಭಗಳಲ್ಲೊಂದೆಂಬುದು ಎಷ್ಟು ನಿಜವೋ ಈಗ ಅದೇ ಯಡ್ಡಿ ಸರ್ಕಾರಕ್ಕೆ ಮುಳುವಾಗುತ್ತಿರುವುದೂ ಅಷ್ಟೇ ಸತ್ಯ-


ಜನಾರ್ದನ ರೆಡ್ಡಿ

ವಿಷಸರ್ಪವನ್ನು ಸಾಕ ಹೊರಟವನಿಗೆ ಅದರಿಂದಲೇ ಮೃತ್ಯುವೂ ಕಾದಿರುತ್ತದೆಯೆಂಬ ಪರಮಸತ್ಯವನ್ನು ಈಗ ಬಿಜೆಪಿ ಮತ್ತು ಯಡ್ಡಿ ಒಟ್ಟೊಟ್ಟಿಗೇ ಎದುರಿಸಬೇಕಿದೆ. ಸಾಕಿದ ಸರ್ಪವೇ ಪ್ರಾಣಕ್ಕೆ ಸಂಚಕಾರ ತರುತ್ತಿದೆ.

ಯಡ್ಡಿ ವಿರುದ್ಧ ಗಣಿರೆಡ್ಡಿಗಳ ಸಿಟ್ಟಿಗೆ ಆಂಧ್ರದ ಮುಖ್ಯಮಂತ್ರಿ ವೈ.ಎಸ್. ರಾಜಶೇಖರರೆಡ್ಡಿಯೇ ಕಾರಣವೆಂದೂ, ವೈ.ಎಸ್.ಆರ್. ಮಾತು ಕೇಳಿಕೊಂಡೇ ಗಣಿ ರೆಡ್ಡಿಗಳು ಯಡ್ಡಿ ವಿರುದ್ಧ ಕತ್ತಿ ಮಸೆಯುತ್ತಿದ್ದಾರೆಂದೂ, ಯಡ್ಡಿ ಸರ್ಕಾರವನ್ನು ಉರುಳಿಸಿ ಕಾಂಗ್ರೆಸ್ ನೇತೃತ್ವದ ರೆಡ್ಡಿ ಬೆಂಬಲಿತ ಸರ್ಕಾರ ಸ್ಥಾಪಿಸಲು ಕೇಂದ್ರದ ಕಾಂಗ್ರೆಸ್ ಸರ್ಕಾರ ಹುನ್ನಾರ ಹವಣಿಸುತ್ತಿದೆಯೆಂದು ಯಾರೆಷ್ಟೇ ಗುಣಿಸಿ ಎಣಿಸಿದರೂ ಅದು ಅರ್ಧ ಸತ್ಯ ಮಾತ್ರ. ಯಡ್ಡಿ ಸರ್ಕಾರದ ಪಿತಾಮಹನಾಗುವ ಅತಿ ಆಸೆಗೆ ಬಿದ್ದು ಪಕ್ಷೇತರ ಶಾಸಕರನ್ನು ಸೆಳೆತಂದ, ತನ್ನದೇ ಸಂಬಂಧಿಗಳನ್ನೆಲ್ಲ ಎಮ್ಮೆಲ್ಸಿಗಳನ್ನಾಗಿಸಿದ, ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಬೇಕಾಬಿಟ್ಟಿ ದುಡ್ಡು ಹಂಚಿದ; ಜನಾರ್ದನ ರೆಡ್ಡಿಗೆ ಯಡ್ಡಿ ಮೊದಲ ಬಾರಿಗೆ ಪೆಟ್ಟುಕೊಟ್ಟಿದ್ದು 2009 ರ ಫೆಬ್ರವರಿಯಲ್ಲಿ ನಡೆದ ಬೆಳಗಾವಿ ವಿಧಾನಮಂಡಲ ಅಧಿವೇಶನದಲ್ಲಿ.

ಅದು ಆಂಧ್ರಾ-ಕರ್ನಾಟಕ ಗಡಿಯ ಜಂಟಿ ಸರ್ವೆಗೆ ಒತ್ತಾಯಿಸಿ ಯಡ್ಡಿ ಕೇಂದ್ರಕ್ಕೆ ಬರೆದ ಪತ್ರ!

ಕರ್ನಾಟಕದ ಗಡಿಯನ್ನೇ ತಿದ್ದಿ ಅದಿರು ದೋಚಿದ ರೆಡ್ಡಿಗಳ ವಿರುದ್ಧ ವಿರೋಧಿ ಕಾಂಗ್ರೆಸ್-ಜೆಡಿಎಸ್‌ಗಳ ಬೆಳಗಾವಿ ವಿಧಾನಮಂಡಲದಲ್ಲಿ ಗದ್ದಲವೆಬ್ಬಿಸಿದ್ದಕ್ಕೆ ಪ್ರತಿಯಾಗಿ ಯಡ್ಡಿ ಜಂಟಿ ಸರ್ವೆಗೆ ಒತ್ತಾಯಿಸಿ ಕೇಂದ್ರಕ್ಕೆ ಪತ್ರ ಬರೆದರು. ಬೆನ್ನಲ್ಲೇ ಇಡೀ ಗಣಿ ಹಗರಣವನ್ನು ಲೋಕಾಯುಕ್ತ ತನಿಖೆಗೆ ಒಪ್ಪಿಸಿಬಿಟ್ಟರು.

ವಿರೋಧ ಪಕ್ಷಗಳ ಹಾವಳಿಯಿಂದ ಬಚಾವಾಗಲು ಯಡ್ಡಿ ಬಳಸಿದ ಈ ಎರಡು ತೇಪೆ ತಂತ್ರಗಳೇ ಯಡ್ಡಿ ವಿರುದ್ಧ ರೆಡ್ಡಿಗಳ ಮುನಿಸಿಗೆ ಕಾರಣವಾಯಿತು. ಹಾಗೇನಾದರೂ ಕೇಂದ್ರದ ಸರ್ವೆ ಇಲಾಖೆ 'ಜಂಟಿ ಸರ್ವೆ' ನಡೆಸಿಬಿಟ್ಟರೆ ಇಡೀ ರೆಡ್ಡಿ ಗ್ಯಾಂಗ್ ಜೈಲು ಪಾಲಾಗಬೇಕಾಗುತ್ತದೆ. ಹಿಂದಿದ್ದ ಧರ್ಮಸಿಂಗ್ ಆಗಲಿ, ಕುಮಾರಸ್ವಾಮಿಯಾಗಲಿ ಜಂಟಿ ಸರ್ವೆಗೆ ಒತ್ತಾಯಿಸುವಂಥ ದುಸ್ಸಾಹಸಕ್ಕೆ ಕೈಹಾಕಿರಲಿಲ್ಲ. ರೆಡ್ಡಿಗಳ ಹಂಗಿಗೆ ಬಿದ್ದ ತಪ್ಪಿಗೆ ತನ್ನ ಹೆಗಲೇರಿದ ಬೇತಾಳವನ್ನು ಕೇಂದ್ರಕ್ಕೆ ಹೊತ್ತು ಹಾಕುವುದು ಬಿಟ್ಟರೆ ಯಡ್ಡಿಗೆ ತಾನೇ ಬೇರೆ ದಾರಿಯೆಲ್ಲಿತ್ತು?

ಇದಕ್ಕೆ ಪೂರಕವೆಂಬಂತೆ 2009 ರ ಏಪ್ರಿಲ್ 22 ರಂದು ರಾಜ್ಯ ಹೈಕೋರ್ಟು ತೀರ್ಪು ಹೊರಬಿತ್ತು. ಅದು ಮಲಪನಗುಡಿ ಮತ್ತು ತುಮಟಿ ಗಡಿಯಲ್ಲಿ ಜನಾರ್ದನ ರೆಡ್ಡಿ ಆಕ್ರಮಿಸಿಕೊಂಡಿದ್ದ ಟಪಾಲ್ ನಾರಾಯಣರೆಡ್ಡಿಯವರ ಗಣಿ ಕುರಿತಂತೆ ಹೊರಬಿದ್ದ ತೀರ್ಪು. ಆಂಧ್ರ ಸರ್ಕಾರದ ಕಳ್ಳ ಪರವಾನಗಿ ಹಿಡಿದು ತುಮಟಿಯ ಟಪಾಲ್ ಫ್ಯಾಮಿಲಿಯ ಗಣಿ ಆಕ್ರಮಿಸಿದ್ದ ರೆಡ್ಡಿ ಗ್ಯಾಂಗ್‌ನ ದುರಾಸೆಗೆ ವ್ಯತಿರಿಕ್ತವಾಗಿ ಇಂಡಿಯನ್ ಬ್ಯುರೋ ಆಫ್ ಮೈನ್ಸ್‌ನ ಮುಖ್ಯಸ್ಥರೇ ನಿಂತು ಸರ್ವೆ ಆಫ್ ಇಂಡಿಯಾದ ಮೂಲಕ, ಕರ್ನಾಟಕ ಮತ್ತು ಆಂಧ್ರದ ಉನ್ನತ ಅಧಿಕಾರಿಗಳ ಸಮಕ್ಷಮದಲ್ಲಿ ಜಂಟಿ ಸರ್ವೆ ನಡೆಸಬೇಕೆಂದು ಹೈಕೋರ್ಟ್ ತೀರ್ಪಿನ ತಿರುಳಾಗಿತ್ತು.

ಡಿಯೂರಪ್ಪ ನನ್ನ ನಾಯಕ ಅಲ್ಲ; ನನ್ನ ನಾಯಕ ಏನಿದ್ದರೂ ಮಾಯಣ್ಣನವರೇ" ಎಂದು ಹೇಳುವ ಮುಖಾಂತರ ಯಡ್ಡಿಗೆ ರಂಗವಾಗಿ ಮುಖಭಂಗ ಮಾಡಿದರು.

ಯಡ್ಡಿ ನೇತೃತ್ವದಲ್ಲಿ ಮೊನ್ನೆಯ ಲೋಕಸಭಾ ಚುನಾವಣೆಯಲ್ಲಿ 19 ಸ್ಥಾನಗಳನ್ನು ಗೆದ್ದರೂ ಯಡಿಯೂರಪ್ಪ ಪ್ರಶ್ನಾತೀತ, ...ತೀತ ನಾಯಕರಾಗಿ ಉಳಿದುಕೊಂಡಿಲ್ಲವೆಂಬುದನ್ನು ಈ ...ಮತೀಯ ಚಟುವಟಿಕೆಗಳು ಸೂಚಿಸುತ್ತದೆ. ವಾಸ್ತವವಾಗಿ ಇದಕ್ಕೆಲ್ಲ ...ಖ್ಯ ಕಾರಣ ಯಡ್ಡಿ ಹಾಕಿಕೊಂಡ 'ಶತ್ರು ಸಂಹಾರ' ಯೋಜನೆ. ಚುನಾವಣೆಯ ಫಲಿತಾಂಶ ಬಂದ ನಂತರ ಪಂಚಮಸಾಲಿ ...ಯತರ ನಾಯಕ ಬಸವರಾಜ್ ಯತ್ನಾಳ್ ...ನ್ನು ಪಕ್ಷದಿಂದ ಉಚ್ಚಾಟನೆ ಮಾಡುವ ...ಮೂಲಾಂತರ ಯಡ್ಡಿ ತನ್ನ ಶತ್ರು ಸಂಹಾರ ...ರ್ಯವನ್ನು ಅಧಿಕೃತವಾಗಿ ಆರಂಭಿಸಿದರು. ...ದ ನಂತರ ಈಶ್ವರಪ್ಪನನ್ನು ಬಲಿಕೊಡುವ ...ನೆ ನೀಡಿದರು. ಯಡ್ಡಿಯ ಅಂತರಾಳದ ...ವನ್ನು ಬಹಳ ಚೆನ್ನಾಗಿ ಅರ್ಥೈಸಿರುವ ...ಪ್ಪ ಕೂಡಲೇ ಜಾಗೃತಗೊಂಡು ...ದೆಯಿಂದ ಬಂಡಾಯದ ಬಾವುಟ ...ಸಿದರು.


...ಷ್ಣಯ್ಯಶೆಟ್ಟಿ

ಹೀಗೆ ಯಡ್ಡಿ ವಿರುದ್ಧ ಬೇರೆ ಬೇರೆ ...ನಗಳಲ್ಲಿ ಭಿನ್ನಮತೀಯ ಚಟುವಟಿಕೆಗಳು ...ಭವಾಗಿವೆ. ಒಂದೆಡೆ ಯಡ್ಡಿ ಸ್ಥಾನದಲ್ಲಿ ...ೇಶ್ ಶೆಟ್ಟರ್ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎಂಬ ...ಗೆ ಉತ್ತರ ಕರ್ನಾಟಕದ ಶಾಸಕರು ಸ್ಪಂದಿಸಿದ್ದಾರೆ. ಅದಕ್ಕೆ ...ಣಿಗಳು ಕೂಡಾ ಧ್ವನಿ ಸೇರಿಸಿರುವುದು ಅವರ ಬಲವನ್ನು ...ದೆ. ಮತ್ತೊಂದೆಡೆ ಇಂತಹ ಭಿನ್ನಮತೀಯ ಚಟುವಟಿಕೆಗಳನ್ನು ...ನಿಸುತ್ತಿರುವ ಕಾಂಗ್ರೆಸ್ ಪಕ್ಷ, ದಕ್ಷಿಣ ಭಾರತದಲ್ಲಿ ...ಧಿಕಾರದಲ್ಲಿರುವ ಏಕೈಕ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯುವ ...ಕಾಶವನ್ನು ಸದುಪಯೋಗಮಾಡಿಕೊಳ್ಳಲು ಕಾತುರದಿಂದ ...ಯುತ್ತಿದೆ.

ಈ ಮಧ್ಯೆ ಮೈಸೂರು ಮತ್ತು ಚಾಮರಾಜನಗರ ಲೋಕಸಭಾ ಕ್ಷೇತ್ರಗಳ ಉಸ್ತುವಾರಿಯನ್ನು ವಹಿಸಿಕೊಂಡಿರುವ ಸಚಿವೆ ಶೋಭಾ ಕರಂದ್ಲಾಜೆಯ ನಿರ್ಲಕ್ಷ್ಯತನದಿಂದಾಗಿ ಅವೆರಡನ್ನು ಪಕ್ಷ ಕಳೆದುಕೊಂಡಿದೆ ಎಂದು ಭಿನ್ನಮತೀಯರ ನಾಯಕರು ಕಿಡಿಕಾರುತ್ತಿದ್ದಾರೆ. ಅಷ್ಟೇ ಅಲ್ಲ, ಶೋಭಾ ರಾಜೀನಾಮೆ ನೀಡಬೇಕು ಎಂದು ಕೋರಸ್‌ನಲ್ಲಿ ಹಾಡುತ್ತಿದ್ದಾರೆ. ಭಿನ್ನಮತೀಯ ಶಾಸಕರ ಈ ನಿಲುವು ಯಡ್ಡಿಯ ನಿದ್ದೆಗೆಡಿಸಿದೆ.

ಯಡಿಯೂರಪ್ಪನವರ ಮತ್ತೊಂದು ರಾಜಕೀಯ ತಂತ್ರಗಾರಿಕೆ ಅವರಿಗೆ ಮುಳುವಾಗಿದೆ. ಲೋಕಸಭಾ ಚುನಾವಣೆಯ ನಂತರ ಲಿಂಗಾಯತ ಮುಖಂಡ ವಿ.ಸೋಮಣ್ಣನನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಅವರ ನಿರ್ಧಾರ ಯಡ್ಡಿಯ ಪರಮಾಪ್ತ ಶಿಷ್ಯರಿಗೆ ಇಷ್ಟವಿಲ್ಲ. ಚುನಾವಣೆ ಮುಗಿದದ್ದೇ ತಡ, ತಾನು ಒಂದೆರಡು ದಿನದಲ್ಲೇ ಯಡ್ಡಿ ಸಂಪುಟವನ್ನು ಸೇರುತ್ತಾನೆ ಎಂದು ಸ್ವತಃ ಸೋಮಣ್ಣ ಸಭೆ ಸಮಾರಂಭದಲ್ಲಿ ಹೇಳಿಕೊಳ್ಳುತ್ತಿರುವುದು ಉಳಿದವರಿಗೆ ಬಿಸಿ ತುಪ್ಪವಾಗಿದೆ. ಸಂಪುಟಕ್ಕೆ ಸೋಮಣ್ಣನ ಎಂಟ್ರಿಯನ್ನು ಯಾರೂ ವಿರೋಧಿಸುತ್ತಿಲ್ಲ, ಆದರೆ ಅವರಿಗೆ ಬಿಡಿಎ ಅಥವಾ ನಗರಾಭಿವೃದ್ಧಿಯಂತಹ ಹುಲುಸಾದ ಖಾತೆಯನ್ನು ನೀಡುವ ಸಿಎಂ ನಿರ್ಧಾರಕ್ಕೆ ಕಟ್ಟಾ ಸುಬ್ರಮಣ್ಯ ನಾಯ್ಡು, ಅಶೋಕ್‌ರಂತಹ ಯಡ್ಡಿ ಬಣದ ಸಚಿವರುಗಳೇ ತೀವ್ರವಾದ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಈ ಎಲ್ಲಾ ವಿರೋಧವನ್ನು ಕಡೆಗಣಿಸಿ ತಮ್ಮ ಕುಲಬಾಂಧವರಾದ ಸೋಮಣ್ಣನಿಗೆ ಹುಲುಸಾದ ಖಾತೆಯನ್ನು ನೀಡಲೇಬೇಕೆಂದು ಯಡ್ಡಿ ಹಠ ಹಿಡಿದಿರುವುದೇ ಈಗ ಭಿನ್ನಮತೀಯ ಚಟುವಟಿಕೆಗಳಿಗೆಲ್ಲಾ ಮೂಲ ಕಾರಣವಾಗಿದೆ.

ಅಷ್ಟಕ್ಕೆ ತೃಪ್ತಿ ಪಡದ ಭಿನ್ನಮತೀಯರು ಮಾಲೂರಿನ ಶಾಸಕ, ಯಡ್ಡಿಯ ಆಸ್ಥಾನದ ಕುಕವಿ ಸಚಿವ ಕೃಷ್ಣಯ್ಯ ಶೆಟ್ಟಿ ಕೂಡಾ ರಾಜೀನಾಮೆ ನೀಡಬೇಕು ಎಂದು ಧ್ವನಿ ಎತ್ತರಿಸಿದ್ದಾರೆ. ಯಡ್ಡಿ ಹೆಸರಿನಲ್ಲಿ ದೇವಸ್ಥಾನಗಳಲ್ಲಿ ಪೂಜೆ ಮಾಡಿಸುವ ಆದೇಶ ಹೊರಡಿಸಿ ಎಲ್ಲರಿಂದ ಉಗಿಸಿಕೊಂಡಿದ್ದ ಕೃಷ್ಣಯ್ಯ ಶೆಟ್ಟಿ ಮೊನ್ನೆ ಲೋಕಸಭಾ ಚುನಾವಣೆಯಲ್ಲಿ ಕೋಲಾರದ ಬಿಜೆಪಿ ಅಭ್ಯರ್ಥಿ ವೀರಯ್ಯ ಪರ ಪ್ರಚಾರ ಮಾಡಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಸತ್ಯ. ಕೃಷ್ಣಯ್ಯ ಶೆಟ್ಟಿ ವಿರುದ್ಧ ಶಿಸ್ತು ಕ್ರಮಕೈಗೊಳ್ಳಬೇಕೆಂದು ಸ್ವತಃ ವೀರಯ್ಯನೇ ಆಗ್ರಹಿಸಿದ್ದಾರೆ.

ಹೀಗೆ ಯಡ್ಡಿಗೆ ಆಪ್ತರಾದ ಶೋಭಾ ಕರಂದ್ಲಾಜೆ, ಸೋಮಣ್ಣನ ಮತ್ತು ಕೃಷ್ಣಯ್ಯ ಶೆಟ್ಟಿ ವಿರುದ್ಧ ಕೆಂಡಕಾರುತ್ತಿರುವ ಭಿನ್ನಮತೀಯರ ಗುರಿ ಸ್ವತಃ ಯಡ್ಡಿಯೇ. ಆದರೆ ಭಿನ್ನಮತದ ತೀವ್ರತೆಯನ್ನು ಅರಿಯದೇ ಯಡ್ಡಿ ಇನ್ನಷ್ಟು ಸರ್ವಾಧಿಕಾರ ಪ್ರವೃತ್ತಿಯಿಂದ ರಾಜ್ಯಭಾರ ನಡೆಸಿದರೆ ಅವರಿಗೆ ಮುಂದೆ ಗಂಡಾಂತರ ಕಾದಿದೆ.


ಸೋಮಣ್ಣ

ಆದರೆ ಇಂತಹ ಅಪಾಯವನ್ನು ಅರಿಯದಷ್ಟು ಯಡ್ಡಿ ದಡ್ಡರೇನೂ ಅಲ್ಲ. ಹೀಗಾಗಿ ಯಡ್ಡಿ 'ಶತ್ರು ಸಂಹಾರ' ಕಾರ್ಯವನ್ನು ಸದ್ಯಕ್ಕೆ ಬದಿಗಿಟ್ಟು ಈಗ ತೆರೆಮರೆಯಲ್ಲಿ 'ಶತ್ರು ಸಂಧಾನ' ಕಾರ್ಯವನ್ನು ಕೈಗೆತ್ತಿಕೊಂಡಿದ್ದಾರೆ. ತನ್ನ ಸ್ಥಾನವನ್ನು ಉಳಿಸಬೇಕಾದರೆ ಯಡ್ಡಿ ಈ ತ್ಯಾಗವನ್ನು ಮಾಡಲೇ ಬೇಕಾಗಿದೆ. ಇದಕ್ಕಾಗಿ ತನ್ನ ಮೆಚ್ಚಿನ ಶಿಷ್ಯೆ ಶೋಭಾ ಕರಂದ್ಲಾಜೆಯನ್ನು ಸಚಿವ ಸಂಪುಟದಿಂದ ಕೈಬಿಟ್ಟು ಆಕೆಯನ್ನು ಪಕ್ಷ ಸಂಘಟನೆಯಲ್ಲಿ ತೊಡಗಿಸುವ ಬಗ್ಗೆ ಚಿಂತಿಸಿದ್ದಾರೆ. ಶೋಭಾಳ ನಿರ್ಗಮನದಿಂದ ಖಾಲಿಯಾಗುವ ಗ್ರಾಮೀಣ ಅಭಿವೃದ್ಧಿ ಖಾತೆಯನ್ನು ತನ್ನ ಕುಲಬಾಂಧವರಾದ ಸೋಮಣ್ಣನವರಿಗೆ ನೀಡಿ ಅವರ ಮನವೊಲಿಸುವ ಕಾರ್ಯವನ್ನು ಆರಂಭಿಸಿದ್ದಾರೆ. ಇಂತಹ ಹಲವಾರು ಆಶ್ಚರ್ಯಕರ ಸಂಗತಿಗಳು ಕರ್ನಾಟಕದ ರಾಜಕೀಯ ರಂಗದಲ್ಲಿ ಮುಂದಿನ ದಿನಗಳಲ್ಲಿ ನಡೆಯಲಿವೆ.

● ಸದಾಶಿವ ಶೆಣೈ

...ತೀರ್ಪಿನ ಪ್ರಕಾರವೇ ಇಂಡಿಯನ್ ಬ್ಯೂರೋ ಆಫ್ ಮೈನ್ಸ್‌ನ ...ರಲ್ ಕಂಟ್ರೋಲರ್ ವಾಗ್ಮೋರೆ ಮೇ 27 ರಂದು ಜಂಟಿ ಸರ್ವೆಗೆ ...ಕ ಗೊತ್ತು ಮಾಡಿ ಆಂಧ್ರ ಮತ್ತು ಕರ್ನಾಟಕದ ಎಲ್ಲಾ ಸಂಬಂಧಪಟ್ಟ ...ಖಾ ಮುಖ್ಯಸ್ಥರಿಗೆ ಆದೇಶ ಹೊರಡಿಸುತ್ತಾರೆ. ಸರ್ವೆಯ ಪೂರ್ವ ...ಗೆಂದು ಎರಡು ದಿನಗಳ ಮುಂಚೆ ಅಂದರೆ ಮೇ 25 ರಂದು ...ಪೇಟೆಯ ಗುಂಡಾ ಫಾರೆಸ್ಟ್ ಗೆಸ್ಟ್‌ಹೌಸಿನಲ್ಲಿ ಎರಡೂ ರಾಜ್ಯಗಳ ...ಅಧಿಕಾರಿಗಳ ಸಭೆ ಕರೆಯುತ್ತಾರೆ. ವಿಚಿತ್ರವೆಂದರೆ ಆಂಧ್ರ ಮತ್ತು ಕರ್ನಾಟಕದ ...ಖಾತೆದ ಕೆಲ ಅಧಿಕಾರಿಗಳಷ್ಟೇ ಆ ಸಭೆಯಲ್ಲಿ ನಾಮಕಾವಸ್ತೆಗೆಂಬಂತೆ ...ರುತ್ತಾರೆಯೇ ಹೊರತು ಅತ್ಯಗತ್ಯವಾಗಿ ಉಪಸ್ಥಿತರಿರಲೇಬೇಕಿದ್ದ ಬಳ್ಳಾರಿ ... ಅನಂತಪುರದ ಜಿಲ್ಲಾಧಿಕಾರಿಗಳಿಬ್ಬರೂ ಉದ್ದೇಶಪೂರ್ವಕವಾಗಿ ಗೈರು ...ಹಾಜರಾಗುತ್ತಾರೆ!

...ಈ ಬಗ್ಗೆ ಕ್ರುದ್ಧರಾದ ವಾಗ್ಮೋರೆ ವಿಧಿಯಿಲ್ಲದೇ ಜಂಟಿ ಸರ್ವೆಯನ್ನು ...ಮುಂದೂಡುತ್ತಾರೆ. ಒಂದು ವಾರದ ಮೊದಲೇ ನೋಟೀಸ್ ಕೊಟ್ಟರೂ ...ನೆಪವೊಡ್ಡಿದ್ದ ಎರಡೂ ಜಿಲ್ಲೆಯ ಜಿಲ್ಲಾಧಿಕಾರಿಗಳು ಗೈರುಹಾಜರಾದದ್ದು ... ಮತ್ತು ಕರ್ನಾಟಕದ ಸರ್ಕಾರಗಳೆರಡೂ ಗಣಿಕಳ್ಳರ ಹಂಗಿಗೆ ಬಿದ್ದಿದ್ದರ ...ಬಿದಂತಿತ್ತು. ಹೈಕೋರ್ಟ್ ಆದೇಶದ ಪ್ರಕಾರವೇ ಜೂನ್ 8 ರ ಒಳಗೆ ... ಸರ್ವೆಯಾಗಬೇಕು. ಚಕ್ಕರ್ ಹಾಕಿದ್ದ ಬಳ್ಳಾರಿ ಜಿಲ್ಲಾಧಿಕಾರಿ ಶಿವಪ್ಪ ...ಳಿ ಕಂದಾಯ ಮಂತ್ರಿ ಕರುಣಾಕರ ರೆಡ್ಡಿಯ ನಿಯತ್ತಿನ ನಾಯಿ!

...ಆಂಧ್ರದ ಮುಖ್ಯಮಂತ್ರಿ ರಾಜಶೇಖರರೆಡ್ಡಿಯ ಮಗ ಜಗನ್‌ಮೋಹನ ...ೀ ಗಣಿರೆಡ್ಡಿಗಳ ಬಿಜಿನೆಸ್ ಪಾರ್ಟ್‌ನರ್. ಜಂಟಿ ಸರ್ವೆಗೆ ಜಿಲ್ಲಾಧಿಕಾರಿಗಳ ...ಗೈರುಹಾಜರಾಗಿದ್ದರ ವಿರುದ್ಧ IBM (Indian Bureau of Mines)ನ ...ರಲ್ ಕಂಟ್ರೋಲರ್ ವಾಗ್ಮೋರೆ ಮುಖ್ಯ ಕಾರ್ಯದರ್ಶಿಗೆ ಖಂಡನಾ ...ಬರೆಯುತ್ತಾರೆ. ಇದು ಗೊತ್ತಾಗಿದ್ದೇ ಯಡ್ಡಿಗೆ ಬಳ್ಳಾರಿ ಜಿಲ್ಲಾಧಿಕಾರಿಗೆ ...ಶಿಫಾರಸು ಮಾಡಿದ ಸಂಗತಿ ಕಂದಾಯ ಮಂತ್ರಿ ಕರುಣಾಕರ ರೆಡ್ಡಿಗೆ ...ಗಿದೆ. ಇದು ಗಣಿರೆಡ್ಡಿಗಳ ಸಿಟ್ಟಿಗೆ ಮೂಲ ಕಾರಣ.

...ಇದಕ್ಕೆ ತಕ್ಷಣ ಗಣಿ ಹಗರಣದ ತನಿಖೆಗೆಂದು ಲೋಕಾಯುಕ್ತರು ನೇಮಿಸಿದ್ದ ... ತಂಡದ ಮುಖ್ಯಸ್ಥರಾಗಿದ್ದ ಪ್ರಾಮಾಣಿಕ ಅರಣ್ಯಾಧಿಕಾರಿ ಯು.ವಿ. ...ನನ್ನು ಯಡ್ಡಿ ಸರ್ಕಾರ ತುಮಕೂರು ಎವಿಗೆ ಎತ್ತಂಗಡಿ ಮಾಡುತ್ತದೆ. ...ಪಿ ಮೂಲಕವೇ ರೆಡ್ಡಿಗಳು ಮಾಡಿಸಿದ ಈ ಎತ್ತಂಗಡಿಯ ವಿರುದ್ಧ ...ಲೋಕಾಯುಕ್ತ ಸಂತೋಷ್ ಹೆಗಡೆಯವರೇ ಮುಖ್ಯಮಂತ್ರಿಯ ವಿರುದ್ಧ ...ದುತ್ತಾರೆ. ಪತ್ರಿಕೆಗಳೂ ಈ ಬಗ್ಗೆ ವಿಶೇಷ ತನಿಖಾ ವರದಿ ಬರೆದದ್ದು ... ಮತ್ತಷ್ಟು ಮುಖಭಂಗವಾಗಿದೆ. ಅದಕ್ಕೆ ತೇಪೆ ಹಾಕಲು ಮತ್ತೆ ... ಸಿಂಗ್‌ರನ್ನು ಲೋಕಾಯುಕ್ತಕ್ಕೇ ತಂದ ಯಡ್ಡಿಯ ಈ ನಿರ್ಧಾರ ... ಗಾಯಕ್ಕೇ ಮೇಲೆ ಬರೆ ಎಳೆದಂತಾಗಿದೆ.


...ಜಂಟಿ ಸರ್ವೆಗೆ ಒತ್ತಾಯಿಸಿ ಕೇಂದ್ರಕ್ಕೆ ಪತ್ರ ಬರೆದದ್ದು, ಸರ್ವೆಗೆ ಸಹಕರಿಸಿದ ...ಯ ಜಿಲ್ಲಾಧಿಕಾರಿಗೆ ಛೀಮಾರಿ ಹಾಕಿದ್ದು ಮತ್ತು ನಿಷ್ಠುರಿ ಅರಣ್ಯಾಧಿಕಾರಿ ... ಸಿಂಗ್‌ರನ್ನು ಮತ್ತೆ ಗಣಿ ಹಗರಣದ ತನಿಖೆಗೇ ನೇಮಿಸಿದ್ದು ಯಡ್ಡಿ ... ರೆಡ್ಡಿಗಳ ಸಿಟ್ಟು ಕೆರಳಿಸಿದೆ. ಈ ಎಲ್ಲಕ್ಕೂ ಪ್ರತೀಕಾರವೆಂಬಂತೆ ಮೂವತ್ತು ...ಸ್ಥರ್‌ಗಳನ್ನು ಖರೀದಿಸಿ ರೆಡ್ಡಿಗಳು ಪ್ರಾರಂಭಿಸಬೇಕೆಂದಿದ್ದ ಹೆಲಿ ಟೂರಿಜಂ ... ಯಡ್ಡಿ ಕಲ್ಲು ಹಾಕಿದ್ದಾರೆ. ಸಾಲದ್ದಕ್ಕೆ ಬಳ್ಳಾರಿ ರೆಡ್ಡಿಗಳಿಗೆ ಪರಮಾಪ್ತರಂತಿದ್ದ ...ನನ್ನು ಎಮ್ಮೆಲ್ಲೆಗೂ ಯಡ್ಡಿ ಮಣೆ ಹಾಕಿಲ್ಲ.

...ಈ ಯಡ್ಡಿ ಸರ್ಕಾರದ ಹಿತಾಸಕ್ತರೆಂದು ಪೋಸು ಕೊಡುತ್ತಿದ್ದ ಗಣಿ ...ಗೆ ದೊಡ್ಡ ಆಘಾತವಾಗಿದ್ದು, ಕಳೆದ ಚುನಾವಣೆಯಲ್ಲಿ ಕೇಂದ್ರದಲ್ಲಿ ...ಗೆ ಅಧಿಕಾರ ಸಿಕ್ಕೇ ಸಿಗುತ್ತದೆಯೆಂಬ ಹುಮ್ಮಸ್ಸಿನಲ್ಲಿದ್ದವರಿಗೆ ಕಾಂಗ್ರೆಸ್ ಜಯಭೇರಿ ಭಾರಿಸಿದ್ದು ಜಂಘಾಬಲವನ್ನೇ ಉಡುಗಿಸಿದೆ. ಆಂಧ್ರದ ಮಟ್ಟಿಗೆ ರಾಜಶೇಖರ ರೆಡ್ಡಿಯ ಶ್ರೀರಕ್ಷೆಯಿದ್ದರೂ ಕರ್ನಾಟಕದ ವಿಷಯದಲ್ಲಿ ಹೈಕಮಾಂಡ್ ನಿರ್ದಾಕ್ಷಿಣ್ಯವಾಗಿ ರೆಡ್ಡಿಗಳನ್ನು ಧಮನಿಸುತ್ತದೆ. ಜಂಟಿ ಸರ್ವೆಯೇನಾದರೂ ನಡೆದು ರೆಡ್ಡಿಗಳ ಗಣಿ ಲೂಟಿ ಬಯಲಾಯಿತೆಂದರೆ ಇಡೀ ರೆಡ್ಡಿ ಸಂಪತ್ತು ಸ್ಥಿರಾಸ್ತಿ ಎಲ್ಲವನ್ನೂ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವಂತಾದರೆ ಅದು ರೆಡ್ಡಿ ಗ್ಯಾಂಗ್ ಪಾಲಿಗೆ ಸರ್ವನಾಶವೆ. ಇಂಥದೊಂದು ಅಪಾಯಕ್ಕೂ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದಕ್ಕೂ ತಾಳೆ ಹಾಕಿಯೇ ತಾನು ಯಡ್ಡಿಯ ವಿರೋಧಿಯೆಂದು ಕೇಂದ್ರದ ಕಾಂಗ್ರೆಸ್ಸಿಗೆ ಮನವರಿಕೆ ಮಾಡಿಕೊಡಲು ರೆಡ್ಡಿಗಳು ರಿಹರ್ಸಲ್ ಆರಂಭಿಸಿದ್ದಾರೆ. ಹೇಗಿದ್ದರೂ ಮುಖ್ಯಮಂತ್ರಿ ಯಡ್ಡಿ ನಮ್ಮ ಪಾಲಿಗೆ ಹಿತಶತ್ರುವೆ. ಬಿಜೆಪಿಯ ನಿಷ್ಠಾವಂತರ್‍ಯಾರೂ ಗಣಿ ರೆಡ್ಡಿಗಳನ್ನು ನಂಬುವುದಿಲ್ಲ. ಇವತ್ತಲ್ಲ ನಾಳೆ ಅಪಾಯವೆಂದೇ ಬಿಜೆಪಿ ಭಾವಿಸುತ್ತದೆ. ಹೀಗಿರುವಾಗ ಒಂದೆಡೆ ಬಿಜೆಪಿಯಲ್ಲಿದ್ದೂ ಮತ್ತೊಂದೆಡೆ ಕಾಂಗ್ರೆಸ್ ವಿಶ್ವಾಸಕ್ಕೂ ಪಾತ್ರರಾಗುವ ಮೂಲಕ ಜಂಟಿ ಸರ್ವೆಯೆಂಬ ತಕ್ಷಣದ ಅಪಾಯದಿಂದ ಬಚಾವಾಗುವ ಕುತಂತ್ರಕ್ಕೆ ರೆಡ್ಡಿ ಗ್ಯಾಂಗ್ ಕೈಹಾಕಿದೆ.


ಆನಂದ್ ...

ಹೇಗೂ ಬೆಂಗಳೂರಿನ ವಿಕಾಸ ಸಂಕಲ್ಪ ರ್‍ಯಾಲಿಗೆ ಯಡ್ಡಿಯೇ ಆಹ್ವಾನ ಕೊಟ್ಟಿಲ್ಲವೆಂದ ಮೇಲೆ ನಾವ್ಯಾಕೆ ಹೋಗಬೇಕೆಂದು ರೆಡ್ಡಿಗಳು ಲೆಕ್ಕ ಹಾಕಿದ್ದಾರೆ. ಆ ಮಟ್ಟಿಗೆ ರೆಡ್ಡಿಗಳ ರೊಟ್ಟಿಯೇ ಜಾರಿ ತುಪ್ಪಕ್ಕೆ ಬಿದ್ದಂತಾಗಿದೆ. ಅತ್ತ ಶಿವಮೊಗ್ಗದಲ್ಲಿ ಮುಖ್ಯಮಂತ್ರಿ ವಿರುದ್ಧ ಸ್ವತಃ ಈಶ್ವರಪ್ಪನವರ ಕಿಡಿಕಾರಿದ್ದು ರೆಡ್ಡಿಗಳ ಪಾಲಿಗೆ ಮತ್ತಷ್ಟು ಅನುಕೂಲ ವಾಗಿದೆ. ಈಶ್ವರಪ್ಪ ಕಿಡಿಕಾರಿದ ಮಾರನೇ ದಿನವೇ ಬಳ್ಳಾರಿ ಶಾಸಕ ಸೋಮಶೇಖರ ರೆಡ್ಡಿ ಪತ್ರಿಕಾಗೋಷ್ಠಿ ಕರೆದು ಯಡ್ಡಿ ವಿರುದ್ಧ ಕ್ಯಾತೆ ತೆಗೆದದ್ದು, ತಮ್ಮ ಉಪ್ಪು ತಿಂದ ಒಂದಷ್ಟು ಮಂದಿ ಶಾಸಕರನ್ನು ಕಲಹಕ್ಕೆ ಶ್ರೀರಾಮುಲು ನಡೆಸಿದ್ದು, ಯಡ್ಡಿ ಸರ್ಕಾರಕ್ಕೆ ಮಾತ್ರ ಈತನಕ ಒಂದೇ ಒಂದು ಜಾಹೀರಾತು ಕೊಡದೇ ತೆಪ್ಪಗಿರುವುದು ಇತ್ಯಾದಿಗಳೆಲ್ಲ ಮೇಲುನೋಟಕ್ಕೆ ಗಣಿ ರೆಡ್ಡಿಗಳ ಬಹಿರಂಗ ಬಂಡಾಯದಂತೆ ಕಾಣುತ್ತಿದೆ. ವಾಸ್ತವವಾಗಿ ಅಂಥದೊಂದು ಬುಡಮೇಲು ಕೃತ್ಯಕ್ಕೆ ಕೈಹಾಕಲೇಬೇಕಾದ ಅನಿವಾರ್ಯತೆಯೂ ರೆಡ್ಡಿಗಳಿಗಿದೆ. ಯಡ್ಡಿಗೆ ನಿಷ್ಠರಾಗಿ ಬಿಜೆಪಿಯ ಕಟ್ಟಾಳುಗಳಂತೆ ಇದ್ದರೆ ನುಂಗಲು ಕಾಂಗ್ರೆಸ್ ಹವಣಿಸುತ್ತದೆ. ಅತ್ತ ಆಂಧ್ರದ ಮುಖ್ಯಮಂತ್ರಿಯ ನಂಟಿನ ಕಾರಣಕ್ಕೆ ಇತ್ತ ಯಡ್ಡಿ ಕೂಡ ನಂಬದ ಸ್ಥಿತಿ ತಲುಪಿದ್ದಾಗಿದೆ.


...


ವರ್ತೂ...

ಒಂದಂತೂ ಸತ್ಯ, ಕಾಂಗ್ರೆಸ್ಸಿಗೆ ಆಪ್ತರಾದರೂ ಬಿಜೆಪಿಯಲ್ಲೇ ಇದ್ದರೂ ರೆಡ್ಡಿಗಳ ಗುರಿ ಮಾತ್ರ ಒಂದೇ. ಅದು ತಮ್ಮ ಗಣಿ ಲೂಟಿಯ ಹಿತರಕ್ಷಣೆ ಮತ್ತು ಮಾಡಿದ ಪಾಪಕ್ಕೆ ಶಿಕ್ಷೆಯಿಂದ ಬಚಾವಾಗುವುದಷ್ಟೇ. ಒಂದೆಡೆ ಯಡ್ಡಿಯ ಬ್ಲ್ಯಾಕ್‌ಮೇಲ್ ಮಾಡುತ್ತಲೇ ಜಂಟಿ ಸರ್ವೆಯಾಗದಂತೆ ಮಾಡುವುದು ಮತ್ತೊಂದೆಡೆ ಕಾಂಗ್ರೆಸ್ ಹಿತೈಷಿಗಳಂತೆ ನಟಿಸಿ ಬೇಳೆ ಬೇಯಿಸಿಕೊಳ್ಳುವುದು.

● ರಾ. ಸೋಮನಾಥ್

ಕುದುರೆ ಖರೀದಿಗೂ ಹೇಸದ ರೆಡ್ಡಿ ಗ್ಯಾಂಗ್

ಅದಿರು ಲೂಟಿಗಾಗಿ ಯಾವುದಕ್ಕೂ ಹೇಸದ ಗಣಿರೆಡ್ಡಿಗಳ ತೆಕ್ಕೆಯಲ್ಲಿರುವ ಒಟ್ಟು ಶಾಸಕರ ಸಂಖ್ಯೆ ಎಷ್ಟು?

ಪತ್ರಿಕಾಗೋಷ್ಠಿ ಕರೆದು 'ನಾವು ಇಪ್ಪತ್ತು ಮಂದಿ ಎಮ್ಮೆಲ್ಲೆಗಳು ಸಭೆ ಸೇರಿದ್ದೀವಿ' ಎಂದ ಸೋಮಶೇಖರ ರೆಡ್ಡಿಯ ಮಾತಿಗೂ ಜೂನ್ 2 ರ ಮಂಗಳವಾರದಂದು ಹೊರಣಗಲ್‌ನ ಜಿಂದಾಲ್ ಗೆಸ್ಟ್‌ಹೌಸಿನ ಸಭೆ ಮುಗಿಸಿ 'ನಾವು ಒಟ್ಟು 25 ಮಂದಿ ಶಾಸಕರಿದ್ದೀವಿ...!' ಎಂದು ಸುರಪುರದ ಶಾಸಕ ರಾಜೂಗೌಡ ಹೇಳಿದ್ದಕ್ಕೂ ದೊಡ್ಡ ವ್ಯತ್ಯಾಸವೇನಿಲ್ಲ.

ಸದ್ಯ ಗಣಿ ರೆಡ್ಡಿಗಳ ಬುಟ್ಟಿಯಲ್ಲಿ ಕಮ್ಮಿಯೆಂದರೂ 25 ಮಂದಿ ಎಮ್ಮೆಲ್ಲೆಗಳಿರುವುದಂತೂ ಸತ್ಯ. ಬಳ್ಳಾರಿಯ ಸೋಮಶೇಖರ್ ರೆಡ್ಡಿ, ಬಳ್ಳಾರಿ ಗ್ರಾಮೀಣದ ಶ್ರೀರಾಮುಲು, ಸಿರಗುಪ್ಪಿಯ ಸೋಮಲಿಂಗಪ್ಪ, ಕಂಪ್ಲಿಯ ಸುರೇಶ್ ಬಾಬು, ಕೂಡ್ಲಿಗಿಯ ನಾಗೇಂದ್ರ, ಹೂವಿನಹಡಗಲಿಯ ಚಂದ್ರಾನಾಯ್ಕ, ಹೊಸಪೇಟೆಯ ಆನಂದ್‌ಸಿಂಗ್, ಹಗರಿಬೊಮ್ಮನಹಳ್ಳಿಯ ನೇಮಿರಾಜ ನಾಯ್ಕ, ಹರಪನಹಳ್ಳಿಯ ಕರುಣಾಕರರೆಡ್ಡಿ, ಕಾರವಾರದ ಆನಂದ್ ಅಸ್ನೋಟಿಕರ್, ದೇವದುರ್ಗದ ಶಿವನಗೌಡ ನಾಯಕ, ಅರಬಾವಿಯ ಬಾಲಚಂದ್ರ ಜಾರಕಿಹೊಳಿ, ಸುರಪುರದ ರಾಜೂಗೌಡ, ಇತ್ಯಾದಿ ಗಣಿರೆಡ್ಡಿಗಳ ಕಟ್ಟರ್ ಬೆಂಬಲಿಗ ಶಾಸಕರ ಸಂಖ್ಯೆಯೇ ಹದಿಮೂರಾಗುತ್ತದೆ. ರಾಯಚೂರಿನ ಎಮ್ಮೆಲ್ಸಿ ಮಸ್ಕಿ ಕೂಡ ಗಣಿ ರೆಡ್ಡಿಗಳ ಋಣಾನುಭವಿಯೇ. ಈ ಹದಿಮೂರು ಶಾಸಕರಲ್ಲದೇ ಪಕ್ಷೇತರರಾದ ಗೂಳಿಹಟ್ಟಿ ಶೇಖರ್, ಡಿ. ಸುಧಾಕರ್, ನರೇಂದ್ರಸ್ವಾಮಿ, ಪಾವಗಡದ ವೆಂಕಟರಮಣಪ್ಪ ಮತ್ತು ವರ್ತೂರು ಪ್ರಕಾಶ್ ಸೇರಿದರೆ ಒಟ್ಟು ಹದಿನೆಂಟು ಎಮ್ಮೆಲ್ಲೆಗಳು ರೆಡ್ಡಿಗಳ ಬೆನ್ನಿಗಿದ್ದಂತಾಯ್ತು.

ಇವರಲ್ಲದೇ ಮೈಸೂರಿನ ಶಂಕರಲಿಂಗೇಗೌಡ, ಹೊನ್ನಾಳಿಯ ರೇಣುಕಾಚಾರ್ಯ, ಚನ್ನಗಿರಿಯ ಮಾಡಾಳು ವಿರೂಪಾಕ್ಷಪ್ಪ, ಬಿಜಾಪುರದ ಸಾರ್ವಭೌಮ ಬಗಲಿ, ಅಪ್ಪು ಪಟ್ಟಣ ಶೆಟ್ಟಿ ಕೂಡ ತಮ್ಮ ಬೆಂಬಲಿಗರೆಂದೇ ರೆಡ್ಡಿ ಗ್ಯಾಂಗ್ ಹೇಳಿಕೊಳ್ಳುತ್ತದೆ. ರೆಡ್ಡಿಗಳು ಏನೇ ಲಗಾಟ ಹಾಕಿದರೂ ಐವರು ಪಕ್ಷೇತರರು ಮತ್ತು ಮೈಸೂರಿನ ಶಂ.ಲಿಂ.ಗೌಡ ಮತ್ತು ನಾಲ್ವರು ಲಿಂಗಾಯತ ಶಾಸಕರ್‍ಯಾರೂ ಶಾಶ್ವತವಾಗಿ ರೆಡ್ಡಿಗಳ ಬೆನ್ನಿಗೆ ನಿಲ್ಲಲಾರರು. ಪ್ರತಿಯೊಬ್ಬರಿಗೂ ಅವರವರದೇ ಆದ್ಯತೆ ಮತ್ತು ಉಸಾಬರಿಗಳಿರುವಾಗ ತಮ್ಮ ಸ್ವಾರ್ಥವನ್ನು ಬದಿಗೊತ್ತಿ ರೆಡ್ಡಿಗಳಿಗೇಕೆ 'ತ್ಯಾಗ' ಮಾಡುತ್ತಾರೆ?

ರೆಡ್ಡಿಗಳಿಗೂ ಇದು ಗೊತ್ತಿದೆ. ಒಂದು ವೇಳೆ 16 ಗಣಿಗಳ ಪುನರಾರಂಭಕ್ಕೆ ಯಡ್ಡಿ ಮಣಿಯದೇ ಹೋದರೆ ಕುದುರೆ ಖರೀದಿಗೂ ರೆಡ್ಡಿಗಳು ರೆಡಿಯಾಗಿದ್ದಾರೆ. ನೂರು ಕೋಟಿ ಸುರಿದಾದರೂ ಒಂದಷ್ಟು ಬಿಜೆಪಿ ಶಾಸಕರನ್ನು ಖರೀದಿಸುತ್ತಾರೆ. ಜಗದೀಶ್ ಶೆಟ್ಟರ್‌ಗೆ ಮುಖ್ಯಮಂತ್ರಿ ಪಟ್ಟ ಕಟ್ಟುತ್ತೇನೆಂದು ಈಗಾಗಲೇ ರೈಲು ಬಿಡುತ್ತಿರುವ ಗಣಿ ರೆಡ್ಡಿಗಳಿಗೆ 'ಏನೇ ಸರ್ಕಸ್ ಮಾಡಿದರೂ ಅಂತಿಮವಾಗಿ ತಮ್ಮ ಸಂಖ್ಯೆ ಇಪ್ಪತ್ತನ್ನು ಮೀರಲಾರದೆಂಬುದು ಗೊತ್ತಾಗಿದೆ. ಹಾಗಿದ್ದೂ ಬ್ಲ್ಯಾಕ್‌ಮೇಲ್ ಬುದ್ಧಿ ಬಿಡಬೇಕಲ್ಲ? ಅದಕ್ಕೆ ಕಂಡಕಂಡ ಆತೃಪ್ತರ ಹೆಸರನ್ನೆಲ್ಲ ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತಾರೆ. ಮೈಸೂರಿನ ಶಂಕರಲಿಂಗೇಗೌಡರಂಥ 'ಸಜ್ಜನ' ಯಾವುದೇ ಕಾರಣಕ್ಕೂ ಗಣಿ ರೆಡ್ಡಿಗಳ ಜೊತೆ ಕೈಜೋಡಿಸುವುದುಂಟಾ?

▸▸▸10

ಆರೆಸ್ಸೆಸ್ ಮುಖವಾಣಿ ಈಶ್ವರಪ್ಪ

ವಿರುದ್ಧ ಆರೆಸ್ಸೆಸ್ ಗೊಣಗಾಡುತ್ತಲೇ ಇತ್ತಾದರೂ ಅದು ಟೂ ಬಿಡುವಷ್ಟು ವಿಪರೀತಕ್ಕೆ ಹೋಗಿರಲಿಲ್ಲ. ಮೊದಲಬಾರಿಗೆ ಸಂಘಪರಿವಾರದ ಪಿತ್ತ ನೆತ್ತಿಗೇರಿದ್ದು ಮಗ ರಾಘವೇಂದ್ರನನ್ನು ಶಿವಮೊಗ್ಗದ ಲೋಕಸಭಾ ಅಭ್ಯರ್ಥಿಯನ್ನಾಗಿ ಘೋಷಿಸಿದಾಗಲೇ ಅದು ಯಡ್ಡಿ ಆರೆಸ್ಸೆಸ್ ಅಂಕೆಯನ್ನು ಮೀರಿ ಬೆಳೆಯುತ್ತಿದ್ದಾರೆಂಬ ಸ್ಪಷ್ಟ ಸೂಚನೆಯಾಗಿತ್ತು.

ಜಾತಿಯ ಕಾರಣಕ್ಕಾಗಿ ಕರ್ನಾಟಕದ ಸಮಸ್ತ ಲಿಂಗಾಯತರೆಲ್ಲ ತನ್ನ ಬೆನ್ನಿಗಿರುವಾಗ ಆರೆಸ್ಸೆಸ್ ಯಾವ ಲೆಕ್ಕ? ಎಂಬ ಆತ್ಮವಿಶ್ವಾಸಕ್ಕೆ ಬಿದ್ದ ಯಡ್ಡಿ ಪಕ್ಷ ಮತ್ತು ಪರಿವಾರಗಳನ್ನು ಮೀರಿದ ನಿರ್ಧಾರ ಕೈಗೊಂಡಿದ್ದು ಸಹಜವಾಗೇ ಇತ್ತಾದರೂ ಆರೆಸ್ಸೆಸ್ ಮಾತ್ರ ಒಳಗೊಳಗೇ ಕುದಿಯುತ್ತಿತ್ತು.

ಯಾವತ್ತು ಮಗ ರಾಘವೇಂದ್ರನನ್ನು ಶಿವಮೊಗ್ಗದ ಅಭ್ಯರ್ಥಿಯನ್ನಾಗಿ ಯಡ್ಡಿ ಘೋಷಿಸಿದರೋ ಆರೆಸ್ಸೆಸ್ ಚೆಡ್ಡಿಗಳಿಗೊಂದು ನೆಪ ಸಿಕ್ಕಂತಾಯ್ತು. ಶಿವಮೊಗ್ಗ ಲೋಕಸಭೆಗೆ ಪಕ್ಷದಲ್ಲೇ ಬೇಕಾದಷ್ಟು ನಿಷ್ಠಾವಂತ ಕಾರ್ಯಕರ್ತರಿದ್ದಾರೆ. ಬಿಜೆಪಿಯಲ್ಲಿ ವಂಶಾಡಳಿತ ಶುರುವಾಗೋದಾದ್ರೆ ಪಕ್ಷನಿಷ್ಠ ಕಾರ್ಯಕರ್ತರಿಗೆ ಏನು ಬೆಲೆ ಕೊಟ್ಟಂತಾಯ್ತು? ಎಂದು ಬೆಂಗಳೂರಿನ ಸಭೆಯಲ್ಲೇ ಯಡ್ಡಿಯ ಮುಖಕ್ಕೆ ಹೊಡೆದಂತೆ ಹೇಳಿಬಿಟ್ಟರು ಈಶ್ವರಪ್ಪ.

ಶಿವಮೊಗ್ಗದ ಚುನಾವಣೆಯಲ್ಲೂ ಇಂಥದೇ ವಿರೋಧವನ್ನು ಯಡ್ಡಿ ಎದುರಿಸಬೇಕಾಯ್ತು. ಪಕ್ಕಾ ಪಕ್ಷನಿಷ್ಠರಾಗಿದ್ದ ಭಾನುಪ್ರಕಾಶ್, ಬಿಜೆಪಿ ವತಿಯಿಂದ ಮತದಾರರಿಗೆ ಹಣ ಹೆಂಡ ಹಂಚಬಿದ್ದಿಲ್ಲ. ಒಮ್ಮೆ ಅದರ ರುಚಿ ಸಿಕ್ಕಿತೆಂದರೆ ಪ್ರತಿಬಾರಿಯೂ ಮತದಾರ ಅದನ್ನೇ ಕೇಳುತ್ತಾನೆ. ಅಲ್ಲಿಗೆ ಬಿಜೆಪಿ ಕೂಡ ಕಾಂಗ್ರೆಸ್-ಜೆಡಿಎಸ್‌ಗಳಂತೆ ಭ್ರಷ್ಟರ ಪಕ್ಷವೆಂದು ತಾನೇ ಹೇಳಿಕೊಂಡಂತಾಗುತ್ತದೆ ಎಂಬುದು ಈಶ್ವರಪ್ಪನವರ ವಾದವಾಗಿತ್ತು.

ಶಿವಮೊಗ್ಗ ನಗರ ಮತ್ತು ಶಿವಮೊಗ್ಗದ ಗ್ರಾಮೀಣ ಭಾಗಗಳಲ್ಲಿ ಮಾಮೂಲಿನಂತೆ ತನ್ನದೇ ಶೈಲಿಯಲ್ಲಿ ರಾಘು ಪರ ಮತಯಾಚನೆಗಿಳಿದ ಈಶ್ವರಪ್ಪ ಒಳಗೊಳಗೇ ಬಂಗಾರಪ್ಪನವರ ಜೊತೆ ಕೈಜೋಡಿಸಿದ್ದಾರೆಂದು ಭಾವಿಸಿದ ಯಡ್ಡಿ ಈಶ್ವರಪ್ಪನವರ ಪ್ರಾಬಲ್ಯವಿದ್ದೆಡೆಯೆಲ್ಲ ಪರ್ಯಾಯವಾದ ನೆಟ್‌ವರ್ಕ್ ರೂಪಿಸಿ ಬೇಕಾಬಿಟ್ಟಿ ಹಣ ಹಂಚ ತೊಡಗಿದ್ದು ಈಶ್ವರಪ್ಪರನ್ನು ಇನ್ನಷ್ಟು ಕಂಗೆಡಿಸಿದೆ. ಮತ್ತೊಂದೆಡೆ ಶಿವಮೊಗ್ಗದ ಆರೆಸ್ಸೆಸ್ ನಿಷ್ಠರೇ ರಾಘು ಆರ್ಭಟಕ್ಕೆ ರೋಸತ್ತಿದ್ದಾರೆ.

ನಿರೀಕ್ಷೆಯಂತೆಯೇ ಫಲಿತಾಂಶ ಹೊರಬಿತ್ತು. ಶಿವಮೊಗ್ಗ ಮತ್ತು ಗ್ರಾಮೀಣ ಭಾಗದಲ್ಲಿ ಕಳೆದ ಬಾರಿಗಿಂತಲೂ ಬಿಜೆಪಿಗೆ ಕಮ್ಮಿ ಮತ ಬಂದಿದ್ದು ಈಶ್ವರಪ್ಪನವರ ವಿರುದ್ಧದ ಯಡ್ಡಿಯ ಗುಮಾನಿಗಳನ್ನು ಉಲ್ಬಣಿಸಿತ್ತು. ಈ ಬಗ್ಗೆ ಶಿಕಾರಿಪುರದಲ್ಲಿ ನಡೆದ ರಾಘು ಅಭಿನಂದನಾ ಸಭೆಯಲ್ಲಿ ಯಡ್ಡಿ ಬಹಿರಂಗವಾಗೇ ಈಶ್ವರಪ್ಪನವರ ವಿರುದ್ಧ ಕಿಡಿಕಾರಿಬಿಟ್ಟರು. ಅದರ ಮರುದಿನ ಅಂದರೆ ಮೇ 29 ರಂದು ಶಿವಮೊಗ್ಗದ ಕೋಟೆ ಆಂಜನೆಯಸ್ವಾಮಿ ದೇವಸ್ಥಾನದ ಯಾಗಶಾಲೆಯ



ಶಿವಮೊಗ್ಗದ ಹಿರಿಯ ಬಿಜೆಪಿ ಮುಖಂಡ ಆರ್.ಕೆ. ಸಿದ್ರಾಮಣ್ಣ, ಬಿಜೆಪಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜ್ಯೋತಿಪ್ರಕಾಶ್ ಮತ್ತು ದಿ.ಎಚ್. ಶಂಕರಮೂರ್ತಿಯಾಗಿ ಬಹುತೇಕ ಪಕ್ಷನಿಷ್ಠ ನಾಯಕರೆಲ್ಲ ಮಗನಿಗೆ ಟಿಕೆಟ್ ಕೊಟ್ಟದ್ದನ್ನು ಒಳಗೊಳಗೆ ಖಂಡಿಸಿದ್ದರು. ಸ್ವತಃ ಈಶ್ವರಪ್ಪ ಶಿವಮೊಗ್ಗದಲ್ಲಿ ಕೂತು ರಾಘವೇಂದ್ರನ ಗೆಲುವಿಗೆ ಹೆಣಗಾಡಿದ್ದು ಕೂಡಾ ಸುಳ್ಳೇನಲ್ಲ. ಆದರೆ ಚೆಡ್ಡಿಗಳಿಗೆ ಮುಜುಗರ ಮತ್ತು ಮುಖಭಂಗ ಒಟ್ಟೊಟ್ಟಿಗೆ [illegible]ರಾದವು. ಮಗನ ಪರವಾಗಿ ಹಣ, ಹೆಂಡ, ದುಡ್ಡು ಹಂಚಲು ನಿಂತ ಯಡ್ಡಿ ಗ್ಯಾಂಗ್‌ಗೆ ಈಶ್ವರಪ್ಪನವರ ಮೇಲೆ ಅನುಮಾನ. ಏಕೆಂದರೆ ಈಶ್ವರಪ್ಪ ಯಡ್ಡಿ ಮಕ್ಕಳಂತೆ ಹಣ-ಹೆಂಡ ಹಂಚದೇ ಮಾಮೂಲಿನಂತೆ ಬಿಜೆಪಿ ಪರ ಕೈಮುಗಿದು ಓಟು ಕೇಳತೊಡಗಿದ್ದರು. ಈತನಕ

ಉದ್ಘಾಟನಾ ಕಾರ್ಯಕ್ರಮಕ್ಕೆ ಬಂದ ಯಡ್ಡಿ ಮತ್ತೆ ಈಶ್ವರಪ್ಪನವರ ವಿರುದ್ಧ ಕಿಡಿಕಾರಿಬಿಟ್ಟರು. ಯಾಗಶಾಲೆಯ ಉದ್ಘಾಟನೆಗೆಂದು ಬಂದಿದ್ದ ಬೇಲಿ ಮಠದ ಶಿವರುದ್ರ ಸ್ವಾಮೀಜಿ ಮತ್ತು ವೀದೇಶಾನಂದ ಸರಸ್ವತಿ ಸ್ವಾಮೀಜಿಯವರ ಸಮ್ಮುಖದಲ್ಲೇ ಶಿವಮೊಗ್ಗ ನಗರ ಮತ್ತು ಗ್ರಾಮೀಣ ಭಾಗದಲ್ಲಿ ಬಿಜೆಪಿಗೆ ಕಮ್ಮಿ ಮತ ಬಂದ ಬಗ್ಗೆ ಪರೋಕ್ಷವಾಗಿ ಈಶ್ವರಪ್ಪನವರನ್ನು ಕುಟುಕಿದ ಯಡ್ಡಿ ಇನ್ನೂ ಒಂದು ತಪ್ಪೆಸಗಿದ್ದರು.

ಅದು ಆರೆಸ್ಸೆಸ್ ವಿರುದ್ಧದ ಯಡ್ಡಿಯ ಅಸಹನೆಯಾಗಿತ್ತು. ಶಿವಮೊಗ್ಗದ ತನ್ನ ಮನೆಯಿಂದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಹೋಗುವ ಮಾರ್ಗದಲ್ಲೇ [illegible]ನಗಿರಿ ಶಿಕ್ಷಣ ಸಂಸ್ಥೆಯಿದೆ. ಅಲ್ಲಿ ಕಳೆದೆರಡು ವಾರಗಳಿಂದ ಆರೆಸ್ಸೆಸ್‌ನ ರಾಜ್ಯಮಟ್ಟದ ತರಬೇತಿ ಶಿಬಿರ ನಡೆಯುತ್ತಿತ್ತು. ಮೈ.ಚ. ಜಯದೇವ, ಕಲ್ಲಡ್ಕ ಪ್ರಭಾಕರ ಭಟ್ಟ, ನು. ರಾಮಣ್ಣ ಮಂಘೇಶ್ ಭೇಂಡೆಯಂಥ ಆರೆಸ್ಸೆಸ್‌ನ ಅತ್ಯುಚ್ಚ ನಾಯಕರು ಭಾಗವಹಿಸಿದ್ದ ಆ ಶಿಬಿರದಲ್ಲಿ ತಾನೊಬ್ಬ ಮಂತ್ರಿ ಎಂಬುದನ್ನೇ ಮರೆತು ಕಳೆದ ಮೂರು ದಿನಗಳಿಂದ ಯಕಶ್ಚಿತ್ ಸ್ವಯಂಸೇವಕನಂತೆ ಕೆಲಸ ಮಾಡುತ್ತಿದ್ದ ಈಶ್ವರಪ್ಪನವರ ಬಗ್ಗೆ ಆರೆಸ್ಸೆಸ್ ನಾಯಕರೆಲ್ಲ ಮೆಚ್ಚುಗೆ ಸೂಚಿಸಿದ್ದಾರೆ.


ಆದರೆ ಶಿವಮೊಗ್ಗಕ್ಕೆ ಬಂದು ಶಿಬಿರದ ಎದುರಿನಿಂದ ಹಾದು ಹೋಗಿಯೂ ಕಾಟಾಚಾರಕ್ಕೂ ಒಮ್ಮೆ ಶಿಬಿರಕ್ಕೆ ಭೇಟಿ ನೀಡದ ಮುಖ್ಯಮಂತ್ರಿಯ ವಿರುದ್ಧ ಆರೆಸ್ಸೆಸ್ ನಾಯಕರು ಸಿಟ್ಟಾಗಿದ್ದಾರೆ. ಅದೇ ದಿನ ಬಹಿರಂಗವಾಗಿ ಈಶ್ವರಪ್ಪನವರ ವಿರುದ್ಧ ಹರಿಹಾಯ್ದ ಮುಖ್ಯಮಂತ್ರಿಯ ವರ್ತನೆಯೂ ಚರ್ಚೆಗೆ ಬಂದಿದೆ. ಮಗನನ್ನು ಲೋಕಸಭಾ ಅಭ್ಯರ್ಥಿ ಮಾಡಿದ್ದು, ಬೇಕಾಬಿಟ್ಟಿ ರೊಕ್ಕ ಹಂಚಿದ್ದು, ತಾನು ಮುಖ್ಯಮಂತ್ರಿಯಾಗಿದ್ದೇ ಲಿಂಗಾಯತರ ಬೆಂಬಲದಿಂದ ಎಂಬ ಹಮ್ಮು ಇತ್ಯಾದಿಗಳೆಲ್ಲ ಮುಂದೊಮ್ಮೆ ಪಕ್ಷಕ್ಕೆ ಮುಳುವಾಗಲಿದೆಯೆಂದು ಆರೆಸ್ಸೆಸ್ ವರಿಷ್ಠರು ನಿರ್ಧರಿಸಿದ್ದಾರೆ. ಜಾತಿಕಾರಣಕ್ಕೆ ಯಡ್ಡಿಯನ್ನು ಬೆಂಬಲಿಸುತ್ತಿದ್ದ ಮೈ.ಚ. ಜಯದೇವ ಕೂಡ ಉಳಿದ ಆರೆಸ್ಸೆಸ್ ನಾಯಕರ ವಾದಕ್ಕೆ ಮಣಿದು ಮನಸ್ಸು ಬದಲಿಸಿದ್ದಾರೆ.

ಯಡ್ಡಿ ಉಪಮುಖ್ಯಮಂತ್ರಿಯಾದ ನಂತರದಿಂದ ಈತನಕ ತನ್ನನ್ನು ತುಳಿಯಲು ನಡೆಸಿದ ಎಲ್ಲಾ ಸಂಚುಗಳನ್ನು ಈಶ್ವರಪ್ಪ ಆರೆಸ್ಸೆಸ್ ವರಿಷ್ಠರ ಮುಂದಿಟ್ಟು ಕಣ್ಣೀರಿಟ್ಟಿದ್ದಾರೆ. ಶಿವಮೊಗ್ಗದ ಉಸ್ತುವಾರಿ ಮಂತ್ರಿಗಿರಿ ಕೊಡದೇ ಅದನ್ನು ಯಡ್ಡಿಯೇ ಇಟ್ಟುಕೊಂಡಿದ್ದು, ಗೃಹ ಖಾತೆಯಂತಹ ಪ್ರಭಾವಿ ಖಾತೆಗೆ ಬದಲು ಸಾಧಾರಣವಾದ ಇಂಧನ ಖಾತೆ ಕೊಟ್ಟಿದ್ದು, ಬದಲಾಗಿ ಕರಂದ್ಲಾಜೆಗೆ ಮೈಸೂರು ಜಿಲ್ಲಾ ಉಸ್ತುವಾರಿ ಮಂತ್ರಿಗಿರಿ ಕೊಟ್ಟಿದ್ದು ಎಲ್ಲವನ್ನೂ ಆರೆಸ್ಸೆಸ್ ವರಿಷ್ಠರ ತಲೆಗೆ ಹಾಕಿದ ಈಶ್ವರಪ್ಪ ಯಡ್ಡಿಯ ಜಾತಿ ಲಾಬಿಯನ್ನೂ ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ.

ಪಕ್ಷವನ್ನೂ ಮೀರಿ ಯಡ್ಡಿ ಬೆಳೆದು ಬಿಟ್ಟರೆ ಮುಂದೊಮ್ಮೆ ಅದು ಪಕ್ಷಕ್ಕೆ ಮಾರಕವೆಂಬುದು ಆರೆಸ್ಸೆಸ್ ವರಿಷ್ಠರಿಗೆ ಮನದಟ್ಟಾಗಿದೆ. ನೀವಿನ್ನು ಸುಮ್ಮನೇ ಕೂರಬೇಡಿ ಎಂಬ ಗ್ರೀನ್ ಸಿಗ್ನಲ್ ಕೂಡ ಆರೆಸ್ಸೆಸ್ ವರಿಷ್ಠರಿಂದ ಈಶ್ವರಪ್ಪನವರಿಗೆ ಸಿಕ್ಕಿದೆ. 31 ರ ವಿಕಾಸ ಸಂಕಲ್ಪ ರ್‍ಯಾಲಿಗೆ ಗೈರುಹಾಜರಾಗಿದ್ದು ಕೂಡ ಇದೇ ಸಿಟ್ಟಿನಿಂದ. ಅದರ ಮರುದಿನ ಅಂದರೆ ಜೂನ್ 1 ರಂದು ಶಿವಮೊಗ್ಗದ ಮಥುರಾ ಪ್ಯಾರಡೈಸ್ ಹೋಟೆಲಿನಲ್ಲಿ ಈಶ್ವರಪ್ಪ ಕರೆದ ಪತ್ರಿಕಾಗೋಷ್ಠಿ ಯಡ್ಡಿಯನ್ನು ಹಣಿಯುವುದಕ್ಕೇ ಮೀಸಲಾಗಿತ್ತು.

ಸದ್ಯ ಈಶ್ವರಪ್ಪ ಎಂಬ ಅಂಕುಶವನ್ನು ಆರೆಸ್ಸೆಸ್ ಪ್ರಯೋಗಿಸುತ್ತಿದೆ. ಈಶ್ವರಪ್ಪ ಎತ್ತಿದ ತಕರಾರುಗಳೆಲ್ಲ ಯಡ್ಡಿ ಗ್ಯಾಂಗಿನ ದುರಾಡಳಿತ ಮತ್ತು ಭ್ರಷ್ಟಾಚಾರವನ್ನು ಪ್ರತಿಬಿಂಬಿಸುತ್ತವೆ. ವಿಚಿತ್ರವೆಂದರೆ ಈಶ್ವರಪ್ಪ ಬಂಡೆದ್ದಿದ್ದನ್ನೇ ರೆಡ್ಡಿಗಳು ತಮ್ಮ ಬ್ಲಾಕ್‌ಮೇಲ್‌ಗೆ ಬಳಸಿಕೊಳ್ಳುತ್ತಿದ್ದಾರೆ. ಒಂದಂತೂ ಸತ್ಯ. ಆರೆಸ್ಸೆಸ್ ಮತ್ತು ಯಡಿಯೂರಪ್ಪ ನಡುವಿನ ಕಂದಕದ ಆಳ ಇನ್ನಷ್ಟು ಹೆಚ್ಚಿದೆ. ಜೊತೆಗೆ ಆರೆಸ್ಸೆಸ್ ಹಂಗಿಲ್ಲದೇ ಓಡುತ್ತಿದ್ದ ಯಡ್ಡಿಗೊಂದು ತಾತ್ಕಾಲಿಕ ಬ್ರೇಕ್ ಕೂಡ ಬಿದ್ದಿದೆ.

● ರಾ. ಸೋಮನಾಥ್



ಹದಿನಾರು ಕಳ್ಳಗಣಿಗಳ ಪುನರಾರಂಭಕ್ಕಾಗಿ ಬ್ಲಾಕ್‌ಮೇಲ್!

ರೌಡಿ ಶ್ರೀರಾಮುಲು ಬಾಯಿಯಿಂದ ಪರಮಸತ್ಯ?

.....ಆ ಥರ ಕೇಳ್ಬೇಕು ಅಂದ್ರೆ ಸಿಎಂ ಪೋಸ್ಟನ್ನೇ ಕೇಳ್ತೀವೇ ಹೊರತು ನಾವ್ಯಾಕ್ರೆ ಡಿಸಿಎಂ ಪೋಸ್ಟ್ ಕೇಳಾಣಾ? ಮುಚ್ಚುಮರೆ ಏನು? ನಿಜ ಹೇಳ್ಬೇಕು ಅಂದ್ರೆ... ನಮ್ಮದೊಂದು ನೂರು ಫೈಲ್‌ಗಳು ಪೆಂಡಿಂಗ್ ಇದಾವೆ. ಇವತ್ತು ಸಂಜೆಯೊಳಗೆ ಅದು ಕ್ಲಿಯರ್ ಆಯ್ತು ಅಂದ್ರೆ ನಮಗೂ ಯಡಿಯೂರಪ್ನೋರೂ ಯಾವ್ದೇ ತಕರಾರಿಲ್ಲ ನೋಡಿ...!

ಇದು ತನ್ನ ಪರಮಾಪ್ತ ವರದಿಗಾರನೊಬ್ಬನಿಗೆ ಬಳ್ಳಾರಿಯ ರೌಡಿ - ಮಂತ್ರಿ ಶ್ರೀರಾಮುಲು ಜೂನ್ 3ರ ಬುಧವಾರ ಅಪರಾಹ್ನ ಹೇಳಿದ ಮಾತು. ಹಿಂದಿನ ದಿನವಷ್ಟೇ ಬಳ್ಳಾರಿ ಶಾಸಕ ಸೋಮಶೇಖರ್ ರೆಡ್ಡಿ ಪತ್ರಿಕಾಗೋಷ್ಠಿ ಕರೆದು ಮುಖ್ಯಮಂತ್ರಿಗಳ ವಿರುದ್ಧ ಬುಸುಗುಟ್ಟಿ ಹನ್ನೆರಡು ಗಂಟೆಗಳ ಅವಧಿಯಲ್ಲೇ ಗಣಿರೆಡ್ಡಿ ಗ್ಯಾಂಗಿನ ದಂಡನಾಯಕ ಶ್ರೀರಾಮುಲು ಇಂಥಾ ದ್ದೊಂದು ಕಟುಸತ್ಯ ಉಲಿಯುತ್ತಾನೆಂದರೆ ಹಕೀಕತ್ತಾದರೂ ಏನು?

ವಾಸ್ತವವಾಗಿ ಗಣಿರೆಡ್ಡಿಗಳ ಅದಿರು ಲೂಟಿಯ ಆದಾಯದ ಮುಂದೆ ಮಂತ್ರಿಗಿರಿ, ಸರ್ಕಾರ, ಎಮ್ಮೆಲ್ಲೆಗಿರಿ, ಜನಪ್ರಿಯತೆ, ಶಿಷ್ಟಾಚಾರ, ಸಜ್ಜನಿಕೆ ಯಾವುದೂ ಮುಖ್ಯವಲ್ಲ. ತಮ್ಮ ಗಣಿಸಾಮ್ರಾಜ್ಯವನ್ನು ಉಳಿಸಿಕೊಳ್ಳಲು ಯಾವುದಕ್ಕೂ ಹೇಸುವವರಲ್ಲ. ಸದ್ಯದ ಅವರ ಬ್ಲಾಕ್‌ಮೇಲ್ ತಂತ್ರದ ಹಿಂದಿನ ಉದ್ದೇಶವನ್ನು ರೌಡಿ ಶ್ರೀರಾಮುಲು ಮಾತಿನ ಪ್ರಕಾರವೇ ವಿಶ್ಲೇಷಿಸುವು ದಾದರೆ; ಇಡೀ ರಾದ್ಧಾಂತಕ್ಕೆ ಇರುವ ಮುಖ್ಯ ಕಾರಣ ನಿಂತು ಹೋದ ಹದಿನಾರು ಅದಿರುಗಣಿಗಳು!


ಇಲ್ಲಿಗೆ ಮೂರು ತಿಂಗಳ ಹಿಂದೆ ಅಂದರೆ 2009ರ ಫೆಬ್ರವರಿಯಲ್ಲಿ ಕೇಂದ್ರ ಸಚಿವ ಕಪಿಲ್ ಸಿಬಲ್ ಮತ್ತು ಡೈರೆಕ್ಟರ್ ಜನರಲ್ ಆಫ್ ಸೆಂಟ್ರಲ್ ಸರ್ವೆಗೆ ಬಳ್ಳಾರಿಯ ಗಡಿಯ ಜಂಟಿ ಸರ್ವೆಗೆ ಒತ್ತಾಯಿಸಿ ಪತ್ರ ಬರೆದ ಮುಖ್ಯಮಂತ್ರಿ ಯಡಿಯೂರಪ್ಪ ಇಡೀ ಗಣಿಹಗರಣವನ್ನು ಲೋಕಾಯುಕ್ತ ತನಿಖೆಗೆ ಒಪ್ಪಿಸಿದ್ದಷ್ಟೇ ಅಲ್ಲ, ಬಳ್ಳಾರಿ ಸುತ್ತಮುತ್ತಲಿನ ಎಲ್ಲಾ ಗಣಿಗಳನ್ನೂ ಸ್ಥಗಿತಗೊಳಿಸುವಂತೆ ಆದೇಶ ಕೊಟ್ಟರು.

ಇದು ಗಣಿರೆಡ್ಡಿಗಳಿಗಾದ ಅತೀ ದೊಡ್ಡ ಮರ್ಮಾಘಾತ. 2009ರ ಫೆಬ್ರವರಿಯಿಂದ ಮುಚ್ಚಲ್ಪಟ್ಟ ಹದಿನಾರು ಗಣಿಗಳ ಪೈಕಿ ಒಂಬತ್ತು ಕಳ್ಳ ಗಣಿಗಳ ರೈಸಿಂಗ್ ಕಾಂಟ್ರ್ಯಾಕ್ಟ್ ರೆಡ್ಡಿಗಳ ಆಧಿಪತ್ಯಕ್ಕೊಳಪಟ್ಟಿತ್ತು. ಜೊತೆಗೆ ಹೊಸಪೇಟೆಯ ಗಣಿಕಳ್ಳ ಬಿಜೆಪಿ ಶಾಸಕ ಆನಂದ್‌ಸಿಂಗ್, ಕೂಡ್ಲಿಗಿಯ ನಾಗೇಂದ್ರ, ಕಂಪ್ಲಿಯ ಸುರೇಶ್‌ಬಾಬು ಮುಂತಾದ ಬಿಜೆಪಿ ಶಾಸಕರ ಕಳ್ಳ ಗಣಿಗಳೂ ಇದ್ದವು. ಅದಿರು ಲೂಟಿಯ ಆದಾಯದ ಮುಂದೆ ಎಮ್ಮೆಲ್ಲೆ ಗಿರಿಯ ಉತ್ಪತ್ತಿ ಯಾವ ಲೆಕ್ಕ?

ಹೀಗೆ ನಿಂ[illegible]ಹೋದ ಬಳ್ಳಾರಿ ಸುತ್ತಮುತ್ತಲ ಹದಿನಾರು ಗಣಿಗಳ ಸ್ಥಗಿತಾದೇಶ ರದ್ದಾಗಿ ಮತ್ತೆ [illegible] ಲೂಟಿ ಸಲೀಸಾಯಿತೆಂದರೆ ತಿಂಗಳೊಪ್ಪತ್ತಿನಲ್ಲೇ ಕೋಟಿಕೋಟಿ ಎಣಿಸಬಹುದು. ಇದು ರೆಡ್ಡಿಗಳ ದುರಾಲೋಚನೆ. ಜಂಟಿ ಸರ್ವೆಗೆ ಒತ್ತಡ ಹೇರದೆ ಮತ್ತೆ ಹದಿನಾರು ಗಣಿಗಳನ್ನು ಪುನರಾರಂಭಿಸಲು ಮುಖ್ಯಮಂತ್ರಿಯನ್ನು ಮಣಿಸಬೇಕಿಲ್ಲ. ಅದಕ್ಕೆ ಭಿನ್ನಮತವೆಂಬುದು ಕೇವಲ ಬ್ಲಾಕ್‌ಮೇಲ್ ತಂತ್ರ ಮಾತ್ರ.

ಜೂನ್ ಮೂರರ ಬೆಳಗಿನ ರಾಜಿ ಪಂಚಾಯಿತಿ ಯಲ್ಲಿ ಗಣಿರೆಡ್ಡಿಗಳ ಈ ಬ್ಲಾಕ್‌ಮೇಲ್‌ಗೂ ಯಡ್ಡಿ ಮಣಿದಿದ್ದಾರಾ? ಇಷ್ಟರಲ್ಲೇ ಸ್ಥಗಿತಗೊಂಡಿದ್ದ 16 ಗಣಿಗಳು ಮತ್ತೆ ಶುರುವಾಗುತ್ತಾ? ಜಂಟಿ ಸರ್ವೆ ನಡೆ[illegible] ದಂತೆ ಯಡ್ಡಿ ಮತ್ತೆ ಪತ್ರ ಬರೆಯುತ್ತಾರಾ?

ಕಾಲವೇ ಉತ್ತರ ಕೊಡಲಿದೆ. ಕುಡಿದೋ ಕುಡಿಯದೆಯೋ ರೌಡಿ ಮಂತ್ರಿ ಶ್ರೀರಾಮುಲು ಕನಿಷ್ಠ ಸತ್ಯ ಹೇಳಿದ್ದಾನಲ್ಲ; ಅದಕ್ಕಾದರೂ ಮೆಚ್ಚಲೇ ಬೇಕಲ್ಲವೇ?



ಸಿ.ಟಿ. ರವಿ

ರೆಡ್ಡಿ ಗ್ಯಾಂಗ್ ವಿರುದ್ಧ ಚೆಡ್ಡಿ ಗ್ಯಾಂಗ್

ಆ ರೆಡ್ಡಿಗಳನ್ನೇನಾದ್ರೂ ಡಿಸಿಎಂ ಮಾಡೋದಾದ್ರೆ ನಾವೆಲ್ಲ ಯಾಕಿರ್ಬೇಕು? ಪಕ್ಷಕ್ಕಾಗಿ ಜೀವನಪರ್ಯಂತ ದುಡಿದ ನಮ್ಮಂಥೋರಿಗೆ ಕನಿಷ್ಠ ಮಂತ್ರಿಗಿರಿನೂ ಗತಿಯಿಲ್ಲದಿರೋವಾಗ ಕರುಣಾಕರ ರೆಡ್ಡೀನಾ ಉಪಮುಖ್ಯಮಂತ್ರಿ ಮಾಡಕ್ಕೆ ಬಿಜೆಪಿ ಏನು ನಾಯಿನರಿಗಳ ಪಕ್ಷನಾ?

ಹೀಗೆ ರೆಡ್ಡಿಗಳ ಅಟ್ಟಹಾಸದ ವಿರುದ್ಧ ಕಿಡಿಕಾರಿದ್ದು ಆನೇಕಲ್ ನಾರಾಯಣಸ್ವಾಮಿ, ಸಿ.ಟಿ. ರವಿ ಮತ್ತು ಚಂದ್ರಕಾಂತ್ ಬೆಲ್ಲದ್‌ರಂಥ ಬಿಜೆಪಿ ನಿಷ್ಠ ಶಾಸಕರು.

ಗಣಿ ರೆಡ್ಡಿಗಳ ದೌಲತ್ತಿನ ವಿರುದ್ಧ ಹಿಂದಿನಿಂದಲೂ ಗೊಣಗಾಡುತ್ತಲೇ ಬಂದ ಇಂಥ ಶಾಸಕರಿಗೆ ಒಂದೆಡೆ ತಮಗೆ ಮಂತ್ರಿಗಿರಿ ದಕ್ಕದ ಬಗ್ಗೆ ಸಿಟ್ಟಿದೆ. ಮತ್ತೊಂದೆಡೆ ಒಂದೇ ಕುಟುಂಬದ ಬಳ್ಳಾರಿ ರೆಡ್ಡಿಗಳು ಒಂದಲ್ಲ ಮೂರು ಮಂತ್ರಿ ಸ್ಥಾನಗಳನ್ನು ಕಬಳಿಸಿದ ಬಗ್ಗೆಯೂ ಅಸೂಯೆಯಿದೆ. ಈಗೇನಾದರೂ ಬ್ಲಾಕ್‌ಮೇಲ್‌ಗೆ ಮಣಿದು ಕರುಣಾಕರ ರೆಡ್ಡಿಯನ್ನು ಉಪಮುಖ್ಯಮಂತ್ರಿ ಮಾಡಿದ್ದೇ ಆದರೆ ಆನೇಕಲ್ ನಾರಾಯಣಸ್ವಾಮಿ, ಸಿ.ಟಿ. ರವಿ, ಚಂದ್ರಕಾಂತ್ ಬೆಲ್ಲದ್‌ರಂಥ ಶಾಸಕರು ರೊಚ್ಚಿಗೇಳುತ್ತಾರೆ.


ರೆಡ್ಡಿಗಳಿಗೆ ಮಣೆಯಿಟ್ಟರೆ ಚೆಡ್ಡಿಗಳಿಗೆ ಸಿಟ್ಟು. ಚೆಡ್ಡಿಗಳ ಮರ್ಜಿಗೆ ಬಿದ್ದು ರೆಡ್ಡಿಗಳನ್ನು ದೂರವಿಟ್ಟರೆ ಅದೂ ಯಡವಟ್ಟು. ಯಡ್ಡಿಯ ಕಷ್ಟ ಯಡ್ಡಿಗೇ ಗೊತ್ತು? ■



ನಾರಾಯಣಸ್ವಾಮಿ

ಹುಬ್ಬಳ್ಳಿ-ಧಾರವಾಡ: ಮ.ನ.ಪಾ. ಸುಲಿಗೆಗೆ ನೂರೆಂಟು ಮಾರ್ಗ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ; ...ಗೆ ಸರಿಯಾಗಿ ಕುಡಿಯುವ ನೀರು ಒದಗಿಸುವ ...ಗ್ಯತೆಯಿಲ್ಲದಿದ್ದರೂ ...ಮಾನ್ಯರನ್ನು ಸುಲಿಗೆ ...ಸುವಲ್ಲಿ ಪರಿಣಿತಿ ...ಡೆದಿದಂತಿದೆ. ಒಂದಾದ ...ಮೊಂದರಂತೆ ಜನವಿರೋಧಿ ...ಗಳನ್ನು ಜಾರಿಗೆ ತರುತ್ತಿರುವ ... ಜನರನ್ನು ನಿತ್ಯ ಗೋಳು ...ಯ್ದುಕೊಳ್ಳುವ ...ಕಾರ್ಯದಲ್ಲಿ ನಿರತವಾಗಿದೆ. ...ಒಂದು ಇತ್ತೀಚಿನ ...ಹರಣೆ ಎಂದರೆ, ಹೊಸ ..„ ಮನೆ ನಿರ್ಮಾಣಕ್ಕೆ ...ಕ್ಷೆಗೆ ಆಧುನಿಕ ಸ್ಪರ್ಶ ...ವ ಹೆಸರಿನಲ್ಲಿ ಸಾಮಾನ್ಯ ಜನರ ಮತ್ತು ಬಡ ...ನಿಯರ್‌ಗಳ ಜೀವ ಹಿಂಡಲು ಶುರು ...ರುವುದು.




ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ...ಯಲ್ಲಿ ಕಟ್ಟಡ ನಿರ್ಮಾಣಕ್ಕೆ ನೀಲ ನಕ್ಷೆಯನ್ನು ...ರಿಸಿ, ಅರ್ಜಿಯ ಜೊತೆಗೆ ಅದನ್ನು ಪಾಲಿಕೆಗೆ ... ಪರವಾನಿಗೆ ಪಡೆಯಬೇಕು. ...ನ್ಸ್ ಹೊಂದಿದ ...ನಿಯರ್‌ಗಳು ಕೇವಲ 200- ... ರೂಪಾಯಿಷ್ಟಳಿಗೆ ಈ ನೀಲನಕ್ಷೆ ...ರಿಸಿ ಕೊಡುತ್ತಿದ್ದರು. ಆದರೆ, ... ಮಹಾನಗರ ಪಾಲಿಕೆಯ ... ಯೋಜನೆಯ ...ರ್ದೇಶಕರು ಒಬ್ಬ ...ನಿಯರ್‌ನೊಂದಿಗೆ ...ಒಂದು ಜನರಿಂದ ಹೆಚ್ಚಿನ ...ನ್ನು ಸುಲಿಗೆ ಮಾಡಲು ಹೊಸ ...ಮವೊಂದನ್ನು ಜಾರಿಗೆ ...ದ್ದಾರೆ. ಅದೆಂದರೆ, ...ಕ್ಷೆಯನ್ನು ಪ್ರಿ.ಡಿ.ಸಿ.ಆರ್ ...ಯಲ್ಲಿ ತಯಾರಿಸಿ ಅದನ್ನು ...ಸಮೇತ ಸಲ್ಲಿಸಬೇಕೆಂದು ...ಮು ಮಾಡಿದ್ದಾರೆ. ...ಪ್ಯೂಟರ್‌ಗೆ ವಿಶೇಷ ಸಾಫ್ಟ್‌ವೇರ್ ಬಳಸಿಯೇ ...ಆರ್ ನೀಲನಕ್ಷೆ ...ರಿಸಬೇಕಾಗಿರುವುದರಿಂದ ಇಲ್ಲಿಯತನಕ ...ಕ್ಷೆ ತಯಾರಿಸಿ ಕೊಡುತ್ತಿದ್ದ ...ನಿಯರ್‌ಗಳಿಂದ ಅದು ಸಾಧ್ಯವಾಗುವುದಿಲ್ಲ.

ಈ ಸಾಫ್ಟ್‌ವೇರ್‌ನಲ್ಲಿ ಪರಿಣತಿ ಹೊಂದಿದ ಇಂಜಿನಿಯರ್ ಮಾತ್ರವೇ ಅದನ್ನು ತಯಾರಿಸಿಕೊಡಲು ಸಾಧ್ಯ. ಹೀಗಾಗಿ, ಇಲ್ಲಿಯತನಕ ಕೇವಲ ಇನ್ನೂರು, ಮುನ್ನೂರು ರೂಪಾಯಿಗಳಿಗೆ ನೀಲನಕ್ಷೆ ತಯಾರಿ ಮಾಡಿಕೊಡುತ್ತಿದ್ದ ಸಾಮಾನ್ಯ ಇಂಜಿನಿಯರ್‌ಗಳಿಗೆ ಗಿರಾಕಿಗಳಿಲ್ಲದೇ ಕೆಲಸವಿಲ್ಲದಂತಾಗಿದೆ. ಹುಬ್ಬಳ್ಳಿಯೊಂದರಲ್ಲೇ ಇಂಥ ಸುಮಾರು ನಾನ್ನೂರು ಜನ ಸಿವಿಲ್ ಇಂಜಿನಿಯರ್‌ಗಳು ಇದ್ದಾರೆ. ಅವರೂ ಕೂಡ ತಮ್ಮ ಕಂಪ್ಯೂಟರ್‌ಗೆ ಸಾಫ್ಟ್‌ವೇರ್ ಅಳವಡಿಸಿಕೊಳ್ಳಬೇಕೆಂದರೆ ಸುಮಾರು ಐವತ್ತು ಸಾವಿರ ರೂಪಾಯಿಗಳನ್ನು ತೆರಬೇಕಾಗುತ್ತದೆ. ಅಲ್ಲದೇ ಅದರ ನಿರ್ವಹಣೆಗೆ ಪ್ರತಿ ತಿಂಗಳು ಸುಮಾರು ಮೂರು ಸಾವಿರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ.


ಇನ್ನೊಂದೆಡೆ, ಕೇವಲ ಮುನ್ನೂರು ರೂಪಾಯಿಗಳಿಗೆ ನಕ್ಷೆ ಪಡೆಯುತ್ತಿದ್ದ ಜನ ಸಾಮಾನ್ಯರು ಈಗ ಈ ವಿಶೇಷ ಸಾಫ್ಟ್‌ವೇರ್ ಬಳಸಿ ನಕ್ಷೆ ತಯಾರಿಸುವ ಇಂಜಿನಿಯರ್‌ಗಳನ್ನು ಹುಡುಕಿ ಸುಮಾರು ಎರಡೂವರೆಯಿಂದ ಮೂರು ಸಾವಿರ ತೆರಬೇಕಾಗಿ ಬಂದಿದೆ.



ವಾಸ್ತವದಲ್ಲಿ ಮಹಾನಗರ ಪಾಲಿಕೆಯ ನಗರ ಯೋಜನೆಯ ಉಪನಿರ್ದೇಶಕರು ಇಂಥ ಒಂದು ನಿಯಮವನ್ನು ಯಾಕೆ ಜಾರಿಗೆ ತಂದರು ಎಂದು ಕೆದಕುತ್ತಾ ಹೋದರೆ ಅಸಲೀಯತ್ತು ಅನಾವರಣಗೊಳ್ಳುತ್ತದೆ. ಹುಬ್ಬಳ್ಳಿಯಲ್ಲಿರುವ ಸಿದ್ದಾರ್ಥ ತಾಂಬೆ ಎಂಬ ಇಂಜಿನಿಯರ್ ಈಗಾಗಲೇ ಪ್ರಿಸಿಡಿಆರ್ ನೀಲನಕ್ಷೆ ತಯಾರಿಸಲು ಅಗತ್ಯವಿರುವ ಸಾಫ್ಟ್‌ವೇರ್ ಅಳವಡಿಸಿಕೊಂಡಿದ್ದು ಅದರಲ್ಲಿ ಪರಿಣಿತನಾಗಿದ್ದಾನೆ. ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬರುವ ಎಲ್ಲಾ ನೀಲನಕ್ಷೆಗಳನ್ನು ತಾನೊಬ್ಬನೇ ತಯಾರಿಸಿಕೊಟ್ಟು ದುಡ್ಡು ಮಾಡುವುದಕ್ಕೆ ಸಂಚು ರೂಪಿಸಿರುವ ಈತ ನಗರ ಯೋಜನೆಯ ಉಪನಿರ್ದೇಶಕರೊಂದಿಗೆ ಡೀಲ್ ಕುದುರಿಸಿಕೊಂಡು ಇಂಥ ಒಂದು ನಿಯಮ ಜಾರಿಗೆ ಬರುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾನೆ. ಅಂದರೆ, ಇಲ್ಲಿಯತನಕ ಸಾಮಾನ್ಯ ನೀಲನಕ್ಷೆ ತಯಾರಿಸುತ್ತಿದ್ದ ಎಲ್ಲಾ ಇಂಜಿನಿಯರ್‌ಗಳ ಗಿರಾಕಿಗಳನ್ನು ತನ್ನೆಡೆ ಸೆಳೆದುಕೊಂಡು, ಮುನ್ನೂರು ರೂಪಾಯಿಗೆ ಆಗುವ ಕೆಲಸಕ್ಕೆ ಮೂರು ಸಾವಿರ ರೂಪಾಯಿ ಕಕ್ಕಿಸಿ ಬರುವ ಕಮಾಯಿಯಲ್ಲಿ ನಗರ ಯೋಜನೆಯ ಉಪನಿರ್ದೇಶಕರಿಗೂ ಹಾಗೂ ಈತನಿಗೂ 'ಫಿಫ್ಟಿ-ಫಿಫ್ಟಿ'. ಇದು ಅವರಿಬ್ಬರ ನಡುವೆ ಆಗಿರುವ ಡೀಲ್.


ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಮಾಹಿತಿಹಕ್ಕಿನ ಅನ್ವಯ ಪಡೆದ ಮಾಹಿತಿ........



ಉಪನಿರ್ದೇಶಕರ ಆದೇಶ....

ಇದೆಲ್ಲಾ ತಮ್ಮ ಕಣ್ಣ ಮುಂದೆ ನಡೆಯುತ್ತಿದ್ದರೂ ನೂತನ ಮೇಯರ್ ವೀರಣ್ಣ ಸವಡಿ ಬಾಯ್ಮುಚ್ಚಿಕೊಂಡು ಕುಳಿತಿದ್ದಾರೆ. ಈ ವಂಚನೆಯಲ್ಲಿ ಅವರದೆಷ್ಟು ಪಾಲು ಎಂಬುದು ಹೊರಬರಬೇಕಿದೆಯಷ್ಟೆ.

● ಹುಬ್ಬಳ್ಳಿಯಾಂವ

▶▶▶ 3

ಅನುಭವಗಳ ರುಚಿ ಅರಸುತ್ತಾ

ತಸಗಿರುವ ಕಾಳಜಿಗಳನ್ನು ಮತ್ತು ಅಂತಹದರ ಉದ್ಧಾರಕ್ಕೆಂದು ತನ್ನಲ್ಲಿರುವ ಯೋಜನೆಗಳ ಬಗ್ಗೆ ವಿವರಿಸುತ್ತಾ ಕಮಲಾ ಹೀಗೆ ಬರೆಯುತ್ತಾರೆ:

"ಬಡವರು ಪ್ರವೃತ್ತಿಯಲ್ಲಿ ವಿಧಿವಾದಿಗಳಾಗಿರುತ್ತಾರೆ. ಇಲ್ಲವೆಂದರೆ ಸ್ವಾರ್ಥಿಗಳಾದ, ಸ್ವಹಿತಾಸಕ್ತಿಗಳಾದ, ನಮ್ಮ ದೇಹ ತೂಕದ ಬಗ್ಗೆ, ತೆರಿಗೆ ಸಮಸ್ಯೆಗಳ ಬಗ್ಗೆ, ನಮ್ಮ ಮೈಬಣ್ಣದ-ಬಗ್ಗೆ ಸದಾ ಚಿಂತಿಸುವ ನಮ್ಮಂಥವರು ಈಗ ಎಲ್ಲಿರುತ್ತಿದ್ದರು? ಬಡವರು ಮಿಡತೆ ಹುಳಗಳ ದಂಡಮಾರುತದಂತೆ ಎದ್ದು ನಮ್ಮನ್ನೆಲ್ಲ ಭಕ್ಷಿಸುತ್ತಿದ್ದರು. ನಮ್ಮ ಮೂಲೆಗಳಿಂದ ನಮ್ಮ ಮುಪ್ಪಾದ ಮಾಂಸವನ್ನು ಕಿತ್ತು ತಿಂದು ನಮ್ಮ ಕಳೇಬರಗಳನ್ನು ಬಿಸಾಡುತ್ತಿದ್ದರು. ಹೌದು, ಅಸ್ಪಷ್ಟವಾಗಿಯಾದರೂ ಗೋಡೆ ಮೇಲಿನ ಬರಹ ನನಗೆ ಕಾಣಿಸುತ್ತಿದೆ. ಅದನ್ನು ನೋಡಿ ನಾನು ಒಂದು ಕ್ಷಣ ಕಂಪಿಸುತ್ತೇನೆ, ಆದರೆ ಮಧುರವಾದ ನಿರೀಕ್ಷೆಯಿಂದ ಕಂಪಿಸುತ್ತೇನೆ."

ಕಮಲಾ ಅವರು ತಮ್ಮ ಕೊನೆ ಕಾಲದಲ್ಲಿ ಹೆಚ್ಚುಕಮ್ಮಿ ಕುರುಡರಾಗಿದ್ದರು. ಅನಾರೋಗ್ಯ ಅವರ ದೈಹಿಕ ಶಕ್ತಿಯನ್ನು ಕುಗ್ಗಿಸಿತ್ತು. ತನ್ನ ಗಂಡನೊಂದಿಗೆ ಕೊನೆಗೂ ಪ್ರೀತಿ ಮತ್ತು ಮಮತೆಯ ಸಂಬಂಧವನ್ನು ಸಾಧಿಸಿದ್ದ ಅವರು ಕೆಲ ವರ್ಷಗಳ ಹಿಂದೆ ಗಂಡನನ್ನು ಕಳೆದುಕೊಂಡು ಏಕಾಂಗಿಯಾಗಿದ್ದರು. ಅವರು ಬಿಡಿಸುತ್ತಿದ್ದ ಮಹಿಳೆಯರ ನಗ್ನಚಿತ್ರಗಳೂ ಮೂಲೆ ಸೇರಿದ್ದವು. ಕವನ ಕೃಷಿ ಎಂದೋ ನಿಂತುಹೋಗಿತ್ತು. ಸಾಹಿತ್ಯ ಬತ್ತಿತ್ತು. ಸಮಾಜದ ಸಂಕೋಲೆಗಳ ವಿರುದ್ಧ, ಸಂಪ್ರದಾಯದ ಬಂಧನದ ವಿರುದ್ಧದ ಅವರ ಬಂಡಾಯ ಸ್ಥಗಿತಗೊಂಡಿತ್ತು. ಇಸ್ಲಾಮ್ ಧರ್ಮದಲ್ಲಿ ದೇವರನ್ನು, ಬುರ್ಖಾದಲ್ಲಿ ಸುರಕ್ಷತೆಯನ್ನು ಕಂಡುಕೊಳ್ಳಲು ಯತ್ನಿಸಿದರು. ತಾವು ಪಿತ್ರಾರ್ಜಿತವಾಗಿ ಪಡೆದಿದ್ದ, ಹಿಂದೊಮ್ಮೆ ಕೇರಳದ ತುಂಡರಸನ ಆಸ್ತಿಯಾಗಿದ್ದ, ಸುಮಾರು ಎರಡು ಸಾವಿರ ವರ್ಷಗಳಷ್ಟು ಪುರಾತನವಾದ ಸರ್ಪಗುಡಿಯನ್ನು ಹೊಂದಿದ್ದ 'ನಲಪಟ್ ಮನೆ' ಎಂಬ ಜಾಗವನ್ನು ಕೇರಳ ಸಾಹಿತ್ಯ ಅಕಾಡೆಮಿಗೆ ದಾನ ಮಾಡಿದರು.

ಕೇರಳದವರೇ ಆಗಿದ್ದರೂ ಆ ರಾಜ್ಯದಿಂದ ಹೊರಗಡೆಯೇ ಬೆಳೆದ, ಬದುಕಿದ ಕಮಲಾ ಸಾವನ್ನೂ ದೂರದ ಪುಣೆಯಲ್ಲಿ ಭೇಟಿಯಾದರು. ಆದರೂ ರಾಜ ಮರ್ಯಾದೆಗಳೊಂದಿಗೆ ಕೇರಳದ ಮಣ್ಣಿನಲ್ಲಿ ಮಣ್ಣಾದರು.

ಕಮಲಾ ದಾಸ್ ಅವರು ಶ್ರೇಷ್ಠ ಸಾಹಿತಿ ಆಗಿರಲಿಲ್ಲ, ಚಿಂತಕಿಯಾಗಿರಲಿಲ್ಲ, ಪ್ರಗತಿಪರರಾಗಿ ರಲಿಲ್ಲ. ಒಂದು ರೀತಿಯಲ್ಲಿ ಸಾಮಾನ್ಯ ಮಹಿಳೆ ಯಾಗಿದ್ದರು. ಆದರೆ ಆ ಸಾಮಾನ್ಯತೆಯನ್ನು ಮೀರ ಬೇಕು, ಬದುಕಿನ ಎಲ್ಲಾ ಅನುಭವಗಳ ರುಚಿ ಯನ್ನೂ ನೋಡಬೇಕು, ಆತ್ಮ ಮಾತ್ರ ಮುಖ್ಯವಲ್ಲ ಅದರ ಜೊತೆಗೆ ಶರೀರವನ್ನೂ ದಂಡಿಸಿದಾಗಲೇ ಮನುಷ್ಯನ ವ್ಯಕ್ತಿತ್ವ ರೂಪುಗೊಳ್ಳುತ್ತದೆ ಎಂದು ನಂಬಿದ್ದ ಮಹಿಳೆಯಾಗಿದ್ದರು. ಆ ಅನುಭವಗಳನ್ನು ಅರಸುತ್ತಾ ತನ್ನ ದೇಹವನ್ನು ದಂಡಿಸುತ್ತಾ ತನ್ನ ವ್ಯಕ್ತಿತ್ವವನ್ನು ಮತ್ತು ಆ ಮೂಲಕ ತನ್ನ ಸಾಹಿತ್ಯವನ್ನು ರೂಪಿಸಿಕೊಂಡ ಮಹಿಳೆ ಕಮಲಾ ದಾಸ್. ಸಾಹಿತ್ಯ ಸೃಷ್ಟಿಯಾಗುವುದೇ ಅನುಭವದ ಮೂಲಕವಲ್ಲವೆ?

ಎಲ್ಲರಂತೆ ಸಾವಿನ ಬಗ್ಗೆ ಕಮಲಾರವರೂ ಬಹಳಷ್ಟು ಚಿಂತಿಸಿದ್ದರು. ಅವರ 'ಮೈ ಸ್ಟೋರಿ'ಯ ಕೊನೆ ಅಧ್ಯಾಯದಲ್ಲಿ ಹೀಗೆ ದಾಖಲಿಸುತ್ತಾರೆ:

"ಹಲವಾರು ವರ್ಷಗಳಿಂದ ಸಾವಿನ ಬಗ್ಗೆ ಯೋಚಿಸಿರುವ ನಾನು ಬದುಕೆಂಬುದು ಕೇವಲ ಒಂದು ಕನಸು. ಸಾವು ಮಾತ್ರ ವಾಸ್ತವ ಎಂದು ನಂಬಿದ್ದೇನೆ. ಅಂತ್ಯವಿಲ್ಲದ ಸಾವು ಮನುಷ್ಯರ ಬದುಕನ್ನೂ ಮೀರಿ [illegible] ವಾಸ್ತವ. ಎಲ್ಲಾ ಮಾನಸಿಕ ಮುಗ್ಗಟ್ಟುಗಳ [illegible] ಜೀವನ ಎಂಬುದು [illegible] ಮೇಲಿನ [illegible] ಸಪ್ಪೆಯೋಜಕವಾಗಿದೆ. ನಾವೆಲ್ಲ ಬೇರೆಯವರ ಕನಸಿನಲ್ಲಿ [illegible]"

ನಮ್ಮ ಕನಸುಗಳಲ್ಲಿನ [illegible] ಮೂಡಿಬಂದ ಕಮಲಾ ದಾಸ್ ಅವರಿಗೆ ಗುಡ್‌ಬೈ.

● ಗೌರಿ ಲಂಕೇಶ್

ಗೊಬ್ಬರಕ್ಕಾಗಿ ಮತ್ತೆ ರೈತರ ಹೆಣ ಬೀಳಬೇಕೆ?





● ಹುರುಳೀಕುಪ್ಪಿ ವಿನಯ್

ಬಿಜೆಪಿ ಸರ್ಕಾರಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪನಿಗೆ ಒಂದಿಷ್ಟಾದರೂ ಸಂವೇದನೆಗಳಿದಿದ್ದರೆ, ನಾಡಿನ ಅನ್ನದಾತರಾಗಿರುವ ರೈತರ ಬಗ್ಗೆ ಕಿಂಚಿತ್ತಾದರೂ ಕಾಳಜಿಯಿದ್ದಿದ್ದರೆ ಹೀಗೆ ಮಾಡುತ್ತಿರಲಿಲ್ಲ. ಕಳೆದ ವರ್ಷ ಮುಂಗಾರು ಮಳೆಯ ಹೊತ್ತಿನಲ್ಲಿ ತಮ್ಮ ಜಮೀನುಗಳನ್ನು ಹಸನು ಮಾಡಿಟ್ಟುಕೊಂಡಿದ್ದ ರೈತರು ಬಿತ್ತನೆಗಾಗಿ ಗೊಬ್ಬರ ಕೇಳಿದ್ದಕ್ಕೆ ಗುಂಡೇಟು ನೀಡಿ ಇಬ್ಬರು ರೈತರನ್ನು ಬಲಿ ತೆಗೆದುಕೊಂಡಿದ್ದರು. ಈ ವರ್ಷವಾದರೂ ರೈತರಿಗೆ ಸಮರ್ಪಕ ಗೊಬ್ಬರ ಸರಬರಾಜು ಮಾಡುತ್ತಾರೆಂದರೆ ಅದೂ ಇಲ್ಲ. ಪರಿಸ್ಥಿತಿ ಹೋದ ವರ್ಷಕ್ಕಿಂತ ಭಿನ್ನವಾಗಿಯೇನೂ ಇಲ್ಲ. ಯಡಿಯೂರಪ್ಪನಿಗೆ ಮತ್ತು ಬಿಜೆಪಿ ಸರ್ಕಾರಕ್ಕೆ ರೈತರ ಬಗ್ಗೆ ಅದೆಷ್ಟು ದ್ವೇಷವಿದೆಯೋ ಗೊತ್ತಿಲ್ಲ, ಇಡೀ ಉತ್ತರ ಕರ್ನಾಟಕದಾದ್ಯಂತ ರೈತರು ಗೊಬ್ಬರಕ್ಕಾಗಿ ನಗರದಿಂದ ನಗರಕ್ಕೆ, ಪಟ್ಟಣದಿಂದ ಪಟ್ಟಣಕ್ಕೆ ಅಲೆಯುತ್ತಿದ್ದರೂ ಅವರಿಗೆ ಗೊಬ್ಬರ ಸಿಗುತ್ತಿಲ್ಲ. ಪ್ರತಿಭಟನೆ ಮಾಡಿದರೆ ಮತ್ತೆಲ್ಲಿ ಪೊಲೀಸರು ಬಂದೂಕು ಎತ್ತಿಕೊಂಡು ಬಂದು ತಮ್ಮ ಹೆಣ ಕೆಡವುತ್ತಾರೋ ಎಂಬ ಭೀತಿಯಿಂದ ಅತ್ತ ಪ್ರತಿಭಟನೆಯನ್ನೂ ಮಾಡದೇ, ಇತ್ತ ಗೊಬ್ಬರವೂ ಸಿಗದೇ ದಯನೀಯವಾಗಿ ಪರದಾಡುತ್ತಿದ್ದಾರೆ.



ಡಿ.ಸಿ.ವಸ್ತ್ರದ್



ಶಿವರಾಜ್ ಸಜ್ಜನ್


ಕಳೆದ ವರ್ಷ ಮುಂಗಾರು ಮಳೆ ತುಸು ಮುಂಚೆಯೇ ಬಂದು ರೈತರ ಮೊಗದಲ್ಲಿ ಮಂದಹಾಸ ಮೂಡಿಸಿತ್ತು. ಆ ಹಿಂದಿನ ಕೆಲವು ವರ್ಷಗಳ ಕಾಲ ಕರ್ನಾಟಕದ ರೈತ ಬರಗಾಲದಿಂದ ತತ್ತರಿಸಿದ್ದ. ಸಾಲಸೋಲ ಮಾಡಿಕೊಂಡು ಬಿತ್ತನೆ ಮಾಡಿದ್ದರೂ ಬರಗಾಲದ ಕಾರಣ ಹಾಕಿದ ಬಂಡವಾಳವೂ ಬರದೆ ಸಾಲದ ಹೊರೆ ಅವನ ಹೆಗಲೇರಿತ್ತು, ಒಂದೆಡೆ, ಹೊಟ್ಟೆ-ಬಟ್ಟೆಗೆ ಪರದಾಡುತ್ತಿದ್ದ ಇನ್ನೊಂದೆಡೆ ಸಾಲಗಾರರ ಬಾಧೆ ತಾಳಲಾರದೆ ಬಸವಳಿದಿದ್ದ ರೈತರು ಕಳೆದ ವರ್ಷದ ಆರಂಭದಲ್ಲಿ ಮಳೆ ಚೆನ್ನಾಗಿ ಬಿದ್ದಿದ್ದರಿಂದ ಸಹಜವಾಗಿಯೇ ಖುಷಿಯಾಗಿದ್ದರು. ತಮ್ಮ ಹೊಲಗದ್ದೆಗಳನ್ನು ಹಸನುಮಾಡಿ ಬಿತ್ತನೆಗಾಗಿ ಸಿದ್ಧತೆ ನಡೆಸಿದ್ದರು. ಬಿತ್ತನೆಯ ಸಮಯದಲ್ಲಿ ಅವರಿಗೆ ಅತೀ ಅವಶ್ಯವಾಗಿ ಬೇಕಿರುವುದು ಬೀಜ ಮತ್ತು ಗೊಬ್ಬರ. ಬೀಜವನ್ನೇನೋ ಹೇಗೋ ಹೊಂದಿಸಿಕೊಂಡಿದ್ದರು. ಆದರೆ ಗೊಬ್ಬರ ಮಾತ್ರ ಸಿಗಲಿಲ್ಲ, ಪಟ್ಟಣದಿಂದ ಪಟ್ಟಣಕ್ಕೆ, ಅಂಗಡಿಯಿಂದ ಅಂಗಡಿಗೆ ಹಗಲುರಾತ್ರಿಯೆನ್ನದೇ ಅಲೆದರೂ ಅವರಿಗೆ ಗೊಬ್ಬರ ಸಿಗಲಿಲ್ಲ, ಈ ಸಂದರ್ಭ ಬಿಟ್ಟರೆ ಬಿತ್ತನೆ ಆಗುವುದಿಲ್ಲ, ಬಿತ್ತನೆಯಿಲ್ಲದಿದ್ದರೆ ಬೆಳೆಯಿಲ್ಲ, ಬೆಳೆಯಿಲ್ಲದಿದ್ದರೆ ವರ್ಷವಿಡೀ ಹೊಟ್ಟೆಗೆ ಅನ್ನವಿಲ್ಲ, ವರ್ಷವಿಡೀ ಸಾಲಗಾರರ ಬಾಧೆ ತಪ್ಪುವುದಿಲ್ಲ, ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ರೈತರು ಬೇರೆ ದಾರಿ ಕಾಣದೆ ಹೋರಾಟದ ದಾರಿ ಹಿಡಿದಿದ್ದರು. ಮೊದಲು ದಾವಣಗೆರೆಯಿಂದ ಪ್ರಾರಂಭವಾದ ಈ ಹೋರಾಟ ಕೆಲವೇ ದಿನಗಳಲ್ಲಿ ಇಡೀ ರಾಜ್ಯಾದ್ಯಂತ ಹರಡಿಕೊಂಡು ಬಿಟ್ಟಿತು. ಹೀಗೆ, ಗೊಬ್ಬರಕ್ಕಾಗಿ ನ್ಯಾಯಬದ್ಧ ಹೋರಾಟದಲ್ಲಿ ತೊಡಗಿದ ರೈತರಿಗೆ ಗೊಬ್ಬರ ಕೊಡುವುದನ್ನು ಬಿಟ್ಟು ಯಡಿಯೂರಪ್ಪನ ಸರ್ಕಾರ ಗುಂಡೇಟು ನೀಡಿತು. ಹಾವೇರಿಯಲ್ಲಿ ಹೋರಾಟ ನಿರತನಾಗಿದ್ದ ಸಿದ್ಧಲಿಂಗಪ್ಪ ಚೂರಿ ಎಂಬ ಅಮಾಯಕ ರೈತ ಸ್ಥಳದಲ್ಲೇ ರಕ್ತದ ಮಡುವಿನಲ್ಲಿ ಬಿದ್ದು ಹೆಣವಾಗಿ ಹೋದ. ನಂತರ ತಿಂಗಳು ತುಂಬುವುದರೊಳಗೆ ಗುಂಡೇಟಿನಿಂದ ಗಾಯಗೊಂಡಿದ್ದ ಪುಟ್ಟಪ್ಪ ಹೊನ್ನತ್ತಿ ಎಂಬ ಮತ್ತೊಬ್ಬ ರೈತ ಬೆಂಗಳೂರಿನ ಆಸ್ಪತ್ರೆಯಲ್ಲಿ ಸತ್ತು ಹೋದ.

ವಾಸ್ತವದಲ್ಲಿ ಈ ಗೋಲಿಬಾರ್‌ಗೆ ಬಿಜೆಪಿಯ ಮುಂದಿ ರಾಜಕಾರಣಿ ಸಿ.ಎಂ.ಉದಾಸಿ ಮತ್ತವನ ಚೇಲಾಗಳಾಗಿದ್ದ ಶಿವರಾಜ್ ಸಜ್ಜನ, ನೆಹರೂ ಓಲೇಕಾರ, ಶಿವಣ್ಣ ತಿಳವಳ್ಳಿಗಳೆಂಬ ರಾಕ್ಷಸರೇ ಕಾರಣರಾಗಿದ್ದರು. ಹೆಚ್ಚೆಂದರೆ ಐನೂರು ರೂಪಾಯಿಗಳಿಗೆ ಸಿಗಬೇಕಿದ್ದ ಗೊಬ್ಬರದ ಚೀಲವನ್ನು ಬಿಜೆಪಿಯವರೇ ಆದ ಗೊಬ್ಬರದಂಗಡಿಯ ಮಾಲೀಕರು ಬ್ಲಾಕ್ ಮಾರ್ಕೆಟ್‌ನಲ್ಲಿ ಒಂದೂವರೆ ಸಾವಿರಕ್ಕೆ ಮಾರುತ್ತಿದ್ದರು. ಇದರ ವಿರುದ್ಧ ರೈತರು ರೊಚ್ಚಿಗೆದ್ದು ಈ ಬಿಜೆಪಿ ನಾಯಕ ಶಿಖಾಮಣಿಗಳಿಗೆ ಮುತ್ತಿಗೆ ಹಾಕಿ ಬೆವರಿಳಿಸಿದ್ದರು. ಇದರಿಂದ ಕೋಪ ಗೊಂಡ ಈ ರಾಕ್ಷಸ ರಾಜಕಾರಣಿಗಳು ರೈತರ ಮೇಲೆ ಪೊಲೀಸರನ್ನು ಛೂಬಿಟ್ಟಿದ್ದರು. ಪರಿಣಾಮವಾಗಿ ಸಿದ್ಧಲಿಂಗಪ್ಪ ಚೂರಿ ಮತ್ತು ಪುಟ್ಟಪ್ಪ ಹೊನ್ನತ್ತಿ ಎಂಬ ಅಮಾಯಕ ರೈತರು ಹೆಣವಾಗಿ ಹೋದರು. ಅತ್ತ ರೈತರು ಪೊಲೀಸರ ಗುಂಡಿಗೆ ಎದೆಯೊಡ್ಡಿ ಹೋರಾಡುತ್ತಾ ತಮ್ಮ ಪ್ರಾಣಕೊಡುತ್ತಿದ್ದರೆ ಇತ್ತ ಉದಾಸಿ ಮತ್ತವನ ಚೇಲಾಗಳು ತಮ್ಮನ್ನು ಘೇರಾವ್ ಮಾಡಿದ ರೈತರ ಮೇಲೆ ಸೇಡು ತೀರಿಸಿಕೊಂಡ ಖುಷಿಗೋ ಏನೋ ಐಬಿಯಲ್ಲಿ ಗುಂಡು ಪಾರ್ಟಿ ಮಾಡಿ ಮಜಾ ಉಡಾಯಿಸಿದರು. ಸಿ.ಎಂ.ಉದಾಸಿ ಹುಬ್ಬಳ್ಳಿಗೆ ಹೋಗಿ ಅಲ್ಲಿಂದ ವಿಮಾನಯೇರಿ ಬೆಂಗಳೂರಿಗೆ ಹಾರಿದರು.

ನಿಮಗೆ ನೆನಪಿರಬೇಕು. ಇದೇ ಯಡಿಯೂರಪ್ಪ ತನ್ನ ಹೆಂಡತಿ ಮೈತ್ರಾದೇವಿ ಸತ್ತಾಗ ಅತ್ತುದಕ್ಕಿಂತ ಹೆಚ್ಚಾಗಿ ಹಾವೇರಿಯಲ್ಲಿ ರೈತರು ಪೊಲೀಸರ ಗುಂಡೇಟು ತಿಂದು ಸತ್ತಾಗ ಕಣ್ಣೀರಿಟ್ಟಿದ್ದರು. ಬಲಿಯಾದ ರೈತರಿಗೆ ಸರ್ಕಾರದ ನೆರವು ಕೊಡುವುದಾಗಿ ಪ್ರಕಟಿಸಿದ್ದರು. ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಹೂಂಕರಿಸಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿರುವತನಕ ಅನ್ನದಾತರಿಗೆ ಅವಶ್ಯವಿರುವ ಬೀಜ-ಗೊಬ್ಬರಗಳು ಕೊರತೆಯಾಗದಂತೆ ಕೊಡುತ್ತೇವೆಂದು ಭರವಸೆ ಕೊಟ್ಟಿದ್ದರು.

ಈಗ ಒಂದು ವರ್ಷ ಕಳೆದಿದೆ. ಈ ವರ್ಷವೂ ಮುಂಗಾರು ಮಳೆ ಚೆನ್ನಾಗಿ ಬಿದ್ದಿದೆ. ಮತ್ತೆ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ. ಅವರು ತಮ್ಮ ಹೊಲಗದ್ದೆಗಳನ್ನು ಹಸನು ಮಾಡಿಟ್ಟುಕೊಂಡಿದ್ದಾರೆ. ಆದರೆ, ಈ ಸಂದರ್ಭದಲ್ಲಿ ಅವರಿಗೆ ಅತೀ ಅವಶ್ಯಕವಾಗಿ ಬೇಕಿರುವ ಗೊಬ್ಬರ ಸಿಗುತ್ತಿಲ್ಲ, ಕಳೆದ ವರ್ಷದಂತೆ ಈ ವರ್ಷವೂ ಮತ್ತೆ ಗೊಬ್ಬರಕ್ಕಾಗಿ ಪಟ್ಟಣದಿಂದ ಪಟ್ಟಣಕ್ಕೆ, ಅಂಗಡಿಯಿಂದ ಅಂಗಡಿಗೆ ಅಲೆಯುತ್ತಿದ್ದಾರೆ. ಹೋದ ವರ್ಷ ಯಡ್ಡಿ ಹಾಕಿದ ಕಣ್ಣೀರು, ಕೊಟ್ಟ ಭರವಸೆಗಳೆಲ್ಲವೂ ಹುಸಿ ಎಂಬುದನ್ನು ಇದು ಮತ್ತೊಮ್ಮೆ ಸಾಬೀತಾಗಿದೆ.

ಸರ್ಕಾರ ಈ ವರ್ಷವೂ ಒಂದು ಗೊಬ್ಬರ ಚೀಲಕ್ಕೆ ಐನೂರು ರೂಪಾಯಿಗಳನ್ನು ನಿಗದಿ ಮಾಡಿದೆ. ಆದರೆ, ಬ್ಲಾಕ್ ಮಾರ್ಕೆಟ್‌ನಲ್ಲಿ ಅದು ಎಂಟು ನೂರರಿಂದ ಒಂದು ಸಾವಿರದ ತನಕ ಮಾರಾಟವಾಗುತ್ತಿದೆ. ರಾಣೇಬೆನ್ನೂರು, ಹಾವೇರಿಗಳ ಗೊಬ್ಬರದಂಗಡಿಯ ಮಾಲೀಕರಲ್ಲಿ ಬಹುತೇಕರು ಬಿಜೆಪಿಯವರೇ ಆಗಿದ್ದರಿಂದ ಉದಾಸಿ, ಸಜ್ಜನ, ಓಲೇಕಾರ, ತಿಳವಳ್ಳಿಗಳಿಗೆ ಒಂದಿಷ್ಟು ಕಮೀಷನ್ ತಿನ್ನಿಸಿ ಈ ರೀತಿ ರೈತರ ಜೀವಗಳನ್ನು ಹಿಂಡುತ್ತಿದ್ದಾರೆ. ತಮಗೆ ಓಟು ಹಾಕಿ ಗೆಲ್ಲಿಸಿದ ರೈತರ ಪರವಾಗಿ ನಿಲ್ಲಬೇಕಿದ್ದ ಈ ಖದೀಮ ಬಿಜೆಪಿ ರಾಜಕಾರಣಿಗಳು ಕಮೀಷನ್ ಎಂಬ ಅಮೇಧ್ಯ ತಿನ್ನುವ ಆಸೆಗೆ ಬಿದ್ದು ಗೊಬ್ಬರದಂಗಡಿಗಳ ಮಾಲೀಕರೊಂದಿಗೆ ಶಾಮೀಲಾಗಿದ್ದಾರೆ. ರೈತರು ಸಿಟ್ಟಿಗೆದ್ದು ಗೊಬ್ಬರದಂಗಡಿಗಳ ಮಾಲೀಕರ ಮೇಲೆ ಮುಗಿಬಿದ್ದಾರೆಂಬ ಭಯದಿಂದ ಮಾಲೀಕರಿಗೆ ರಕ್ಷಣೆ ಕೊಡುವುದಕ್ಕಾಗಿ ಪೊಲೀಸರನ್ನು ನೇಮಿಸಿದ್ದಾರೆ. ಇನ್ನೊಂದೆಡೆ ಜಿಲ್ಲಾಧಿಕಾರಿ ಯಾಗಿರುವ ಪಿ.ಎಸ್.ವಸ್ತ್ರದ್ ಅತ್ತ ಉದಾಸಿ-ಸಜ್ಜನ-ಓಲೇಕಾರರನ್ನೂ ಎದುರು ಹಾಕಿಕೊಳ್ಳದೇ, ಇತ್ತ ರೈತರ ಕೋಪಕ್ಕೂ ಗುರಿಯಾಗದೇ ನಾಮಕಾವಸ್ತೆಗೆ ಎರಡು ಮೀಟಿಂಗ್ ಮಾಡಿ ಗೊಬ್ಬರದ ರೇಟನ್ನು ತಗ್ಗಿಸಬೇಕೆಂದು ಅಂಗಡಿಗಳ ಮಾಲೀಕರಿಗೆ ನೋಟೀಸ್ ಕೊಟ್ಟಿದ್ದಾನೆ. ಮೊದಲೇ ಬಿಜೆಪಿ ನಾಯಕರ ಬೆಂಬಲವಿರುವ ಅಂಗಡಿ ಮಾಲೀಕರು ವಸ್ತ್ರದ್‌ನ ಮಾತನ್ನೆಲ್ಲಿ ಕೇಳುತ್ತಾರೆ? ಆತನ ನೋಟಿಸ್ ಹಾಳೆಯಲ್ಲಿ ಕುಂಡೆ ಒರೆಸಿಕೊಂಡು ಬಿಸಾಡಿದ್ದಾರಷ್ಟೆ.



ಬೊಮ್ಮಾಯಿ



ಉದಾಸಿ

ಕಳೆದ ಬಾರಿ ತಾವು ಮಾಡಿದ ಗೋಲಿಬಾರ್‌ಅನ್ನು ಕಾಂಗ್ರೆಸ್ ತಲೆಗೆ ಕಟ್ಟಲು ಹೋಗಿ ಎಲ್ಲರಿಂದ ಉಗಿಸಿಕೊಂಡಿದ್ದ ಬಸವರಾಜ್ ಬೊಮ್ಮಾಯಿ ಎಂಬ ಎಡಬಿಡಂಗಿ ಈಗಲೂ ಗೊಬ್ಬರದ ಸಮಸ್ಯೆಗೆ ಕಾಂಗ್ರೆಸ್ ಪಕ್ಷವೇ ಕಾರಣ ಎಂದು ಬೊಂಬಡಾ ಹೊಡೆಯುತ್ತಿದ್ದಾನೆ. ಇನ್ನೊಂದೆಡೆಗೆ, ಲೋಕಸಭಾ ಚುನಾವಣೆಯಲ್ಲಿ ಸೋತು ಸುಣ್ಣವಾಗಿರುವ ಕಾಂಗ್ರೆಸ್‌ನ ಸಲೀಮ್ ಅಹ್ಮದ್ ಕೂಡ ರೈತರ ಪರವಾಗಿ ದನಿಯೆತ್ತದೆ ಮನೆಯಲ್ಲಿ ಕುಳಿತಿದ್ದಾರೆ. ರುದ್ರಪ್ಪ ಲಮಾಣಿ, ಬಿ.ಸಿ.ಪಾಟೀಲರಂಥ ಕೆಲವರನ್ನು ಬಿಟ್ಟರೆ ಯಾವುದೇ ಕಾಂಗ್ರೆಸ್ ರಾಜಕಾರಣಿಗಳೂ ಕಂಗಾಲಾಗಿರುವ ರೈತರೊಂದಿಗೆ ಬೆರೆಯುತ್ತಿಲ್ಲ.

ಹೀಗೆ, ಅತ್ತ ಬಿಜೆಪಿಯವರು ಸುಲಿಯುತ್ತಿದ್ದರೆ ಇತ್ತ ಕಾಂಗ್ರೆಸ್ಸಿಗರು ಹತ್ತಿರಕ್ಕೆ ಸುಳಿಯುತ್ತಿಲ್ಲ. ಹಾವೇರಿಯ ರೈತರೀಗ ಮತ್ತಷ್ಟು ಕಂಗಾಲಾಗಿ ಹೋಗಿದ್ದಾರೆ.

ಇನ್ನೊಂದು ವಿಚಾರ ಎಂದರೆ, ಕಳೆದ ವರ್ಷ ಗೊಬ್ಬರ ಕೇಳಿದ್ದಕ್ಕೆ ಗುಂಡೇಟು ಕೊಟ್ಟದ್ದು ರೈತರ ಮನಸ್ಸಿನಿಂದ ಇನ್ನೂ ಮಾಸಿಹೋಗಿಲ್ಲ, ಈ ವರ್ಷವೂ ಪ್ರತಿಭಟನೆಗಿಳಿದರೆ ಮತ್ತೆ ಬಿಜೆಪಿಗಳು ಪೊಲೀಸರನ್ನು ಛೂಬಿಟ್ಟು ಮತ್ತೆ ಕೊಂದು ಹಾಕಿಬಿಡುತ್ತಾರೆನೋ ಎಂಬ ಭಯ ಅವರನ್ನು ಕಾಡುತ್ತಿದೆ. ಆ ಕಾರಣಕ್ಕಾಗಿಯೇ ಇಲ್ಲಿಯತನಕ ಅಂಥ ಉಗ್ರ ಪ್ರತಿಭಟನೆಗಳು ನಡೆದಿಲ್ಲ, ಆದರೂ, ಬೇರೆ ವಿಧಿಯಿಲ್ಲದೇ ಮೊನ್ನೆ ರಾಣೇಬೆನ್ನೂರಿನಲ್ಲಿ ರೈತರು ಬೀದಿಗಿಳಿದಿದ್ದರು. ಆಗ ಅಲ್ಲಿನ ಎಮ್ಮೆಲ್ಲೆ ಶಿವಣ್ಣ ತಿಳವಳ್ಳಿ 'ಗೊಬ್ರ ಕೇಳಿದ್ರೆ ಹುಷಾರ್' ಎನ್ನೋ ಧಾಟಿಯಲ್ಲಿ ರೈತರನ್ನು ಬೆದರಿಸಿದ್ದಾನೆ.

ಸಾರಾಂಶದಲ್ಲಿ ಹೇಳಬೇಕೆಂದರೆ, ಪರಿಸ್ಥಿತಿ ಹೋದ ವರ್ಷಕ್ಕಿಂತ ವಿಶೇಷವಾಗಿ ಭಿನ್ನವಾಗೇನಿಲ್ಲ, ಈಗಾಗಲೇ ಸಾಲದ ಬಾಧೆಯಿಂದ ನರಳುತ್ತಿರುವ ಹಾವೇರಿ ರೈತರನ್ನು ಬಿಜೆಪಿ ಸರ್ಕಾರ ಮತ್ತು ಸಿ.ಎಂ.ಉದಾಸಿ, ಶಿವರಾಜ್ ಸಜ್ಜನ, ನೆಹರೂ ಓಲೇಕಾರ, ಶಿವಣ್ಣ ತಿಳವಳ್ಳಿ, ಶಿವಕುಮಾರ್ ಉದಾಸಿಯಂಥ ಬಿಜೆಪಿ ರಾಜಕಾರಣಿಗಳು ಹಿಂಡಿ ಹಿಪ್ಪೆ ಮಾಡುತ್ತಿದ್ದಾರೆ. ಬಿಜೆಪಿಗಳ ರೈತ ವಿರೋಧಿತನ ಹೋದ ವರ್ಷವೇ ಚೆನ್ನಾಗಿ ಬಯಲಾಗಿದ್ದರೂ ಮತ್ತದೇ ಬಿಜೆಪಿಗೆ ಕಳೆದ ಲೋಕಸಭಾ ಚುನಾವಣೆಯಲ್ಲಾದರೂ ರೈತರು ಪಾಠ ಕಲಿಸಬೇಕಿತ್ತು, ಶಿವಕುಮಾರ್ ಉದಾಸಿಯನ್ನು ಗೆಲ್ಲಿಸುವ ಮೂಲಕ ಮತ್ತದೇ ತಪ್ಪನ್ನು ರೈತರು ಮಾಡಿದ್ದಾರೆ. ಅದರ ಫಲವನ್ನೀಗ ಅನುಭವಿಸಬೇಕಾಗಿದೆ.


ಬಿತ್ತನೆ ಮಾಡಬೇಕಾದ ಈ ಸಮಯದಲ್ಲಿ ರೈತರಿಗೆ ಗೊಬ್ಬರ ಸಿಗಲಿಲ್ಲ ಎಂದರೆ, ವರ್ಷವಿಡೀ ಅವರ ಬದುಕು ಮತ್ತಷ್ಟು ದುಸ್ತರವಾಗುತ್ತದೆ. ಗೊಬ್ಬರ ಕೇಳಿದರೆ ಮತ್ತೆಲ್ಲಿ ಗುಂಡೇಟು ಕೊಡುತ್ತಾರೋ ಎಂಬ ಭಯ ಅವರನ್ನು ಆವರಿಸಿದೆ. ಅತ್ತ ಗೊಬ್ಬರವಿಲ್ಲದೇ ರೈತರು ಪರದಾಡುತ್ತಿದ್ದರೆ ಇತ್ತ ಬಿಜೆಪಿಗಳು ತಮ್ಮೊಳಗೇ ಅಧಿಕಾರಕ್ಕಾಗಿ ಕಚ್ಚಾಡುತ್ತಿದ್ದಾರೆ. ಈ ಒಳಜಗಳವನ್ನು ಬಗೆಹರಿಸಿಕೊಳ್ಳುವುದರಲ್ಲೇ ಬ್ಯೂಸಿಯಾಗಿರುವ ಅವರಿಗೆ ರೈತರ ಬವಣೆಯನ್ನು ಕೇಳಿಸಿಕೊಳ್ಳುವಷ್ಟು ವ್ಯವಧಾನ ಎಲ್ಲಿದೆ? ಪ್ರಾಯಶಃ ಕಳೆದ ಬಾರಿಯಂತೆ ಈ ಸಲವೂ ಕೆಲ ರೈತರ ಹೆಣ ಬಿದ್ದ ಮೇಲೆಯೇ ಅವರು ಎಚ್ಚರ ಗೊಳ್ಳುತ್ತಾರೋ ಏನೋ? ●

ರೈತರು ಗೂಂಡಾಗಳಂತೆ, ಗಲಭೆಕೋರರಂತೆ, ಕುಡುಕರಂತೆ!

ಈ ಮಾತುಗಳನ್ನು ಬೇರೆ ಯಾರೂ ಅಲ್ಲ, ಬಿಜೆಪಿಯ ನಾಯಕ ಶಿಖಾಮಣಿಗಳೇ ಖುದ್ದಾಗಿ ಹೇಳುತ್ತಿದ್ದಾರೆ. ನಮಗೆಲ್ಲಾ ಗೊತ್ತಿರುವಂತೆ ಕಳೆದ ವರ್ಷ ಹಾವೇರಿಯಲ್ಲಿ ಗೋಲಿಬಾರ್ ನಡೆದು ಸಿದ್ದಲಿಂಗಪ್ಪ ಚೂರಿ ಮತ್ತು ಪುಟ್ಟಪ್ಪ ಹೊನ್ನತ್ತಿ ಎಂಬ ಇಬ್ಬರು ಅಮಾಯಕ ರೈತರು ಸತ್ತು ಹೋದರು. ಅಲ್ಲಿಯತನಕ ಇಲ್ಲದ್ದು ಯಡಿಯೂರಪ್ಪನಿಗೆ ಅದೇಕೋ ರೈತರ ಮೇಲೆ ಬಹಳ ಪ್ರೀತಿ ಬಂದು ಇಡೀ ಘಟನೆಗೆ ಸಂಬಂಧಪಟ್ಟಂತೆ ನ್ಯಾಯಮೂರ್ತಿಗಳಿಂದ ವಿಚಾರಣೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಬಡಾಯಿ ಕೊಚ್ಚಿಕೊಂಡರು. ಅದರಂತೆಯೇ ನ್ಯಾಯಮೂರ್ತಿ ಸೋಮಶೇಖರ್ ನೇತೃತ್ವದಲ್ಲಿ ಒಂದು ಆಯೋಗವನ್ನೂ ರಚಿಸಿದರು.

ವಾಸ್ತವದಲ್ಲಿ ಗೋಲಿಬಾರ್ ನಡೆಸಿ ರೈತರನ್ನು ಕೊಲ್ಲುವುದಕ್ಕೆ ಶಿವರಾಜ್ ಸಜ್ಜನ, ನೆಹರೂ ಓಲೇಕಾರ, ಸಿ.ಎಂ.ಉದಾಸಿಯಂಥ ಬಿಜೆಪಿ ನಾಯಕರೇ ಪೊಲೀಸರನ್ನು ಛೂಬಿಟ್ಟದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ತನಿಖೆಯೇನಾದರೂ ನಿಷ್ಪಕ್ಷಪಾತವಾಗಿ ನಡೆದರೆ ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳನ್ನು ಒಳಗೊಂಡಂತೆ ಬಿಜೆಪಿಯ ಮಾನ ಮರ್ಯಾದೆ ಕೂಡ ಹರಾಜಾಗುತ್ತದೆ ಎಂಬುದು ಖುದ್ದು ಯಡ್ಡಿಗೂ ಗೊತ್ತಿದ್ದ [illegible] ಹಾಗಾಗಿ ನಿಷ್ಪಕ್ಷಪಾತ ತನಿಖೆ ನಡೆಸುವುದಕ್ಕೆ ಆಯೋಗಕ್ಕೆ ಅವಕಾಶವನ್ನೇ ಯಡ್ಡಿ ಕೊಡಲಿಲ್ಲ.

ಮೊದಲನೆಯದಾಗಿ ತನಿಖೆಯನ್ನು ಎಷ್ಟು ಸಾಧ್ಯವೋ ಅಷ್ಟು ನಿಧಾನವಾಗಿ ಮಾಡುವಂತೆ ಮಾಡಿದರು. ಏಕೆಂದರೆ, ಇಡೀ ಘಟನೆಯನ್ನೇ ರೈತರು ಮರೆತು ಬಿಡಲಿ ಎಂಬುದು ಅವರ ಹುನ್ನಾರವಾಗಿತ್ತು. ಇನ್ನು ನಾಮ[illegible]ಗಾಗಿ ನಡೆದ ವಿಚಾರಣೆಯಲ್ಲಿ ಪೊಲೀಸ್ ಅಧಿಕಾರಿಗಳಿಂದ ಹಿಡಿದು, ಜಿಲ್ಲಾಧಿಕಾರಿ ಮತ್ತು ಬಿಜೆಪಿ ಎಮ್ಮೆಲ್ಲೆಗಳೆಲ್ಲರೂ ಗೊಬ್ಬರಕ್ಕಾಗಿ ಬೀದಿಗಿಳಿದ ರೈತರನ್ನು 'ಗಲಭೆಕೋರರು', 'ಗೂಂಡಾಗಳು', 'ಕುಡುಕರು' ಎಂದೆಲ್ಲಾ ವ್ಯಾಖ್ಯಾನಿಸಿದರು. ಹಾಗಿದ್ದ ಮೇಲೆ, ಸಿದ್ಧಲಿಂಗಪ್ಪ ಚೂರಿ ರಕ್ತದ ಮಡುವಿನಲ್ಲಿ ಸತ್ತು ಬಿದ್ದಾಗ ಅವರ ಹೆಣದ ಮುಂದೆ ನಿಂತು ಇದೇ ನಾಯಕ ಶಿಖಾಮಣಿಗಳು ಏಕೆ ಕಣ್ಣೀರು ಹಾಕಿದರು? ಹಾವೇರಿ ಜನರ ಈ ಪ್ರಶ್ನೆಗೆ ಅವರೆಲ್ಲಾ ಉತ್ತರ ಕೊಡುತ್ತಾರೆಯೆ?





ಬೆಳಗಾವಿ: ಜಯ ಕರ್ನಾಟಕದ ನುಂಗನಗೌಡ!

ಮುಂಡು ಪೋಕರಿಗಳು, ರೌಡಿಗಳೆಲ್ಲಾ ಸೇರಿ ...ಮು ಕರ್ನಾಟಕದ ನಾಡು, ನುಡಿ, ಸಂಸ್ಕೃತಿ ರಕ್ಷಣೆ ...ಲು ಹೊರಟರೆ ಪರಿಣಾಮ ಹೇಗಿರುತ್ತೆ ಎಂಬುದಕ್ಕೆ ...ಂದು ಉದಾಹರಣೆಯಿದೆ.

ಈತನ ಹೆಸರು ನುಂಗನಗೌಡ, ಕ್ಷಮಿಸಿ ನಿಂಗನಗೌಡ. ... ಕಾರ್ಯಕ್ಷೇತ್ರ ಬೆಳಗಾಂ. 'ಜಯ ಕರ್ನಾಟಕ' ... ಹಫ್ತಾ ವಸೂಲಿ ಕಂಪೆನಿಗೆ ಬೆಳಗಾವಿ ಜಿಲ್ಲಾ ...ಕ್ಷ. ಗೆಬರು ದಂಧೆಯಲ್ಲಿ ನಿಸ್ಸೀಮ. ಬೆಳಗಾವಿ ...ವನನ್ನು ಬೀದಿಯಲ್ಲಿ ಅಟ್ಟಾಡಿಸಿಕೊಂಡು ಕೆರದಿಂದ ...ಮು ಓಡಿಸುವತನಕ ಗೆಬರು ದಂಧೆಯನ್ನು ...ದುವರೆಸೇ ತೀರುತ್ತೇನೆಂದು ಹಠಕ್ಕೆ ಬಿದ್ದಿರುವ ...ವಾದಿ. ಇದಿಷ್ಟು ಇವನ ಸಂಕ್ಷಿಪ್ತ ಪರಿಚಯ.

ಈ ನುಂಗನಗೌಡ ಮೂಲತಃ ಹಾಸನ ಜಿಲ್ಲೆಯ ...ಶಪುರದವನು. ಮೂಲ ಕಸುಬು ಏಲಕ್ಕಿ ವ್ಯಾಪಾರ. ...ವಿ ಜನರ ದುರಾದೃಷ್ಟವೋ ಏನೋ ಕೈಯಲ್ಲಿ ... ಹಿಡಿದುಕೊಂಡು ವ್ಯಾಪಾರ ಮಾಡುತ್ತಾ ಬೆಳಗಾವಿಗೆ ... ವಕ್ಕರಿಸಿಕೊಂಡ. ನಿಯತ್ತಿನಿಂದ ವ್ಯಾಪಾರ ಮಾಡಿ ...ದು ಬದುಕುವ ಅನೇಕ ಅವಕಾಶಗಳಿದ್ದರೂ ...ಗಳನ್ನೆಲ್ಲ ಬಿಟ್ಟು ಅಡ್ಡ ಕಸುಬಿನಿಂದು ದುಡ್ಡು ...ತುವ ಕೆಲಸಕ್ಕೆ ಕೈಯಿಟ್ಟ. ಕಂಡವರ ಜೇಬಿಗೆ ... ಹಾಕುವ, ಅಮಾಯಕರ ತಲೆಗೆ ಮಕ್ಮಲ್ ಟೋಪಿ ...ವ ಕಲೆಗಳನ್ನು ಕರಗತ ಮಾಡಿಕೊಂಡ. ತನ್ನ ...ಕ್ಷತನಗಳಿಂದಲೇ ಅವರಿವರ ತಲೆ ತಿಕ್ಕಿ ಬೆಳಗಾಂವ್ ... ಜೆಡಿಎಸ್ ಘಟಕದ ಕಾರ್ಯಾಧ್ಯಕ್ಷನೂ ಆಗಿಬಿಟ್ಟ. ... ಮುಂದಿಟ್ಟುಕೊಂಡು "ದೇವಗೌಡ ನನಗೆ ...ಮ, ಕುಮಾರಸ್ವಾಮಿ ನನಗೆ ಫ್ರೆಂಡು" ಅಂತ ...ಕೊಳ್ಳುತ್ತಲೇ ಸರ್ಕಾರಿ ಅಧಿಕಾರಿಗಳ ತಲೆ ಸವರಿ ...ಲಿ ಮಾಡಲಾರಂಭಿಸಿದ. ಹಫ್ತಾ ವಸೂಲಿ, ಏಲಕ್ಕಿ ...ರದ ದುಡ್ಡು ಗುಡ್ಡೆಯಾಗಿ ಬೀಳುತ್ತಿದ್ದಂತೆಯೇ ... ಎಂಬ ಗುಟ್ಕಾ ಕಂಪೆನಿಯ ನಿರ್ದೇಶಕನಾಗಿ ...ಕ ಜನರಿಗೆ ವಿಷವುಣಿಸುವ ಹೊಸ ದಂಧೆ ಶುರು ...ಂಡ. ಅಲ್ಲೂ ಅವನಿಗೆ ನಿರೀಕ್ಷೆಯಷ್ಟು ದುಡ್ಡು ... ಹಾಕಿಕೊಳ್ಳಲಾಗಲಿಲ್ಲ, ಅದಕ್ಕಾಗಿ ಹೊಸ ದಂಧೆ ...ಹಚ್ಚಿಕೊಳ್ಳಲು ಆ ಕಡೆ, ಈ ಕಡೆ ನೋಡುತ್ತಿದ್ದ. ...ಗ ಕಣ್ಣಿಗೆ ಕಂಡಿದ್ದೇ 'ಜಯ ಕರ್ನಾಟಕ' ಎಂಬ ... ಕಂಪೆನಿ.

...ಬೆಂಗಳೂರೂ ಸೇರಿದಂತೆ ರಾಜ್ಯದ ಹಲವಾರು ...ಪಟ್ಟಣಗಳಲ್ಲಿ 'ಕನ್ನಡ ಸೇವೆ', 'ಕರ್ನಾಟಕ ಸಂಸ್ಕೃತಿ ...', 'ಕನ್ನಡ ನಾಡು-ನುಡಿಯ ರಕ್ಷಣೆ' ಎನ್ನುತ್ತಾ ... ಸದಸ್ಯರು ಡೀಲ್ ಕುದುರಿಸುತ್ತಿರುವುದು, ಹಫ್ತಾ ವಸೂಲಿ ಮಾಡುತ್ತಿರುವುದು, ಹಣವನ್ನು ಗುಡ್ಡೆ ಹಾಕುತ್ತಿರುವುದು ನಡೆದೇ ಇದೆ. ಇದನ್ನು ಕಂಡು ಬೆಳಗಾವಿಯ ಈ ನುಂಗಣ್ಣನಿಗೂ ಬಾಯಲ್ಲಿ ನೀರೂರಿತು. ಅದರಲ್ಲೂ ಈ ನುಂಗಣ್ಣ ಇರೋದು ಬೆಳಗಾವಿಯಲ್ಲಿ. ಮರಾಠಿ ಮತ್ತು ಕನ್ನಡಿಗರ ಮಧ್ಯೆ ಯಾವಾಗಲೂ ಘರ್ಷಣೆ ನಡೆಯೋ ಜಾಗ. 'ಕನ್ನಡ ನಾಶವಾಗುತ್ತಿದೆ', 'ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ' ಅಂತ ಕಿರುಚೋಕೆ ವರ್ಷವಿಡೀ ಅವಕಾಶವಿರುತ್ತದೆ. ಅರ್ಥಾತ್ ಈ ಹೆಸರಿನಲ್ಲಿ ವರ್ಷವಿಡೀ ಡೀಲ್ ಕುದುರಿಸೋಕೆ, ವಸೂಲಿ ಮಾಡೋಕೆ ಕೆಲಸವಿರುತ್ತೆ. ಇದನ್ನೆಲ್ಲಾ ಯೋಚಿಸಿ ತಡಮಾಡದೇ 'ಜಯ ಕರ್ನಾಟಕ' ಕಂಪೆನಿಗೆ ಸೇರಿಕೊಂಡು ಈಗ ಜಬರ್‌ದಸ್ತಾಗಿ ವಸೂಲಿ ಗಿಳಿದುಬಿಟ್ಟಿದ್ದಾನೆ. ಸರ್ಕಾರಿ ಅಧಿಕಾರಿಗಳನ್ನು ಗೋಳು ಹೊಯ್ದುಕೊಳ್ಳುತ್ತಿದ್ದಾನೆ.

ಕಳೆದ ಚುನಾವಣೆಯಲ್ಲಿ ಜೆಡಿಎಸ್‌ನಿಂದ ತನ್ನ ಹೆಂಡತಿ ರುಕ್ಮಿಣಿಯನ್ನು ಕಣಕ್ಕಿಳಿಸಿದ್ದ. ಈತನಿಗೆ ಎಷ್ಟು ಜನಬೆಂಬಲವಿದೆಯೆಂದರೆ ತಿಣುಕಾಡಿ ಕೊಸರಾಡಿದರೂ ಮೂರು ಸಾವಿರ ಮತ ಹಾಕಿಸುವಷ್ಟರಲ್ಲಿ ಸುಸ್ತಾಗಿಹೋಗಿದ್ದ. ಇವನ ಹೆಂಡತಿ ಠೇವಣಿ ಕಳೆದುಕೊಂಡಿದ್ದರಿಂದ ಈತ ಮನೆ ಸೇರಿದ. ಸದ್ಯಕ್ಕೆ ರಾಜಕೀಯದಲ್ಲಿ ಕಷ್ಟ ಎಂದುಕೊಂಡು ಮತ್ತೆ 'ಜಯ ಕರ್ನಾಟಕ'ದ ಹೆಸರಲ್ಲಿ ತನ್ನ ಗೆಬರು ದಂಧೆಗೆ ಮರಳಿದ್ದಾನೆ. ಕಳೆದ ಚುನಾವಣೆಯಲ್ಲಿ ಕಳೆದುಕೊಂಡ ಹಣವನ್ನೆಲ್ಲಾ ವಾಪಸ್ಸು ಪಡೆದುಕೊಳ್ಳುವುದಕ್ಕೋ ಏನೋ ಈ ಬಾರಿ ಜಬರ್‌ದಸ್ತಾಗಿ ವಸೂಲಿಗಿಳಿದಿದ್ದಾನೆ. ಈ ಗೆಬರು ದಂಧೆ ಯಾವ ಮಟ್ಟದಲ್ಲಿದೆ ಎಂದರೆ ಸ್ವತಃ 'ಜಯ ಕರ್ನಾಟಕ' ಸಂಘಟನೆಯ ಮಹಿಳಾ ಕಾರ್ಯಕರ್ತರೇ ಇವನನ್ನು ಒಮ್ಮೆ ಅಟ್ಟಾಡಿಸಿಕೊಂಡು ಬಡಿದು ಹಾಕಿದ್ದರು.

ಆದರೂ ಇವನಿಗೆ ಇನ್ನೂ ಬುದ್ಧಿ ಬಂದಂತಿಲ್ಲ, ಏಕೆಂದರೆ ಹಡಬೆ ದುಡ್ಡಿನ ಹೊಲಸು ರುಚಿ ಇವನ ನಾಲಿಗೆಗಂಟಿಬಿಟ್ಟಿದೆ. ಮೊನ್ನೆ ಕೆಎಲ್‌ಇ ಆಸ್ಪತ್ರೆಯ ವೈದ್ಯರೊಬ್ಬರನ್ನು ಬೆದರಿಸಿ ಅವರಿಂದ ಐವತ್ತು ಸಾವಿರ ರೂಪಾಯಿ ಗೆಬರಿಕೊಂಡಿದ್ದಾನೆ.

ಇದು ನಾಡು-ನುಡಿಯ ನಿಜವಾದ ರಕ್ಷಣೆಗಾಗಿ ಹೆಮ್ಮರದಂತೆ ಬೆಳೆದಿದ್ದ ಗೋಕಾಕ ಚಳವಳಿಗೆ ಜನ್ಮ ಕೊಟ್ಟ ಬೆಳಗಾವಿಯ ಇಂದಿನ ಪರಿಸ್ಥಿತಿ. ಬೆಳಗಾವಿಯ ನೈಜ ಕನ್ನಡ ಪ್ರೇಮಿಗಳು ಇವನ ಬಟ್ಟೆ ಬಿಚ್ಚಿ ಬೀದಿಯಲ್ಲಿ ಮೆರವಣಿಗೆ ಮಾಡದ ಹೊರತು ಇವನು ಇಲ್ಲಿಂದ ತೊಲಗುವುದಿಲ್ಲ ಅಂತ ಕಾಣುತ್ತೆ.

'ಜೈ ಕರ್ನಾಟಕ!'

● ಮಹಾಲಿಂಗಪ್ಪ ಆಲಬಾಳ

ಬುದ್ಧ "ರಾಜಪಕ್ಷ" ವಹಿಸಿದ್ದೇಕೆ?

■ ಶಿವಸುಂದರ್

ಬುದ್ಧ ಸುಮ್ಮನಿದ್ದನೇಕೆ?
ಬುದ್ಧಪುತ್ರರು ಭೂಮಿಪುತ್ರರನ್ನು
ಹರಿದು ಮುಕ್ಕುವಾಗ
ಬುದ್ಧ ಸುಮ್ಮನಿದ್ದನೇಕೆ?

"ಸಂಘ"ದೊಳಗೆ ಸಿಂಹಗಳು ಬಿಡಾರ ಹೂಡಿದ್ದೇಕೆ?
ಭಿಕ್ಕುವಿನ ಕಮಂಡಲದಲ್ಲೂ ರಕ್ತ ಹೆಪ್ಪುಗಟ್ಟಿದ್ದೇಕೆ?
ದಮ್ಮ ದೇಶದಲ್ಲೂ ಯುದ್ಧ ಕೊನೆಗೊಳ್ಳದೇಕೆ?

ಬುದ್ಧ ಮಹಾಮೌನಿ. ಮೌನಕ್ಕೆ ನೂರೆಂಟು ಅರ್ಥ!
ಆಸೆಯೇ ದುಃಖಕ್ಕೆ ಮೂಲ. ಯಾರಿಗದರ ಅನುಕೂಲ?
ಬದ್ಧರಾಗದ ಭೂಮಿಪುತ್ರರು
ಬದುಕುವ ಆಸೆಯನ್ನೇ ತೊರೆಯಬೇಕೆಂದರೇ ತಥಾಗತರು?!

ಅರಸೊತ್ತಿಗೆ ಮದಮತ್ಸರಗಳ ಸಿಂಹಾಸನ
ಪ್ರತಿಮನವೂ ಅರಮನೆ ತೊರೆಯದೇ
ದೊರೆತೀತೆ ಪರಿನಿರ್ವಾಣ?
ಆದರೂ ರಾಜಪಕ್ಷಿಗಳು "ಸಂಘಮಿತ್ರ"ರಾದರೇಕೆ?

ದೇವನಿಲ್ಲದ ದಮ್ಮ ದಾನವನಾಗದ ಮಾನವ
ಐಹಿಕವೊಲ್ಲದ ಭಿಕ್ಕು ಮನುಕುಲದ ಬೆಳಕು!
ನಿಜ ನಿರ್ವಾಣಕ್ಕೆ 'ರಾಜ'ಮಾರ್ಗವಿಲ್ಲ
ಕೊಲ್ಲಂಬುವನ್ನು ಹಿಡಿದವರಲ್ಲಿ ಬುದ್ಧನಿಲ್ಲ!

ಮಹಾಮನೆ ಅರಮನೆಗೆ ನೆರೆಯಾಗಿದೆ
ತ್ಯಾಗ ಭೋಗಕ್ಕೆ ನೆರವಾಗಿದೆ
ಬುದ್ಧ ರಾಜಪಕ್ಷ ವಹಿಸಿದೆ
ಅಂಗುಲೀಮಾಲನ ಸೇನೆ
ಸಾವಿಲ್ಲದ ಮನೆಗಳ ಸಾಸಿವೆಯನ್ನು ಧ್ವಂಸ ಮಾಡುತ್ತಿದೆ.



...ಂಗ್ರೆಸ್ ಸರ್ಕಾರದ ...ಖಗಳು ಮತ್ತು ...ಖವಾಡಗಳು!

▶ 2

... ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಸಂದರ್ಭವೇ ...ಿಂದ ಕೂಡಿದೆ. ಜಗತ್ತು ಆರ್ಥಿಕ ಹಿಂಜರಿತವನ್ನು ...ತ್ತಿರುವ ಸಂದರ್ಭದಲ್ಲಿ ಲ್ಯಾಟಿನ್ ಅಮೆರಿಕಾ ...ಲ್ಲಿ ಕಾರ್ಪೊರೇಟ್ ಬಂಡವಾಳಶಾಹಿಗಳ ...ದ ಅಜೆಂಡಾ ಹೊಂದಿರುವ ಎಡಪಕ್ಷಗಳು ...ಕ್ಕೆ ಬಂದಿವೆ. ಇವು ಕಾರ್ಪೊರೇಟ್ ಬಂಡವಾಳ ...ಗಳಿಗೆ ಚಿಕ್ಕ ಕಂಗೆಟ್ಟಿದ್ದ ಜನತೆಗೆ ಬಂಡವಾಳಶಾಹಿ ... ಜನಮುಖೀ ನೀತಿಗಳನ್ನು ಜಾರಿಗೆ ... ಅಧಿಕಾರಕ್ಕೆ ಬಂದವು. ಬೊಲಿವಿಯಾ, ..., ಎಲ್‌ಸಾಲ್ವಡಾರ್, ಬೊಲಿವಿಯಾ ಇನ್ನಿತರ ... ಜನಪರ ನೀತಿಗಳನ್ನು ಜಾರಿಗೆ ತರುವ ...ವೆ. ಎಷ್ಟರಮಟ್ಟಿಗೆ ಅವು ಯಶಸ್ವಿಯಾಗುತ್ತವೆ? ಎಷ್ಟು ಕಾಲ ಅಮೆರಿಕ ಅವನ್ನು ಬಾಳಲು ಬಿಡುತ್ತವೆ ಎಂಬುದೆಲ್ಲಾ ಕಾದುನೋಡಬೇಕಾದ ಸಂಗತಿಗಳೇ ಆದರೂ ಅಲ್ಲಿ ಜನಮತ ಅಧಿಕಾರ ರಚನೆಯಲ್ಲೂ ವ್ಯಕ್ತವಾಗಿದೆ.

ಆದರೆ ನಮ್ಮ ದೇಶದಲ್ಲಿ ಜನಾದೇಶವೇ ಒಂದಿದ್ದರೆ ಅಧಿಕಾರ ಹಿಡಿಯುವ ಶಕ್ತಿಗಳು ಅದಕ್ಕೆ ತದ್ವಿರುದ್ಧವಾದ ಶಕ್ತಿಗಳು! ನಮ್ಮಲ್ಲೂ ಜನತೆ ಆರ್ಥಿಕ ಹಿಂಜರಿತ, ಜನವಿರೋಧಿ ಧೋರಣೆಗಳ ವಿರುದ್ಧವೇ ಓಟು ಹಾಕಿದ್ದಾರೆ. ಆದರೆ ಓಟು ಪಡೆದ ಪಕ್ಷಗಳು ಮಾತ್ರ ಜನವಿರೋಧಿ ಧೋರಣೆ ಉಳ್ಳವುಗಳೇ ಆಗಿವೆ. ಕಾಂಗ್ರೆಸ್ಸೂ ಅಷ್ಟೆ, ಬಿಜೆಪಿ, ಎಡರಂಗಗಳೂ ಅಷ್ಟೆ. ಹೀಗಾಗಿಯೇ ಭಾರತದಲ್ಲಿ ಚುನಾವಣೆಯೆಂದರೆ ಆಡಳಿತಾರೂಢ ಪಕ್ಷಗಳ ವಿರುದ್ಧ ಸೇಡು ತೀರಿಸಿಕೊಳ್ಳಲು ಮತದಾರರಿಗೊಂದು ಅವಕಾಶ ಎಂಬಂತಾಗಿದೆ.


ಇಂದು ಜಗತ್ತು ಆರ್ಥಿಕ ಹಿಂಜರಿತದಿಂದ ಹೊರಬರಬೇಕೆಂದರೆ ಇರುವುದು ಎರಡೇ ಮಾರ್ಗ. ಒಂದು ಇನ್ನಷ್ಟು ಜನರನ್ನು ಸುಲಿದು ಕಾರ್ಪೊರೇಟ್ ಶಕ್ತಿಗಳ ನಷ್ಟವನ್ನು ತುಂಬಿಸುವುದು. ಮತ್ತೊಂದು ಕೊಬ್ಬಿರುವ ಬಂಡವಾಳಶಾಹಿಗಳು ಮಾಡಿರುವ ಲೂಟಿಯನ್ನು ಮುಟ್ಟುಗೋಲು ಹಾಕಿಕೊಂಡು ಜನಸಾಮಾನ್ಯರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿ ಆರ್ಥಿಕ ಚೇತರಿಕೆ ತರುವಂತೆ ಮಾಡುವುದು. ಲ್ಯಾಟಿನ್ ಅಮೆರಿಕ ದೇಶದಲ್ಲಿ ಅಧಿಕಾರ ಹಿಡಿದಿರುವ ಎಡಪಕ್ಷಗಳು ಎರಡನೇ ದಾರಿಯಲ್ಲಿ ಪ್ರಯತ್ನಗಳನ್ನು ನಡೆಸುತ್ತಿವೆ. ಆದರೆ ನಮ್ಮಲ್ಲಿ ಎಲ್ಲಾ ಪಕ್ಷಗಳು ಎರಡನೇ ಬಗೆಯ ಭರವಸೆ ನೀಡುತ್ತಾ ಮೊದಲನೇ ಮಾರ್ಗವನ್ನು ಅಂದರೆ ಜನರಿಂದ ಮತ್ತಷ್ಟು ಸುಲಿಯುವ ಮಾರ್ಗವನ್ನು ಅನುಸರಿಸುತ್ತಿವೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನೂರು ದಿನಗಳಲ್ಲಿ- ನೂತನ ಪೆನ್ಷನ್ ಯೋಜನೆ, ಕಾರ್ಮಿಕರನ್ನು ಕಿತ್ತೊಗೆಯುವ ಹೊಸ ಕಾರ್ಮಿಕ ನೀತಿ, ಹೊಸ ವಿಮಾ ನೀತಿ, ಖಾಸಗಿ ಬಂಡವಾಳ ಹೂಡಿಕೆಗೆ ಉತ್ತೇಜನ ನೀಡುವಂಥ ತೆರಿಗೆ ಮತ್ತು ಮೂಲ ಸೌಕರ್ಯ ಯೋಜನೆಗಳ ಜಾರಿ, ಉದ್ದಿಮೆಗಳಿಗೆ ಕಡಿಮೆ ದರದಲ್ಲಿ ಸಾಲ, GST (Goods and Service Tax- ಸರಕು ಮತ್ತು ಸೇವಾ ತೆರಿಗೆ) ಎಂಬ ಹೊಸ ತೆರಿಗೆ ನೀತಿಯ ಮೂಲಕ ಜನರ ಮೇಲೆ ಇನ್ನಷ್ಟು ತೆರಿಗೆ ಹಾಕುವ ನೀತಿಗಳು- ಇಂಥ ಜನರನ್ನು ಮತ್ತಷ್ಟು ಸುಲಿಯುವ ಯೋಜನೆಗಳನ್ನು ಜಾರಿಗೆ ತರಲು ಭೂಮಿಕೆ ಸಿದ್ಧವಾಗಿದೆ. ಆದರೆ ಎರಡು-ಮೂರು ವರ್ಷಕ್ಕೊಮ್ಮೆ ಯಾವುದಾದರೊಂದು ಚುನಾವಣೆ ಎದುರಿಸಿ ಜನರ ಮುಂದೆ ಹೋಗಲೇಬೇಕಾದ ಅನಿವಾರ್ಯತೆಯನ್ನು ಭಾರತದ ರಾಜಕೀಯ ಪಕ್ಷಗಳು ಎದುರಿಸುತ್ತಿವೆ.

ಈ ವೈರುಧ್ಯವನ್ನು ಬಗೆಹರಿಸಿಕೊಳ್ಳಲು ಅವು ಕಂಡುಕೊಂಡಿರುವ ಮಾರ್ಗವೇ ದಲಿತ ಮುಖವಾಡಗಳು. ಈ ಬಾರಿ ಬಹುಪಾಲು ದಲಿತರಿಗೆ ಕೊಟ್ಟಿರುವ ಖಾತೆಗಳೆಲ್ಲಾ ಸಾಮಾಜಿಕ ಸಬಲೀಕರಣ, ಕಾರ್ಮಿಕ, ಮಹಿಳಾ ಮತ್ತು ಮಕ್ಕಳ ಕಲ್ಯಾಣದಂಥ ಮುಖವಾಡದ ಖಾತೆಗಳೇ! ಹಣಕಾಸು, ವಾಣಿಜ್ಯ, ಕೈಗಾರಿಕೆ, ಗೃಹದಂಥ ಖಾತೆಗಳಲ್ಲಿ ಅತ್ಯಂತ ಜನವಿರೋಧಿ ನೀತಿಗಳು ರೂಪುಗೊಳ್ಳುತ್ತವೆ (ಈ ದಲಿತ ಮಂತ್ರಿಗಳೂ ಆ ನೀತಿ ರೂಪುಗೊಳ್ಳುವುದರಲ್ಲಿ ಪಾಲ್ಗೊಳ್ಳುತ್ತಾರೆ). ಆದರೆ ಅದರ ಪರಿಣಾಮ ಕಾರ್ಮಿಕರ ಮೇಲೆ, ಸಮಾಜದ ದುರ್ಬಲ ವರ್ಗಗಳ ಮೇಲೆ ಆದಾಗ ಅದು ಕಾಂಗ್ರೆಸ್ ಪಕ್ಷವನ್ನು ಸುಡದಂತೆ ಕಾಪಾಡಲು ಕಾರ್ಮಿಕ, ಸಮಾಜ ಕಲ್ಯಾಣದಂಥ ಇಲಾಖೆಗಳಿಗೆ ದಲಿತರನ್ನೇ ಮಂತ್ರಿಗಳನ್ನಾಗಿ ಮಾಡಲಾಗಿದೆ.

ವ್ಯಾವಹಾರಿಕವಾಗಿ ಮುಖವಾಡವನ್ನು ಕಿತ್ತೊಗೆಯದೇ ಮುಂದಿನ ಅಸಲಿ ಚಹರೆ ಪತ್ತೆಯಾಗುವುದೇ ಇಲ್ಲ. ●

ಕಡಿದಾಳು ಶಾಮಣ್ಣ


ಕಾಡ ತೊರೆಯ ಜಾಡು 24




ಅಕ್ಷರ ರೂಪ: **ಅಕ್ಷತಾ ಕೆ.**

ಉಳಿಸಲಾಗದ ಮರ ಮತ್ತು ಪ್ರಶಸ್ತಿ ತಿರಸ್ಕರಿಸಿದ್ದು

ಓಮ್ಮೆ ನಮ್ಮ ಮನೆಯಲ್ಲಿ ತೆಂಗಿನಕಾಯಿ ಸುಲಿಸುವಾಗ ಒಂದು ತೆಂಗಿನ ಸಿಪ್ಪೆಯಲ್ಲಿ ಆಲದ ಸಸಿಯೊಂದು ಚಿಗುರಿಕೊಂಡಿತ್ತು. ಅದನ್ನು ಲಾಜವಂತಿ ಮತ್ತವಳ ಗೆಳತಿಯರು ಕಿತ್ಕೊಯ್ದು ನಮ್ಮ ಮನೆಯಿಂದ ಅವರ ಮೈದೊಳಲು ಶಾಲೆಗೆ ಹೋಗುವ ದಾರಿಯಲ್ಲಿದ್ದ ಗುಡ್ಡದ ಮಲ್ಲೇಶ್ವರ ದೇವಸ್ಥಾನದ ಎದುರು ನೆಟ್ಟಿದ್ದರು. ದಿನಾ ಶಾಲೆಗೆ ಹೋಗಿಬರುವ ದಾರಿಯಲ್ಲಿ ಸಿಗುತ್ತಿದ್ದ ಆ ಸಸಿಯ ದೇಖರೇಕಿಯನ್ನು ಆ ಮಕ್ಕಳೇ ಮಾಡುತಿದ್ದರು. ಮಕ್ಕಳು ದೊಡ್ಡವರಾದರು. ಜೊತೆಗೆ ಆ ಆಲದ ಸಸಿಯು ಚಾನಲ್ ನೀರು ಮತ್ತು ಪಕ್ಕದಲ್ಲಿ ಕೆರೆನೀರು ಎಲ್ಲ ಕುಡಿದು ಆರೇಳು ವರ್ಷದಲ್ಲಿ ಹೆಮ್ಮರವಾಗಿ ಬೆಳೆಯಿತು. ಆಗ ಯಾರೋ ಒಬ್ಬ ದೊಡ್ಡ ಮನುಷ್ಯರು ಗುಡ್ಡದ ಮಲ್ಲೇಶ್ವರ ದೇವಸ್ಥಾನದ ಎದುರಿಗೆ ಅಂದರೆ ಮುಖ್ಯರಸ್ತೆಯಿಂದ ದೇವಸ್ಥಾನಕ್ಕೆ ಬರುವ ದಾರಿಯಲ್ಲಿ ಮಂಟಪ ಕಟ್ಟಲು' ಮನಸ್ಸು ಮಾಡಿದರು. ಮಂಟಪಕ್ಕೆ ಈ ಆಲದಮರ ಅಡ್ಡವಾಗುವುದರಿಂದ ಅದನ್ನು ಕಡಿಯುವುದೆಂದು ನಿರ್ಧಾರವಾಯಿತು. ಅದಾಗಲೇ ದೇವಸ್ಥಾನದ ಮುಂದಿದ್ದ ದೊಡ್ಡ ಮರಗಳನ್ನು ಯಾವುದ್ಯಾವುದೋ ಉದ್ದೇಶಕ್ಕೆ ಕಡಿದಿದ್ದರು. ಈಗ ಮಂಟಪಕ್ಕೆ ಅಡ್ಡ ಆಗ್ತದೆ ಮರ ಇದ್ದರೆ ಮಂಟಪ ಕಾಣಲ್ಲ ಅನ್ನೋ ಕ್ಷುಲ್ಲಕ ಕಾರಣದಿಂದ ಈ ಮರವನ್ನು ಕಡಿಯಲು ಹೊರಟಿದ್ದರು. ದೇವಸ್ಥಾನ ಸಮಿತಿ ಇದರಿಂದಲೂ ದುಡ್ಡು ಮಾಡಿಕೊಳ್ಳುವ ಉದ್ದೇಶದಿಂದ ಮರವನ್ನು ಹರಾಜಿಗಿಟ್ಟಿತು. ಇಟ್ಟಿಗೆ ವ್ಯಾಪಾರಿಯೊಬ್ಬ ಇಟ್ಟಿಗೆ ಸುಡಲು ಬಳಸುವ ಉದ್ದೇಶದಿಂದ ಈ ಮರವನ್ನು ಹರಾಜು ಪಡೆದ.



ಶಿವರುದ್ರಪ್ಪ



ಸುಬ್ಬಣ್ಣ

ನಮ್ಮೂರು ಮತ್ತು ಅಕ್ಕಪಕ್ಕದ ಊರುಗಳ ಹುಡುಗರಿಗೆ ಮರ ಕಡಿಯುವ ವಿಷಯ ತಿಳಿಯಿತು. ನಾವು ನೆಟ್ಟು ಬೆಳೆಸಿದ ಮರ ಕಡಿಯೋಕೆ ಹೊರಟಿದ್ದಾರೆ ಹೇಗಾದರೂ ಮಾಡಿ ಮರ ಕಡಿಯಕ್ಕೆ ಬಿಡಬಾರದು ಅಂತ ಅವರೆಲ್ಲ ನನ್ನ ಹತ್ತಿರ ಹೇಳ್ಕೊಂಡ್ರು. ನಾನು ದೇವಸ್ಥಾನ ಸಮಿತಿಯವರನ್ನು ಕಂಡು "ಮರ ಕಡಿಬೇಡಿ. ಮಕ್ಕಳು ನೆಟ್ಟು ಬೆಳೆಸಿದ ಮರ ಅದು. ಮಂಟಪಕ್ಕೆ ಅದರಿಂದ ಏನು ತೊಂದರೆ ಆಗಲ್ಲ'' ಅಂತ ಹೇಳಿದ್ರೆ, "ಆ ಮರ ಕಡಿಲಿಕ್ಕೆ ದೇವರ ಅಪ್ಪಣೆಯಾಗಿದೆ. ಅಪ್ಪಣೆ ಮೀರಕ್ಕಾಗದಿಲ್ಲ'' ಅನ್ನೋ ಅತಿಮಾನುಷ ಕಾರಣ ಕೊಟ್ಟು ಮರ ಕಡಿಯೋದೆ ಸೈ ಅದನ್ನು ಉಳಿಸೋಕೆ ಸಾಧ್ಯವೇ ಇಲ್ಲ ಅಂತ ಸಮಿತಿಯವರು ಹೇಳಿದ್ರು. ಹೇಗಾದ್ರೂ ಮಾಡಿ ಮರ ಉಳಿಸಬೇಕಲ್ಲ ಅಂತ ನಾವೆಲ್ಲ ಯೋಚಿಸುತ್ತಿರಬೇಕಾದರೆ ಸದ್ಯದಲ್ಲೆ ಜಿ.ಎಸ್. ಶಿವರುದ್ರಪ್ಪನವರು ಶಿವಮೊಗ್ಗೆಯ ಕರ್ನಾಟಕ ಸಂಘದ ಕಾರ್ಯಕ್ರಮವೊಂದಕ್ಕೆ ಬರುವ ವಿಷಯ ತಿಳಿಯಿತು. ಅವರು ಬಂದು ಹೇಳಿದರೆ ಈ ಆಲದ ಮರ ಉಳಿಯಬಹುದು ಎಂದು ನಾನು ಯೋಚಿಸಿದೆ. ಏಕೆಂದರೆ ದೇವಸ್ಥಾನದ ಸಮಿತಿ ಅಧ್ಯಕ್ಷರು ಕೂಡ ನನ್ನಂತೆಯೆ ಶಿವರುದ್ರಪ್ಪನವರ ಶಿಷ್ಯರಾಗಿದ್ದರು ಎಂಬ ವಿಷಯ ತಿಳಿದಿತ್ತಾದ್ದರಿಂದ ಗುರುಗಳು ಹೇಳಿದ ಮಾತನ್ನು ಈ ಶಿಷ್ಯ ನಡೆಸಿಕೊಡಬಹುದು ಎಂಬ ಆಶಾವಾದ ನನ್ನದಾಗಿತ್ತು, ನಿಗದಿತ ದಿನದಂದು ಮೇಷ್ಟ್ರು ಕರ್ನಾಟಕ ಸಂಘದ ಕಾರ್ಯಕ್ರಮಕ್ಕೆ ಬಂದರು. ಅವರಿಗೆ ಹೋಗಿ ಮರದ ವ್ಯಥೆಯ ಕತೆ ಹೇಳಿ ನೀವು ಬಂದು ಹೇಳಿದರೆ ಮರ ಉಳಿಯುತ್ತೆ ಅಂದೆ. ಮರ ಉಳಿಯುವುದಾದರೆ ಬಂದೆ ಬರ್ತೀನಿ ಮಾರಾಯ. ಬಂದು ಅಧ್ಯಕ್ಷರಿಗೆ ಹೇಳ್ತೀನಿ ಅಂತ ಮೇಷ್ಟ್ರು ಹೇಳಿದರು. ಅವರನ್ನು ಕರೆದುಕೊಂಡು ನೇರ ಮಲ್ಲಾಪುರದಲ್ಲಿದ್ದ ಅಧ್ಯಕ್ಷರ ಮನೆಗೆ ಹೋದೆ. ಅಲ್ಲಿ ನೋಡಿದರೆ ಅಧ್ಯಕ್ಷರು ಮನೆಯಲ್ಲಿ ಇರಲಿಲ್ಲ. ಅವರ ಮನೆಯಲ್ಲಿದ್ದ ಉಳಿದ ಸದಸ್ಯರನ್ನೆಲ್ಲ ಕೂರಿಸಿಕೊಂಡು ಮೇಷ್ಟ್ರು "ನೋಡಿ, ದೇವಸ್ಥಾನ ಸಮಿತಿಯವರು ದೇವರ ಅಪ್ಪಣೆ ಆಗಿದೆ ಅಂತ ಹೇಳಿ ಆಲದಮರ ಕಡಿಯೋಕೆ ಹೊರಟಿದ್ದಾರಂತೆ. ಆದರೆ ಆಲದಮರದ ಒಂದೊಂದು ರೆಂಬೆಯು ಒಂದೊಂದು ದೇವತೆಗಳ ಆವಾಸಸ್ಥಾನ. ಹಾಗಿರಬೇಕಾದ್ರೆ, ಆಲದಮರ ಕಡಿಯೋಕೆ ಯಾವ ದೇವತೆಯು ಒಪ್ಪಿಗೆ ಕೊಡೋದಿಲ್ಲ, ಯಾವುದೇ ಕಾರಣಕ್ಕೂ ಮರ ಕಡಿಬಾರದು ಅಂತ ಅವರಿಗೆ ನಾನು ಹೇಳಿದಿನಿ ಅಂತ ಹೇಳಿ. ಜೊತೆಗೆ ನೀವು ಕೂಡ ಅವರಿಗೆ ಈ ವಿಷಯದಲ್ಲಿ ತಿಳಿಸಿ ಹೇಳಿ'' ಎಂದು ತಿಳಿವಳಿಕೆ ಹೇಳಿದರು.

ಆವತ್ತು ನಮ್ಮ ಮನೆಯ ಜೋಕಾಲಿಯಲ್ಲಿ ಮೇಷ್ಟ್ರನ್ನು ಕೂರಿಸಿ ಶಿವಮೊಗ್ಗೆಯ ಭಗವಾನ್ ಅವರ ಮಗಳು ಬನುಮಾಳಿಂದ ಶಿವರುದ್ರಪ್ಪನವರೇ ಬರೆದ 'ಜೋಕಾಲಿ' ಪದ್ಯ ಹಾಡಿಸಿ ಕೇಳಿಸಿದ್ದು ಮರೆಯಲಾಗದ ನೆನಪು. ಶಿವರುದ್ರಪ್ಪನವರೇ ಹೇಳಿದ ಮೇಲೆ ಇನ್ನೇನು ಮರ ಕಡಿಯಲ್ಲ ಎಂಬ ನೆಮ್ಮದಿಯಲ್ಲಿ ನಾವಿರುವಾಗ, ಸಮಯ ಕಾದು ಸಮಿತಿಯವರು ಒಂದು ದಿನ ರಾತ್ರೋರಾತ್ರಿ ಆಲದಮರವನ್ನು ಉರುಳಿಸಿಯೆ ಬಿಟ್ಟರು. ನಮಗೆ ಬೆಳಗ್ಗೆಯೇ ಮರ ಉರುಳಿಸಿದ್ದು ಗೊತ್ತಾಗಿದ್ದು. ಇಷ್ಟು ಮಾಡಿದ್ರು ಮರ ಉಳಿಸಿಕೊಳ್ಳಲಿಕ್ಕೆ ಆಗಲಿಲ್ವಲ್ಲ ಎಂಬ ಸಿಟ್ಟನಲ್ಲಿ ಹೋಗಿ ಅರಣ್ಯ ಇಲಾಖೆಗೆ ದೂರು ನೀಡಿದೆ. ಮರವಿದ್ದ ಜಾಗ ಅರಣ್ಯ ಇಲಾಖೆಗೆ ಸೇರಿತ್ತಾದ್ದರಿಂದ ಹಾಗೆಲ್ಲ ಇಲಾಖೆಯ ಒಪ್ಪಿಗೆ ಇಲ್ಲದೆ ಮರ ಕಡಿಯುವ ಹಾಗಿರಲಿಲ್ಲ, ಇಲಾಖೆಯು ದೂರು ತೆಗೆದುಕೊಂಡು ಕ್ರಮ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಟ್ಟಿತು. ಕಡಿದ ಮರವನ್ನು ಇಟ್ಟಿಗೆ ವ್ಯಾಪಾರಿಗೆ ಕೊಡದೆ ಇಲಾಖೆಯೇ ವಶಪಡಿಸಿಕೊಂಡಿತು. ಮುಂದೆ ಯಾವ ಕ್ರಮ ತೆಗೆದುಕೊಂಡಿತೋ ನನಗೆ ಗೊತ್ತಿಲ್ಲ, ಆದರೆ ನಾನು ಹೀಗೆ ಮಾಡಿದ್ದರಿಂದ ಕೆರಳಿದ ಸಮಿತಿಯ ಕೆಲವರು ನನ್ನ ವಿರುದ್ಧ ಮತ್ತೆ ಕೆಲವರನ್ನು ಎತ್ತಿ ಕಟ್ಟಿ ನಮ್ಮ ಮನೆ ಮೇಲೆ ಕಲ್ಲು ಹೊಡೆಸಿದರು. ಅಷ್ಟಕ್ಕೂ ಸುಮ್ಮನಾಗದೆ ನಾನು ಗ್ರಾಮದ ಹಿತಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದೇನೆಂದು ಅದಕ್ಕೆ ಶಿಕ್ಷೆಯಾಗಬೇಕೆಂದು ಪಂಚಾಯ್ತಿ ಕರೆದರು. ಪಂಚಾಯ್ತಿಗೆ ಹೋಗಬೇಡಿ ಎಂದು ಕೆಲವು ಹಿತೈಷಿಗಳು ನನಗೆ ಹೇಳಿದರೂ; ನಾನೇ ಏನು ಮಾಡ್ತಾರೋ ಮಾಡ್ಲಿ ಎಂದು ಪಂಚಾಯ್ತಿಗೆ ಹಾಜರಾದೆ. ನನ್ನ ಜೊತೆ ಅಂದು ರೈತ ಸಂಘದ ಪ್ರಧಾನ ಕಾರ್ಯದರ್ಶಿ ಬಸವರಾಜಪ್ಪನವರು ಬಂದಿದ್ದರು. ಆದರೆ ಪಂಚಾಯ್ತಿದಾರರಲ್ಲೆ ಈ ವಿಷಯದಲ್ಲಿ ಗೊಂದಲ ಏರ್ಪಟ್ಟು ಪಂಚಾಯ್ತಿ ನಡೆಯದೆ ವಾಪಸ್ ಕಳಿಸಿದರು.



ಶಾಮಣ್ಣ ತಮ್ಮ ಮಕ್ಕಳೊಂದಿಗೆ...



ಶಾಮಣ್ಣರ ಮೇಷ್ಟ್ರು ಶಿವರುದ್ರಪ್ಪ

ದೇವೇಗೌಡರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ನನಗೆ ರಾಜ್ಯೋತ್ಸವ ಪ್ರಶಸ್ತಿ ಬಂತು. ಪ್ರಶಸ್ತಿ ಬಂದ ವಿಷಯ ತಿಳಿದದ್ದೆ ನನಗೆ ಪತ್ರಿಕೆಗಳಲ್ಲಿ ಈ ಬಗ್ಗೆ ವರದಿ ಬಂದನಂತರ. ಜಿಲ್ಲಾಧಿಕಾರಿಗಳಿಂದ ಈ ಬಗ್ಗೆ ಒಂದು ಪತ್ರ ಬಂದಿತ್ತಾದರೂ ಈ ಸಂದರ್ಭದಲ್ಲಿ ನಾನು ಊರಿನಲ್ಲಿ ಇರಲಿಲ್ಲವಾದ್ದರಿಂದ ಈ ವಿಷಯ ತಿಳಿದಿರಲಿಲ್ಲ, ಅದೇನೇ ಇದ್ದರೂ ಈ ಪ್ರಶಸ್ತಿಯನ್ನು ನಾನು ತೆಗೆದುಕೊಳ್ಳಲಿಲ್ಲ. ಎರಡು ಕಾರಣಗಳಿಗಾಗಿ ನಾನು ಈ ಪ್ರಶಸ್ತಿಯನ್ನು ತಿರಸ್ಕರಿಸಿದೆ. ಒಂದು ದೇವೆಗೌಡರ ಸರ್ಕಾರ ಅಧಿಕಾರಕ್ಕೆ ಬಂದ ಪ್ರಾರಂಭದಲ್ಲೆ ಭೂ ಮಾರಾಟ ಕಾಯ್ದೆಯನ್ನು ತಿದ್ದುಪಡಿ ಮಾಡಿ ಯಾರಿಗಾದರೂ ಕೃಷಿ ಜಮೀನನ್ನು ಮಾರಾಟ ಮಾಡುವುದಕ್ಕೆ ರಹದಾರಿ ನಿರ್ಮಿಸಿಕೊಟ್ಟಿತ್ತು. ಇದರಿಂದ ಇಂಡಸ್ಟ್ರಿಯಲಿಸ್ಟ್‌ಗಳು, ವ್ಯಾಪಾರಿಗಳು ಹಳ್ಳಿಯ ಕೃಷಿ ಜಮೀನನ್ನು ಖರೀದಿ ಮಾಡಿ ಕೈಗಾರಿಕೆ, ವ್ಯಾಪಾರ ಕೇಂದ್ರಗಳನ್ನು ತೆರೆಯಲು ಅವಕಾಶವಾಯಿತು. ಅಲ್ಲಿಯವರೆಗೂ ಕೃಷಿಕರು ಮಾತ್ರ ಅಂದರೆ ಸ್ವಲ್ಪವಾದರೂ ಕೃಷಿ ಭೂಮಿ ಹೊಂದಿದವರು ಮಾತ್ರವೇ ಹಳ್ಳಿಯ ಕೃಷಿ ಭೂಮಿಯನ್ನು ಖರೀದಿ ಮಾಡಬಹುದಿತ್ತು. ದೊಡ್ಡ ದೊಡ್ಡ ಇಂಡಸ್ಟ್ರಿಯಲಿಸ್ಟ್‌ಗಳಿಗೆಲ್ಲ ಕೃಷಿಭೂಮಿ ವಶಪಡಿಸಿಕೊಳ್ಳಲು ಅವಕಾಶವಿರಲಿಲ್ಲ. ಸಮಾಜವಾದಿ ಪಕ್ಷದವರೇ ಹೋರಾಟ ನಡೆಸಿ ಈ ರೀತಿಯ ಕಾನೂನು ಜಾರಿಗೆ ಬರಲು ಕಾರಣರಾಗಿದ್ದರು. ಆದರೆ ರೈತರ ಹೆಸರೇಳಿಕೊಂಡು ಅಧಿಕಾರಕ್ಕೆ ಬಂದ ದೇವೇಗೌಡರ ಈ ಕಾನೂನನ್ನು ತೆಗೆದುಹಾಕಿದರು. ಸರ್ಕಾರದ ಈ ಕ್ರಮವನ್ನು ವಿರೋಧಿಸಿ ಪ್ರಶಸ್ತಿ ತಿರಸ್ಕರಿಸಿದೆ.

ಜೊತೆಗೆ ಆ ವರ್ಷ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಕೆ.ವಿ.ಸುಬ್ಬಣ್ಣ ಮತ್ತಿತರರಿದ್ದು, ಅವರು ಕಳಿಸಿದ ಅಂತಿಮ ಪಟ್ಟಿಯಲ್ಲಿ ಕೆಲವು ಹೆಸರುಗಳನ್ನು ಕೈಬಿಟ್ಟು ಸರ್ಕಾರದ ಕೆಲವು ಸಚಿವರು ತಮಗೆ ಬೇಕಾದವರ ಹೆಸರನ್ನು ಸೇರಿಸಿದ್ದರು. ಆಯ್ಕೆ ಸಮಿತಿ ಆಯ್ಕೆ ಮಾಡಿದ್ದ ಪರಿಸರವಾದಿ ಕುಸುಮಾ ಸೊರಬರಂಥವರ ಹೆಸರನ್ನೆ ಕೈಬಿಡಲಾಗಿತ್ತು. ಸುಬ್ಬಣ್ಣ ಈ ಬಗ್ಗೆ ಆಕ್ಷೇಪ ಎತ್ತಿದರು. ನನಗೂ ಈ ಪ್ರಶಸ್ತಿ ಸ್ವೀಕರಿಸುವುದು ಅನೈತಿಕ ಎನ್ನಿಸಿತು. ಆಯ್ಕೆ ಸಮಿತಿ ಆಯ್ಕೆ ಮಾಡಿದ್ದಾದರೆ ಅದು ಸಾರ್ವಜನಿಕ ಸಮ್ಮಾನವಾಗುತ್ತದೆ. ಆದರೆ ಅದರಲ್ಲಿ ಮಂತ್ರಿಗಳು ಕೈ ಆಡಿಸಿ ತಮಗೆ ಬೇಕಾದವರ ಹೆಸರು ಸೇರಿಸಿ ವಶೀಲಿಬಾಜಿ ನಡೆಸಿದ್ದರೆ ಅದು ಸಾರ್ವಜನಿಕ ಸಮ್ಮಾನ ಆಗೋದಿಲ್ಲ, ಪ್ರಶಸ್ತಿ ಸ್ವೀಕರಿಸುವವನೆಷ್ಟೆ ನಿಸ್ವಾರ್ಥಿಯಾಗಿ ಪ್ರಶಸ್ತಿಗೆ ಅರ್ಹನಾಗಿದ್ದರೂ ಪ್ರಶಸ್ತಿ ನೀಡುವವರು ಭ್ರಷ್ಟರೂ, ಸ್ವಾರ್ಥಿಗಳೂ ಆಗಿದ್ದರೆ ಅಂಥ ಪ್ರಶಸ್ತಿಗಳನ್ನು ಸ್ವೀಕರಿಸುವುದು ಸರಿಯಲ್ಲ, ರಾಜ್ಯೋತ್ಸವ ಪ್ರಶಸ್ತಿ ಸ್ವೀಕರಿಸಲಿಲ್ಲ ಅಂಥ ನನಗೆ ಇವತ್ತಿಗೂ ದುಃಖವಿಲ್ಲ, ಆದರೆ ಇದೇ ಸಂದರ್ಭದಲ್ಲಿ ರಾಜ್ಯೋತ್ಸವ ಪ್ರಶಸ್ತಿ ವಿಜೇತರು ಅಂತ ನಮ್ಮೂರಿನ ಜನ ಹಾರೋಗೊಳಿಗೆಯಲ್ಲಿ ಕೆ.ವಿ. ಸುಬ್ಬಣ್ಣನವರನ್ನು ಕರೆಸಿ ನನಗೆ ಸನ್ಮಾನ ಮಾಡಿದರು. ಸುಬ್ಬಣ್ಣನವರು ನನ್ನ ಜೊತೆ ಶ್ರೀದೇವಿಯನ್ನು ವೇದಿಕೆಗೆ ಕರೆದು ಇಬ್ಬರಿಗೂ ಒಟ್ಟಿಗೆ ಕೂರಿಸಿ ಸನ್ಮಾನಿಸಿದರು. ಇವತ್ತಿಗೂ ಇದು ನನ್ನ ಬದುಕಿನ ಸಂತೋಷದ ಗಳಿಗೆಗಳಲ್ಲೊಂದು. ■

ಅಗುಳ ಕಂಡರೆ...

ಅನ್ನದೊಂದಗುಳ ಕಂಡು
ಕೂಗಿ ಕರೆವ
ಕಾಗೆ ಬಳಗ

ತಿಪ್ಪೆ ರಾಶಿಯ ಕೆರೆದು
ಹುಳು ಉಪ್ಪಟೆ ತಿನ್ನುವ
ಕೋಳಿ ಹಿಂಡು

ತಿಂದ ಅನ್ನವ ಕಕ್ಕಿ ಉಣ್ಣಿಸಿ
ಕೂಸು ಕುನ್ನಿಗಳ ಸಾಕುವ
ನಾಯಿ ಬೆಕ್ಕುಗಳು

ಊರಿಂದ ಊರಿಗೆ
ಮರದಿಂದ ಮರಕ್ಕೆ ಹಾರುವ
ಮನೆಯಿಲ್ಲದ ಮಠವಿಲ್ಲದ ಹಕ್ಕಿಗಳು

ಅಂದಿನ ಹಸಿವಿಗೆ ಅಂದೇ
ಅನ್ನ ಹುಡುಕಿ
ಎಷ್ಟು ಬೇಕೋ ಅಷ್ಟು ತಿಂದು
ಸುಮ್ಮನೆ ಮಲಗುವ
ಹುಲಿ ಸಿಂಹ ಆನೆ... ಗಳು
ನಮ್ಮೊಳಗೂ ಅವತರಿಸಲಿ

ಷೋಕಿ ಸೋಗಲಾಡಿ ಮನುಷ್ಯ
ಸತ್ತು ಹೋಗಲಿ

ತುತ್ತು ತುತ್ತಿಗೂ
ನೆನಪಾಗಲಿ ಮರೆಯದೇ
'ನಾನು' ನಿರುಪದ್ರವಿ
ಪ್ರಾಣಿಯೆನ್ನುವುದು!

● ವಿ. ಹರಿನಾಥ ಬಾಬು ಸಿರುಗು



...ನ್ನೂ ಮಾಡದೆಯಿರದೆ ಒಂದು ಸಾಧನೆ ಕಣ್ರೊ

...ಡಿಯೂರಪ್ಪ ಮುಖ್ಯಮಂತ್ರಿಯಾಗಿ ಆಗ್ಲೆ ಒಂದೊರ್ಸಾ-
..." ಎಂದ ಸೀರ, ಯಾರದ್ದೊ ಮದುವೆ ಸುದ್ದಿ
...ಂತೆ ನಿರ್ಲಿಪ್ತವಾಗಿ ಹೇಳಿದ.

...ಬಗ್ಗೆ ಮರ್ಯಾಯ್ತು?" ಎಂದ ಕಾಳಮಾವ.

...ದಿನ ಹೋಗದೆ ಗೊತ್ತಾಗದಿಲ್ಲ. ಇದೇ ಮುಂಗಾರು ...ಸೀಮಲ್ಲೆ ಅಲವೆ ರೈತರ ಮ್ಯಾಲೆ ಗೋಲಿಬಾರಾಗಿದ್ದು." ...ಗೋಲಿಬಾರಿನ ಕತಿಯೇನಾಯ್ತು ಅಂತ ಗೊತ್ತೆನೊ ..." ಎಂದ ಉಗ್ರಿ.

..ಇಲ್ಲ."

...ಗೋಲಿಬಾರಾದಾಗ ಅದರ ತನಿಕೆ ಮಾಡಿ ಅಂತ ...ರಪ್ಪ ಆಯೋಗ ನೇಮಕ ಮಾಡಿದ್ದ. ಅದೀಗ ...ಸುರುಮಾಡ್ಯದೆ."

...ಸಿದಿನವೆ ಆಯ್ತು ಬುಡು."

...ಅಲ್ಲಿ ಎಮ್ಮೆಲ್ಲೆ ಏನೇಳ್ತ ಅವುನೆ ಗೊತ್ತೆ? ಗಲಾಟ ...ದೋರು ರೈತರೇ ಅಲ್ಲ, ಯಾರೊ ಕುಡುಕ್ರು ...ಹೇಳ್ತ ಕುಂತವುನೆ."

...ಮುಕ್ಕಾಗಿಬೇಕು ಕಂಡ್ಯ ಅವುನಿಗೆ. ಸತ್ತ ರೈತನ ...ಎಡೂರಪ್ಪೊಗಿ ಅತ್ತು ಕರದು ಪರಿಯಾರ ಕೊಟ್ಟಿದ್ದು

...ದ್ಯಲ್ಲ ನಿಜಬುಡು. ಆದ್ರೆ ಈಗ ಸಾಕ್ಷಿ ಹೇಳ್ತಾಯಿರೊ ... ಕುಡುಕನಂಗೆ ಕಾಣ್ತನೆ. ಅವುನತ್ತಗೆ ಸುಳ್ಳು ಸಾಕ್ಷಿ ...ದರುವಾಗ್ಲೆ ಇತ್ತಗೆ ಎಡೂರಪ್ಪ ಒಂದೊರ್ಸದ ... ಸಮಾವೇಶ ಮಾಡಿಕಂಡ."

...ಯ ಲು ಸೀ ಮ

ಕಟ್ಟೆಪುರಾಣ

▸ಬಿ. ಚಂದ್ರೇಗೌಡ

...ಮಾಡಿರೊ ಕ್ಯಲಸಕೆ ಸಮಾವೇಸ ಭ್ಯಾರೆ ಮಾಡಿದ್ನೆ?" ...ಕಾಳಮಾವ.

...ನು ಕಡದೆತ್ತಾಕಿದನಪ್ಪ ವರುಸದಲ್ಲವುನು?" ಎಂದ

...ಜನಂಗಂತಿ. ಅವುನು ಮಾತ್ರ ಮಾಡಬಾರದ್ನೆ ...! ಅಂತ ಕೊಚ್ಗಗತ್ತ ಅವುನೆ, ಇದಕೇನೇಳ್ತೀ?"

...ಇಲ್ಲಾ, ಎಡೂರಪ್ಪನ್ನ ಜನ ಆರಿಸಿ ಕಳಿಸಿರದು ...ಷದ ಮಟ್ಟಿಗೆ. ಐದೊರ್ಸ ಆದ ಮ್ಯಾಲೆ ಇವುನು ... ಅಳದು ಸುರುದು ತೋರ್ಲಿ. ಒಂದೊರ್ಸಕ್ಕೆ ... ಕಟ್ಟಿ ಹಾಕಿದ್ದಿನಿ ಅನ್ನದಾದ್ರೆ ಇವುನು ಸರಿಲ್ಲ ...ಎಂದ ಕಾಳಮಾವ.

...ವುನ ಲ್ಯಕ್ಕದಲ್ಲಿ ಇದು ಸರಿಯಾಗಿರಬೌದು ...ವ."

...ದ್ಯಂಗ್ಲಾ?"

"ಹಿಂದೆ ಬಂಗಾರಪ್ಪ ಯರಡೇ ವರ್ಸಕ್ಕೆ ಸಾಧನೆ ಸಮಾವೇಶ ಅಂತ ಮಾಡಿಕಂಡುದ್ದ ಗೊತ್ತೆ? ಅವುನೇನೊ ಯೋಜನ, ವಿಶ್ವ ಆರಾಧನೆ, ಶುಸ್ರೂಸೆ ಅಂತ ಯ್ಯಂತ್ಯಂತವ್ವೊ ಕಾರ್ಯಕ್ರಮ ಜಾರಿ ಮಾಡಿ ಅವಿನ್ನೂ ಸುರುವಾಯ್ತಿದ್ದಂಗೆ ಸಾಧನೆ ಸಮಾವೇಶ ಮಾಡಿದ್ದ. ಇವುಂದು ಅದೂ ಇಲ್ಲವಲ್ಲ ಹೇಳು. ಬಂಗಾರಪ್ಪ ಸಮಾವೇಶ ಮಾಡಿಕಂಡು ಮನಿ ಗೋದದ್ದ ನೋದಿದ್ರೆ ಯೆಡೂರಪ್ಪನೂ ಒಂದೇ ವರಸುಕ್ಕೆ ವಂಟರೊನಂಗೆ ಕಾಣ್ತನೆ."

"ಅಂಗಂತಿಯಾ?"

"ಯಾಕೊ ಅಂಗೆ ಕಾಣ್ತದಪ್ಪ, ಅವುನ ಸಾಧನೆ ಸಮಾವೇಶಕ್ಕೆ ಗಣಿ ಕಳ್ರು ಬಂದಿರಲಿಲ್ಲವಂತೆ."

"ಗಣಿ ಕಳ್ರು ಅಂದ್ಯಾರ್ಲ?"

"ಬಳ್ಳಾರಿಲಿರೊ ರೆಡ್ಡಿಗಳು ಗಣಿ ಅಗದು ಮಾರಿ ಭಾರಿ ದುಡ್ಡು ಮಾಡಿಕಂಡವುರೆ ಕಣೆ. ಅವುರ ಪೇಪರ್‌ನೋರು ಗಣಿಧಣಿಗಳು ಅಂತ ಕರಿತರೆ. ನಾನು ಗಣಿಕಳ್ರು ಅಂತಿನಿ. ಅವುರು ಎಡೂರಪ್ಪನ ಸರಕಾರಕೆ ಸಪೋಟು ಮಾಡೋರಿಗ್ಯಲ್ಲ ದುಡ್ಡು ಕೊಟ್ಟು ಯಳಕಂಡು ಬಂದಿದ್ರು. ನಿಮ್ಮ ಜಗ್ಗೇಸನ್ನ ಕೊಂಡ ಕಂಡೋದೋರು ಅವುರೆಯಂತೆ. ಅವುರು ನಮ್ಮಿಂದ್ಲೆ ಎಡೂರಪ್ಪ ಮುಖ್ಯಮಂತ್ರಿಯಾಗಿರದು ಅಂತ ಕುಂತವುರೆ."

"ಅಂಥೋರತ್ರ ಕಾಸೀಸಗಂಡಮ್ಯಾಲೆ ಹಿಂಗೆ ಆಗದು" ಎಂದ ಕಾಳಮಾವ.

"ಎಡೂರಪ್ಪ ಅವುರ್ನ ಮಂತ್ರಿ ಮಾಡಿದ್ದನಂತಲ್ಲಾ?" ಎಂದ ಸೀರ.

"ಮಾಡ್ಯವುನೆ. ಆದ್ರೆ ಉಪ ಮುಖ್ಯಮಂತ್ರಿ ಮಾಡಿ ಅಂತ ಕುಂತಿದ್ದರಂತೆ. ಒಂದು ವೇಳೆ ಮಾಡದೆಯಿದ್ರೆ ಎಡೂರಪ್ಪನ ಒಂದೊರ್ಸದ ಸಾಧನೆನೆ ಕಡೆದಾಗಬವುದು."

"ತಿರಗ ಅದ್ನೆ ಅಂತಿಯಲ್ಲಾ. ಎಡೂರಪ್ಪ ಒಂದೊರ್ಸದಲ್ಲಿ ಯಾವ ಸಾಧನೆ ಮಾಡ್ಯವುನೆ ತೋರ್ಲ?" ಎಂದ ಕಾಳಮಾವ.

"ನಮ್ಮ ದೊಡಪ್ಪ ವಿರೋಧಪಕ್ಷದಲ್ಲಿ ಇರಬೇಕಾಗಿತ್ತು" ಎಂದುಕೊಂಡು ವಾಟಿಸ್ಸೆ ಹಾಜರಾದ.

"ಇವತ್ತು ಜನಗಳೆ ವಿರೋಧಪಕ್ಷ ಅಲವೇನೊ?" ಎಂದ ಉಗ್ರಿ.

"ಎಜ್ಜಾಕ್ಟ್ಲಿ ಕರಟ್. ಕಾಂಗ್ರೆಸ್‌ನವುಕೆ ವಿರೋಧಪಕ್ಷದ ಕ್ಯಲಸ ಮಾಡೇ ಗೊತ್ತಿಲ್ಲ. ಗೊತ್ತಿದ್ರೆ ಇಷ್ಟೊತ್ತಿಗೆ ಎಡೂರಪ್ಪನ ಚೆಡ್ಡಿವಳಿಕೆ ಕೈ ಹಾಕಿ ತೇಲಗುಣ್ಣು ಮೇಲಗಣ್ಣಾಗಂಗೆ ಮಾಡಬವುದಿತ್ತು ಕಣೊ."

"ನೀನೆ ಮಾಡೊ, ಇವತ್ತು ಜನಗಳೇ ರಾಜಕಾರಣಿಗಳ ತಿದ್ದಬೇಕಾಗ್ಯದೆ."

"ನೋಡೊ ಉಗ್ರಿ, ಎಡೂರಪ್ಪನ ಸಾಧನೆ ಏನಪ್ಪ ಅಂದ್ರೆ ಏನ್ನು ಮಾಡದೆಯಿರದೆ ಸಾಧನೆ!"

"ಅಂಗಂತಿಯಾ?"

"ನೋದಿದ್ರೆ ಕಾಣದಿಲವೇನೊ? ರೈತರ ಪರ ಭಾಳ ಹೋರಾಡತಿದ್ದ ಎಡೂರಪ್ಪ ಮ್ಯಕ್ಕೆ ಜ್ವಾಳ ಖರೀದಿ ಮಾಡಿಲ್ಲ ಅಂತ ಹೋಗಿ ಧರಣಿ ಮಾಡೋನು. ಈಗ ಆ ಜ್ವಾಳನೆ ಮರತು ಕುಂತವುನೆ."

"ಮುಖ್ಯಮಂತ್ರಿಯಾದಾಗ್ಲ ಮ್ಯಕ್ಕೆ ಜ್ವಾಳ ಅಂತ ಕುತಗಳಕ್ಕಾದತೆ?"

"ಬ್ಯಳಿಗೆ ಬೆಂಬಲಬ್ಯಲೆ ಕೊಡಬೇಕು ಅಂತ ಬಬ್ಬೆ



ಹ್ವಡಿತಿದ್ದ. ಅದರ ಸುದ್ದಿನೇ ಎತ್ತದಿಲ್ಲ ಈಗ. ಗ್ವಬ್ಬರ, ಬೀಜ ಸಫಿಸಿಯಂಟಾಗಿ ಸಪ್ಲೈ ಮಾಡ್ತಯಿಲ್ಲಾ."

"ಇನ್ನ ಟೈಮುಗೆ ಸಪ್ಲೈ ಮಾಡ್ತನೆ ತಗೊ."

"ಏನ್ ಸಪ್ಲೈ ಮಾಡ್ತನೊ? ಕರಂಟು ನಾಪತ್ತೆ ಆಗ್ಯದೆ. ಆ ಖಾತೆ ನಿರ್ವಯಿಸೊ ಈಶ್ವರಪ್ಪ ರಾಮಚಂದ್ರಾಪುರದ ಮಠದಿಂದ ಪೇಜಾವರನ ಮಠಕ್ಕೆ, ಪೇಜಾವರನ ಮಠದಿಂದ ರಾಮಚಂದ್ರಾಪುರದ ಮಠಕ್ಕೆ ಯಾತ್ರೆ ತಿರುಗ್ತಾಯಿದ್ದನೇ ವರತೂ ಅವನ ಖಾತೆ ವಿಷಯ ತಿಳಕಳಕ್ಕೋಗಲಿಲ್ಲ."

"ಕರಂಟೇ ಇಲ್ಲದ ಮ್ಯಾಲೆ ತಿಳಕಂಡೇನು ಅಂತ ಅವುನು ಆರಾಮಾಗಿರಬವುದು ತಗೊ."

"ಅಂಗೆ ಕಾಣ್ತದೆ. ಅವುನ್ಯಾರೊ ಕೃಷಿ ಮಂತ್ರಿ ಲಾಸ್ಪಿಯರ್ ಏನಂದಿದ್ದ ಗೊತ್ತೆ? ನನಿಗೇನೂ ಗೊತ್ತಿಲ್ಲ ಅಂದಿದ್ದ. ಕೃಷಿ ವಿಷಯನೇ ಗೊತ್ತಿಲ್ಲದೋನು ಕೃಷಿ ಮಂತ್ರಿ ಆಗಿದ್ದ. ಅಂಗೆ ಎಡೂರಪ್ಪನ ಸರ್ಕಾರದಲ್ಲಿ ಭಾಳ ಜನ ಮಂತ್ರಿಗಳಿಗೆ ಅವುರ ಖಾತೆ ವಿಷಯನೇ ಗೊತ್ತಿಲ್ಲ ಕಣೊ. ಅದ್ಕೆ ಬೇರೆ ವಿಷಯ ಮಾತಾಡ್ತವೆ. ಪರೆಗ್‌ಜಾಂಪಲ್ ಈಶ್ವರಪ್ಪನ್ನೆ ನೋಡು. ಲಿಂಗನಮಕ್ಕಿಲಿ ನೀರೆಷ್ಟಿದೆ? ಕರಂಟ್ ಎಷ್ಟು ತಯಾರುಸ್ತಿರಿ? ಅಂದ್ರೆ ರಾಘವೇಶ್ವರ ಸ್ವಾಮಿನ ಟೀಕೆ ಮಾಡಿದೋರು ಹಾಳಾಗೋಯ್ತರೆ, ಗೋವುನ್ನ ಹಗುರವಾಗಿ ಕಂಡೋರು ಗೋಶಾಲೆ ಸೇರ್ತರೆ ಅಂತನೆ. ಇಂಥೋರ ಕಟಿಗೊಂಡು ಎಡೂರಪ್ಪ ಸಾಧನೆ ಮಾಡು ಅಂದ್ರೆ ಏನು ಮಾಡ್ತನೊ? ಅದಕೆ ಸುಳ್ಳು ಸುಳ್ಳೇ ಸಭೆ ಮಾಡಿ ತನ್ನ ಬೆನ್ನ ತಾನೇ ತಟ್ಟಿಗಂಡ ಅತ್ತಗೆ."

"ಬೆಂಗಳೂರಲ್ಲಿ ಇಪ್ಪತ್ತೈದು ಸಪ್ಪುರಜನಕ್ಕೆ ಬಾಡೂಟ ಹಾಕಿದರಂತೆ, ಹೋಗಿದ್ದೇನೊ?"

"ಮಿಸ್ಟರ್ ಉಗ್ರಿ, ಬಜೆಪಿಗಳ ಬಾಡೂಟಕೆ ಹೋಗೋವಷ್ಟು ಗತಿಗೆಟ್ಟಿಲ್ಲ ನಾನು. ಅವುರೇನೊ ಇತ್ತೀಚೆಗೆ ತಿನ್ನದ ಕಲ್ತು ಯಾವ ಮಾಂಸ ಹಾಕಿದ್ರೂ ತಿಂತರೆ. ಅಂಥೋರ ಜ್ವತೆ ಹೋಗಿ ಅಂತಿಲಿ ಕೂರಬಾರ್ದು ಕಣೊ."

"ಬಿಜೆಪಿಗಳೂ ಬಾಡೂಟ ಹಾಕಿದ್ರ?" ಎಂದಳು ಜುಮ್ಮಿ.

"ಇದೇನಕ್ಕ, ಹಿಂಕೇಳ್ತಿ? ಶಿವದಾರದೋರ ಕೇರಿಗೋದ ಕೋಳಿ ಸರುವ್ವೊತ್ತಾದ್ರು ಬರ್ಲಿಲ್ಲ ಅನ್ನಂಗೆ ಆ ಸೋಮಣ್ಣ ಅನ್ನೋನು ಸಿದ್ದಗಂಗೆಸ್ವಾಮಿ ತಮ್ಮನ ಮಗನಂಗಾಡ್ತನೆ. ಅಂಥೊನೆ ಬಾಡೂಟದ ಮೇನೇಜರ್ ಆಯ್ತನೆ ಅಂದ್ರೆ ಏನೇಳನಾ?"

"ನೋಡು ಮತ್ತೆ?" ಎಂದ ಸೀರ.

"ಲ್ಯಕ್ಕ ಹಾಕು ಚಿಗಪ್ಪ, ಮುಂದೆ ಆಡುಕುರಿ ಕೋಳಿ ಉಳಿಯದುಂಟೆ? ನಮ್ಮಂತ ಬಡುವ್ರು ಬಾಡತಂದು ತಿನ್ನಕ್ಕಾದತೇ? ನೀನೆ ಹೇಳು ದ್ವಡಪ್ಪಾ."

"ನಾನೇನೇಳನ್ಲ, ಕಾಗೆಸಂಗ ಮಾಡಿ ಗರುಡಪಕ್ಷಿ ಅಮೇಧ್ಯ ತಿನ್ನದ ಕಲಿತು ಅನ್ನದಾದ್ರೆ, ಅದನ್ನ ಸವಾಸದ ದೋಸ ಅನ್ನಬೇಕೊ ಅಥವಾ ಅದರುಟ್ಟಾಣಕೆಲಿ ದೋಸ ಇತ್ತು ಅನ್ನಬೇಕೊ ಹೇಳು."

"ಯರಡೂ ಅಲ್ಲ ದ್ವಡಪ್ಪ, ಮೇಲಜಾತಿ ಅಂತಿದ್ದೋರು ರಾಜಕಾರಣ ಮಾಡಕ್ಕೆ ಯಾವ ಲೆವೆಲಿಗಾದ್ರು ಇಳಿತಿವಿ ಅನ್ನದ ತೋರಿದ್ರು, ಅಷ್ಟೆ. ಇಲ್ಲ ಅಂದಿಂದ್ರೆ ಕಳದ ಚುನಾವಣೆಲಿ ಅವುರಂಚಿದ ಡ್ರಿಂಕ್ಸು, ಕಾಸು ಯಾರಾರ ಹಂಚಕ್ಕಾಯ್ತೆ?"

"ಅಷ್ಟೊಂದ ಹಂಚಿದ್ರ?"

"ಹಂಚಿದ್ರೂ ಅಂದ್ರೆ ಅಂಗಿಂಗಲ್ಲ, ಅದ ನಾನೇಳ್ತಯಿಲ್ಲ. ಬಿಜೆಪಿ ಪಾರ್ಟಿ ಈಶ್ವರಪ್ಪನೆ ಹೇಳ್ತಾ ಕುಂತವುನೆ. ನಮಿಗೆ ಹತ್ತೊಂಭತ್ತು ಸೀಟು ಬರಬೇಕಾದ್ರೆ ಅಷ್ಟರಮಟ್ಟಿಗೆ ಹಂಚಿದೊ ಅಂತ."

"ಅವುನ್ಯಾಕೆ ಅಂತ ಮಾತ ಬಾಯಿಬುಟ್ಟು ಹೇಳ್ತಅವುನೆ?"

"ಅಲ್ಲೆ ಇರದು ಮಜ. ಈ ಎಡೂರಪ್ಪ ಹತ್ತೊಂಭತ್ತು ಸೀಟು ಗೆದ್ದೆ ಅಂತ ಸಾಧನೆ ಸಮಾವೇಶ ಮಾಡಿಕತ್ತಾ ಅವುನೆ. ಆ ಸಾಧನೆ ನ್ಯಾಯವಾದದ್ದಲ್ಲಾ, ಜನಕೆ ಕುಡಿಸಿ, ತಿನ್ನಿಸಿ ಪಡದಿರೊ ಅಂತದ್ದು ಅನ್ನೊ ಅರ್ಥ ಬರಂಗೆ ಹೇಳ್ಯವುನೆ."

"ಅಂಗರೆ ಬಜೆಪಿಲೂ ಸುರುವಾಯ್ತು ಅನ್ನು?"

"ಸುರುವಾಗಿ ಭಾಳ ದಿನಾಗಿತ್ತು, ಈಗ ಕೀತಗಂಡದೆ. ಇನ್ನೆನಿದ್ರು ರಣಗಾಯದ ಕತೆ ಕೇಳಬೇಕು ನಾವು. ಅದೇನಾರ ಆಗ್ಲಿ ಇನ್ನ ಎಡೂರಪ್ಪ ಇರುವಷ್ಟು ದಿನ ಕ್ವಳ್ಳೆ ನ್ಯಡಿತದೆ. ನೋಡು ಈಗಾಗ್ಲೆ ಕೃಷಿ ಹೆಸರಲ್ಲಿ ಐವತ್ತು ಕೋಟಿ ತಿಂದಾಕಿದ್ದರಂತೆ. ಇದೂ ಕೂಡ ಒಂದು ಸಾಧನೆನೆ."

" ?!"

■

...ವನಿಗೆ ಮೂರ್ರೈ! ನನಗೋ ನಾಲ್ಕೈ!

...ಚ್.ಎಸ್. ಬಳಿಗಿರಿ ಈಚಗೆ ನನಗೊಂದು ಕಾಗದ ಬರೆದು "ನೀವು ...ನನ್ನ ಪದ್ಯದ ಮೇಲೆ ಬರೆದಿದ್ದೀರಂತೆ, ಕಳಿಸಿಕೊಡಲು ಸಾಧ್ಯವೇ? ...ನೋಡಲಾಗಿಲ್ಲ, ವಯಸ್ಸಾದ ಮೇಲೆ ಚಪಲ ನೋಡಿ" ಎಂದು ಬರೆದಿದ್ದಾರೆ. ...ರ ಪದ್ಯದ ಮೇಲೆ ಬರೆದಿರಲಿಲ್ಲ, "ಛೆಛೆ"ಯಲ್ಲಿ ಅವರ ಒಂದೆರಡು ...ಕಾಣಿಸಿದ್ದೆ, ಅವು ನಾನು ಬಹಳ ಹಿಂದೆ ಓದಿ ಮೆಚ್ಚಿದ್ದ ಚುಟುಕಗಳು. ...ಎಸ್.ಬಳಿಗಿರಿ ಒಂದಾನೊಂದು ಕಾಲಕ್ಕೆ ಎಷ್ಟು ಲವಲವಿಕೆಯ, ... ವಿಡಂಬನೆಯ ಮತ್ತು ಪ್ರೀತಿಯ ವ್ಯಕ್ತಿಯಾಗಿದ್ದರು. ಇವರ 'ನಂದನ' ... ನಾವು ಆ ಕವನ ಸಂಕಲನದ ತಮಾಷೆ, ವಿಡಂಬನೆ ನೋಡಿ ...ಮುಗ್ಧರಾಗಿದ್ದೆವು. ಆಮೇಲೆ ಅವರು ತಮ್ಮ ಮೇಲೆ ಒಂದು ಕವನ ...ಒಂದಿದ್ದಾರೆ. ಅದರಲ್ಲಿ ತಾವು ಚಿಕ್ಕಂದಿನಲ್ಲಿ ಹೇಗೆ ಅಯ್ಯಂಗಾರ್ ...ಮದ ಮನುಷ್ಯನಾಗುವುದರಲ್ಲಿದ್ದೆ, ಅಷ್ಟರಲ್ಲಿ ಅಮೆರಿಕದ ಬುದ್ಧಿಜೀವಿ ...ಸಾಲ್ ಅವರ ಬದುಕನ್ನು ಹೇಗೆ ಬದಲಾಯಿಸಿದ ಎಂದು ...ಒಂದಿದ್ದಾರೆ.

...ದಲನೆಯ ಪದ್ಯ ತಮ್ಮ ಹೆಸರಿನ ಬಗ್ಗೆ:


...ಮ ಹೆಸರೆ? ಎಚ್.ಎಸ್. ಬಳಿಗಿರಿ.
...ಲ್ಲವೇ? ಈಗಾದರು ಕೇಳಿರಿ!
... ಎಂದರೆ ನಾ ಹುಟ್ಟಿದ ಹೆಮ್ಮಿಗೆ
... ಎಂಬುದು ಆ ತಂದಿಹ ತಂದೆಗೆ
...ಗಿರಿ ಎಂಬುದು ನನ್ನಯ ಹೆಸರು
...ಹ ಹೆಸರು! ಬಾಯಿಗೆ ಮೊಸರು!

...ಎಲ್ ಐ.ಜಿ.ಐ.ಆರ್ ಐ.
...ಗೆ ಮೂರ್ರೈ! ನನಗೋ ನಾಲ್ಕೈ!

ಆಮೇಲೆ ಇಂಗರ್‌ಸಾಲ್ ತಮಗೆ ಮಾಡಿದ್ದರ ಬಗ್ಗೆ :

ಆಗ ಬಂದವ ಇಂಗರ್‌ಸಾಲ್
ಮೂಢನಂಬಿಕೆಯ ಸದೆಬಡಿ ಕೋಲ್!
ಸಮಾಧಿ, ತಪಸ್ಸು, ದೇವರು, ಆತ್ಮ
ಒಳಗಣ್, ಹೊರಗಣ್, ಶಾಶ್ವತ ಬ್ರಹ್ಮ
ಎಂಬೀಪದಗಳ ಅಜೀರ್ಣ ವ್ಯಾಧಿಗೆ
ಕುಡಿಸಿದನಹಹಾ ಎಣ್ಣೆಯ, ಭೇದಿಗೆ!
ಅಂದಿನಿಂದ ನಾ ಮಣ್ಣಿನ ಭಕ್ತ!
ಆಧ್ಯಾತ್ಮಿಕ ಪರಿಭಾಷಾ ಮುಕ್ತ!
ಮಾನವನೆದೆಯನು ಕದೆಯುವ ಬಗೆಬಗೆ
ರಾಗವೆ ಮೆಚ್ಚಿನ ವಸ್ತುವು ನನಗೆ!





ಸ್ವಪ್ರತಿಷ್ಠೆಯ ಸಾಹಿತ್ಯ ವಿಮರ್ಶಕರು, ಸೋಗಲಾಡಿ ಆಧ್ಯಾತ್ಮವಾದಿಗಳು, ತೇಲುಗಣ್ಣು ಮೇಲುಗಣ್ಣಿನ ಕುಕವಿಗಳು- ಎಲ್ಲರನ್ನೂ ಅಣಕಿಸಿ, ಕಿಚಾಯಿಸಿ ನಗಿಸಿ ಗೋಳು ಹೊಯ್ದುಕೊಂಡ ಎಚ್.ಎಸ್. ಬಳಿಗಿರಿ ಪೂನಾಕ್ಕೆ ಹೋದರು. ಭಾಷಾಶಾಸ್ತ್ರದ ಪ್ರಾಧ್ಯಾಪಕರಾಗಿ ಖ್ಯಾತಿ ಗಳಿಸಿದರು. ವಯಸ್ಸಾಗಿ ನಿವೃತ್ತರಾದರು. ಈಗವರಿಗೆ 66 ವರ್ಷ. ಸಂಗೀತಪ್ರಿಯರಾದ ಭುಜಾರಸಿಕರಾದ ಬಳಿಗಿರಿ ಕನ್ನಡದಲ್ಲಿ ಪೋಲಿ ಪದ್ಯ ಲಿಮರಿಕ್ ಬರೆದ ಮೊದಲಿಗರು; ಅವರ "ಐದು ಕಾಲಿನ ಮೊಂಡು ಕೊಂಡಿಯ ಆರು ಚೇಳುಗಳು" ಎಂಬ ಆರು ಲಿಮರಿಕ್‌ಗಳಲ್ಲಿ ಒಂದನ್ನು ಇಲ್ಲಿ ಕೊಡುತ್ತಿದ್ದೇನೆ. ಅದು ಅಷ್ಟು 'ರಸಿಕತೆ'ಯಿಂದ ಕೂಡಿಲ್ಲ, ತಮಾಷೆಯಾಗಿದೆ.

ನಮ್ಮ ಡೈವರ ಗಾನ ಶಾಸ್ತ್ರೀಯ ಶುದ್ಧ!
ಹಾರ್ನಿನೊಳೆ ಹಾಡುಗಳ ಬಾರಿಸುವ ಸಿದ್ಧ!
ಅದ ಕೇಳಿ ದಾರಿಯೊಳು
ನಿಂತವರನುಡಿಸಲು
ಸುಗಮ ಸಂಗೀತವನು ಅಮುಕಮುಕುತ್ತಿದ್ದ!

ಅವರ ಇನ್ನೊಂದು ಲಿಮರಿಕ್ ಹೀಗಿದೆ:

ಐವತ್ತು ಒಂಬತ್ತು ಹೋಳಿಗೆಯ ಪೂರ್ತಿ
ತಿಂದು ಮುಗಿಸಿದನೊಮ್ಮೆ ನಮ್ಮೂರ
ಮೂರ್ತಿ
"ಹಾಕಿಕೋ ಇನ್ನೊಂದ"
ಎನುವವರಿಗವನೆಂದ:
"ಉಹು! ಬರುವ ವರ್ಷ ತಾನೇ ಷಷ್ಠಿ
ಪೂರ್ತಿ!"

-ಎಲ್ಲ ಪ್ರಯೋಗ, ತಮಾಷೆ, ಅವಾಂತರಗಳನ್ನು ಮರೆತು ಒಂದು ರೀತಿಯ ಗುಗ್ಗು ಸ್ಥಿತಿಯಲ್ಲಿರುವ ಸದ್ಯದ ಕನ್ನಡ ಕಾವ್ಯಕ್ಕೆ ಬಳಿಗಿರಿಯಂಥವರು ತರುಣರು ಬರಬೇಕಾಗಿದೆ. ಈಗ ಬಳಿಗಿರಿ ಮುದುಕರು: ಬದುಕಿನ ಸುಖ, ದುಃಖ ಉಂಡು ಸುಮ್ಮನಾಗಿರುವವರು.

ಆಗಸ್ಟ್ 11,1991

ಅದ್ಭುತವಾದ ಚುನಾವಣಾ ವಿಶ್ಲೇಷಣೆ

ಶಿವಸುಂದರ್ ಅವರ ಚುನಾವಣಾ ವಿಶ್ಲೇಷಣೆ ಓದಿದೆ. ಚೆನ್ನಾಗಿದೆ ಮತ್ತು ಬಿಜೆಪಿಯ ಸೋಲನ್ನು ಸಂಭ್ರಮಿಸುವವರಿಗೆ ಒಂದು ಕಿವಿಮಾತಿನಂತೆಯೂ ಇದೆ.

ಕಾಂಗ್ರೆಸ್‌ನ ಗೆಲುವು ಶಿವಸುಂದರ್ ಹೇಳಿದಂತೆ ತಥಾಕಥಿತ ಜಾತ್ಯತೀತ ಪಕ್ಷಗಳಿಂದ ಕಿತ್ತುಕೊಂಡ ಸೀಟುಗಳಿಂದ ಬಂದದ್ದು. ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನು ಗಳಿಸಿರುವ ಉತ್ತರ ಪ್ರದೇಶ, ಆಂಧ್ರಪ್ರದೇಶ, ಕೇರಳಗಳಲ್ಲಿ ಬಿಜೆಪಿಗೆ ಬಲವಿರಲಿಲ್ಲ. ರಾಜಸ್ಥಾನದಲ್ಲಿ ಕಾಂಗ್ರೆಸ್‌ಗೆ incumbency ಸಹಾಯ ಮಾಡಿದೆ. ಇದು ಕರ್ನಾಟಕದಲ್ಲಿ ಬಿಜೆಪಿಗೂ ಅನುಕೂಲವಾಗಿದೆ. ಇದು ಭಾರತೀಯ ಚುನಾವಣೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಟ್ರೆಂಡ್. ತಮಿಳುನಾಡಿನಲ್ಲಿ ಕಾಂಗ್ರೆಸ್ ಕಳೆದುಕೊಂಡಿದೆ. ಆಂಧ್ರಪ್ರದೇಶದಲ್ಲಿ ಚಿರಂಜೀವಿ, ಮಹಾರಾಷ್ಟ್ರದಲ್ಲಿ ನವನಿರ್ಮಾಣ ಸೇನೆ ಇಲ್ಲದಿದ್ದರೆ ಕಾಂಗ್ರೆಸ್‌ಗೆ ಲಾಭವಾಗುತ್ತಿತ್ತೇ ಎಂಬ ಪ್ರಶ್ನೆ ಎತ್ತಿಕೊಂಡರೆ ಕಾಂಗ್ರೆಸ್ ಲಾಭಗಳಿಸಿದ್ದು ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಮಾತ್ರ. ಪಶ್ಚಿಮ ಬಂಗಾಳದಲ್ಲಿಯೂ ತೃಣಮೂಲದ ಜೊತೆಗಿನ ಗೆಲುವಷ್ಟೇ. ಉತ್ತರ ಪ್ರದೇಶದಲ್ಲಿ ಎಸ್‌ಪಿ ಮತ್ತು ಬಿಎಸ್‌ಪಿಯ ರಾಜಕಾರಣ ಜನರಿಗೆ ಒಂದು ಬಗೆಯ ಸುಸ್ತು ತಂದಿತ್ತು ಎನಿಸುತ್ತದೆ. ಬಿಜೆಪಿ ಇದನ್ನು ಬಳಸಿಕೊಳ್ಳುವಂಥ ಸ್ಥಿತಿಯಲ್ಲಿರಲಿಲ್ಲ. ಕಾಂಗ್ರೆಸ್ ಬಳಸಿಕೊಂಡಿತು.

ಹೊಗಳಿಕೆ ತೆಗಳಿಕೆ

ಕೇರಳದ ಸಮಸ್ಯೆ ಬೇರೆಯೇ ಬಗೆಯದ್ದು. ಸಿಪಿಐಎಂನ ಒಳಗಿನ ಜಗಳಗಳು ಎಡಪಕ್ಷಗಳಿಗೆ ಹೀನಾಯ ಸೋಲು ತಂದಿತು. ಇಲ್ಲದಿದ್ದರೆ ಸೀಟುಗಳ ಸಂಖ್ಯೆ ಇಷ್ಟೊಂದು ಕಡಿಮೆಯಾಗುತ್ತಿರಲಿಲ್ಲ. ಕೇಡರ್‌ಗಳೇ ಒಡೆದು ಎರಡು ಭಾಗವಾಗಿ ಹೋಗಿದ್ದರು. ಒಂದು ವೇಳೆ ಪಿಣರಾಯಿ ವಿಜಯನ್‌ರನ್ನು ಪ್ರಾಸಿಕ್ಯೂಟ್ ಮಾಡಲು ಒಪ್ಪಿ ಕಾರ್ಯದರ್ಶಿಯ ಸ್ಥಾನದಿಂದ ತೆರವುಗೊಳಿಸಿದ್ದರೆ ಫಲಿತಾಂಶ ಬೇರೆಯೇ ಬಗೆಯದ್ದಾಗುವ ಸಾಧ್ಯತೆ ಇತ್ತು. ಆದರೆ ಕೇರಳದಲ್ಲಿ ಅದು ಸಾಧ್ಯವಿಲ್ಲದಂಥ ಸ್ಥಿತಿ ಇದೆ. ಅಲ್ಲಿ ಪಾರ್ಟಿ ಎಂಬುದೊಂದು ಎಸ್ಟಾಬ್ಲಿಷ್‌ಮೆಂಟ್. ಪಾರ್ಟಿಗೆ ಅಲ್ಲಿ ಸಿಕ್ಕಾಪಟ್ಟೆ ವ್ಯಾಪಾರಿ ಆಸಕ್ತಿಗಳೂ ಇವೆ. ಅದು ಕೇವಲ ದೇಶಾಭಿಮಾನಿ ಮತ್ತು ಕೈರಳಿ ಚಾನೆಲ್‌ಗೆ ಮಾತ್ರ ಸೀಮಿತವಾಗಿಯೂ ಈಗ ಉಳಿದಿಲ್ಲ. ಕೇರಳದಲ್ಲಿ ಉದ್ಯಮಗಳಿಲ್ಲ ಎನ್ನುವವರು ಸಿಪಿಐಎಂ ಪಕ್ಷವೇ ದೊಡ್ಡ ಉದ್ಯಮಿ ಎಂಬುದನ್ನು ನೆನಪಿಸಿಕೊಳ್ಳಬೇಕು.

ದಕ್ಷಿಣ ಕನ್ನಡಕ್ಕೆ ಸಂಬಂಧಿಸಿದಂತೆ ಒಂದು ಮಾತು ಸೇರಿಸಬಯಸುತ್ತೇನೆ. ಇದೀ ಲೋಕಸಭಾ ಕ್ಷೇತ್ರದಿಂದ ಎಡ ಪಕ್ಷ ಅಲಿಯಾಸ್ ಸಿಪಿಐಎಂ ಗಳಿಸಿದ್ದು 18,000 ಓಟುಗಳು. ಇದಕ್ಕಿಂತ ಹೆಚ್ಚು ಓಟುಗಳನ್ನು ಸಿಪಿಐಎಂ ಉಳ್ಳಾಲ ವಿಧಾನಸಭಾ ಕ್ಷೇತ್ರವೊಂದರಲ್ಲೇ ಗಳಿಸುತ್ತಿತ್ತು. ಇದೇನು ಒಂದೆರಡು ಚುನಾವಣೆಯ ವಿಷಯವಲ್ಲ. ನಿರಂತರವಾಗಿ ಹತ್ತಾರು ಚುನಾವಣೆಗಳಲ್ಲಿ ಅದು ಈ ಸಾಧನೆ ಮಾಡಿತ್ತು. 1995ರಿಂದ ಈಚೆಗೆ ಈ ಓಟುಗಳ ಸಂಖ್ಯೆ ಇಳಿಮುಖವಾಗುತ್ತಲೇ ಹೋಯಿತು. ಈ ಕ್ಷೇತ್ರದಿಂದ ಎರಡು ಬಾರಿ ಕಮ್ಯುನಿಸ್ಟ್ ಅಭ್ಯರ್ಥಿ ಆಯ್ಕೆಯಾಗಿದ್ದರು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು. ಬಂಟ್ವಾಳ ಮತ್ತು ವಿಟ್ಲ ಕ್ಷೇತ್ರಗಳಲ್ಲೂ ಎಡಪಕ್ಷಗಳಿಗೆ ಒಂದಷ್ಟು ಓಟುಗಳಿದ್ದವು. ಬಂಟ್ವಾಳ ಕ್ಷೇತ್ರದಿಂದ ಸಿಪಿಐನಿಂದ ಸ್ಪರ್ಧಿಸಿ ಬಿ.ವಿ.ಕಕ್ಕಿಲ್ಲಾಯರು ಗೆದ್ದಿದ್ದರು. ಈ ಕ್ಷೇತ್ರ ಬಂಟ್ವಾಳ ಮತ್ತು ವಿಟ್ಲ ಕ್ಷೇತ್ರಗಳಾಗಿ ಒಡೆದ ನಂತರ ಇಲ್ಲಿಂದ ಸಿಪಿಐಗೆ ಗೆಲ್ಲಲು ಸಾಧ್ಯವಾಗಲಿಲ್ಲ.

ಈ ಗೆಲುವಿನ ಕಾಲಘಟ್ಟದಲ್ಲಿಯೂ ಸಿಪಿಐ ಅಥವಾ ಸಿಪಿಐಎಂಗೆ ಉಳ್ಳಾಲ ಅಥವಾ ಬಂಟ್ವಾಳ, ವಿಟ್ಲ ಪ್ರದೇಶದಿಂದ ಒಬ್ಬನೇ ಒಬ್ಬ ಮುಸ್ಲಿಮನನ್ನು ನಾಯಕನನ್ನಾಗಿ ಬೆಳೆಸಲು ಸಾಧ್ಯವಾಗಲಿಲ್ಲ. ಅದು ಬಿಡಿ ಕನಿಷ್ಠ ಗ್ರಾಮ ಮಟ್ಟದ ಮುಖಂಡರೂ ಬೆಳೆಯಲಿಲ್ಲ. ಸಿಪಿಐ ಮತ್ತು ಸಿಪಿಐಎಂಗಳು ಪ್ರಬಲವಾಗಿದ್ದ ಉಳ್ಳಾಲ ಮತ್ತು ಬಂಟ್ವಾಳ ಪ್ರದೇಶಗಳಲ್ಲಿ ಅವುಗಳಿಗೆ ಶಕ್ತಿ ತುಂಬುತ್ತಿದ್ದುದು ಬೀಡಿ ಕಾರ್ಮಿಕರು ಮತ್ತು ಹಂಚಿನ ಕಾರ್ಖಾನೆ ಕಾರ್ಮಿಕರು. ಈ ಎರಡೂ ಪ್ರದೇಶಗಳಲ್ಲಿ ಬೀಡಿ ಕಾರ್ಮಿಕರಾಗಿ ಕೆಲಸ ಮಾಡುವವರಲ್ಲಿ ಹೆಚ್ಚಿನವರು ಮುಸ್ಲಿಮರು. ಇವರೆಲ್ಲರೂ ಸಿಐಟಿಯು ಅಥವಾ ಎಐಟಿಯುಸಿ ಸದಸ್ಯರು. ಇವರಲ್ಲಿ ಯಾರೊಬ್ಬರೂ ಪಕ್ಷದ ನೇತೃತ್ವ ಸ್ಥಾನಕ್ಕೆ ಬರುವಂಥವರಿರಲಿಲ್ಲವೇ? ಸಿಐಟಿಯು ಮತ್ತು ಎಐಟಿಯುಗಳು ಬೀಡಿ ಕಾರ್ಮಿಕರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನಡೆಸುತ್ತಿದ್ದ ಪ್ರತಿಯೊಂದು ಪ್ರತಿಭಟನೆಯಲ್ಲಿಯೂ ಬುರ್ಖಾ ಹಾಕಿಕೊಂಡು ಭಾಗವಹಿಸುತ್ತಿದ್ದ ಹೆಣ್ಣು ಮಕ್ಕಳೆಲ್ಲಾ ಏನಾದರು?

1992ರಲ್ಲಿ ಬಾಬರಿ ಮಸೀದಿ ಉರುಳಿದ ನಂತರ ಎಡ ಪಕ್ಷಗಳ ಕಾರ್ಮಿಕ ಸಂಘಟನೆಗಳ ಸದಸ್ಯರಿಗೆ ಕೋಮುವಾದದ ಅಪಾಯದ ಕುರಿತು ಹೇಳಲು ಹೊರಟ ಇಬ್ಬರು ಈಗಲೂ ದಕ್ಷಿಣ ಕನ್ನಡದಲ್ಲಿದ್ದಾರೆ. ಅವರನ್ನು ಪಕ್ಷ ಹೇಗೆ 'ಪ್ರೋತ್ಸಾಹಿಸಿತು' ಎಂಬುದನ್ನು ನಾನು ವಿವರಿಸಬೇಕಾಗಿಲ್ಲ. ಅವರೇ ನಿಮಗೆ ಹೇಳುತ್ತಾರೆ.

ಈ ಅವಧಿಯಲ್ಲಿ ಕಾಂಗ್ರೆಸ್ ಮತ್ತು ಜನತಾದಳಗಳೂ ಇದಕ್ಕಿಂತ ಭಿನ್ನವಾಗಿರಲಿಲ್ಲ. ಎಂಬತ್ತರ ಕೊನೆಯಲ್ಲಿ ಆರಂಭಗೊಂಡ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್‌ನ ಒಳಜಗಳ ಇಪ್ಪತ್ತು ವರ್ಷಗಳ ನಂತರವೂ ಮುಗಿದಿಲ್ಲ. ಜನಾರ್ದನ ಪೂಜಾರಿ ಬಲ್ಲವರೆಲ್ಲಾ ತನ್ನ ಜೊತೆ ಇದ್ದಾರೆ ಎಂದು ಭ್ರಮಿಸುತ್ತಿರುವಾಗಲೇ ಅವರೆಲ್ಲಾ ಬಿಜೆಪಿ ಸೇರಿಕೊಂಡರು. ರಮಾನಾಥ ರೈ ತರಹದವರು ಮುಸ್ಲಿಮರ ಓಟುಗಳಿಂದಷ್ಟೇ ಗೆಲ್ಲುತ್ತಿದ್ದಾರೆ. ವಸಂತ ಬಂಗೇರರಿಗೆ ತಮ್ಮದೇ ಆದ ಓಟುಗಳಿವೆ.

ದಕ್ಷಿಣ ಕನ್ನಡದಲ್ಲಿ ಇಂದು ಬಿಜೆಪಿ ಬಲವಾದುದ್ದರ ಹಿಂದೆ ಇರುವುದು ದಕ್ಷಿಣ ಕನ್ನಡದ ಲಿಬರಲ್ ಜನರ ಮೌನ ಸಮ್ಮತಿ. ಈ ಮೌನ ಸಮ್ಮತಿ ಎಷ್ಟರ ಮಟ್ಟಿಗಿದೆಯೆಂದರೆ ದಕ್ಷಿಣ ಕನ್ನಡದಲ್ಲಿ ನಡೆಯುತ್ತಿರುವ ಅನೇಕ ಘಟನೆಗಳು ಅಸಹಜವಾದುವು. ಬೇರೆಲ್ಲೂ ಇವು ನಡೆಯುವುದಿಲ್ಲ ಎಂಬುದನ್ನು ಮುಸ್ಲಿಮರೂ ಒಪ್ಪಲಾರದ ಸ್ಥಿತಿ ಅಲ್ಲಿದೆ. ನನ್ನ ಜೊತೆ ಕೆಲಸ ಮಾಡಿದವರು ಕೋಮುವಾದಿಗಳಲ್ಲ ಎಂದು ನಾನು ಭಾವಿಸಿದ್ದರೆ ಈಗ ಅವರೇ 'ಈ ಪ್ರಗತಿಪರರು ಸಣ್ಣಪುಟ್ಟ ಜಗಳಗಳನ್ನೆಲ್ಲಾ ದೊಡ್ಡದು ಮಾಡುತ್ತಾರೆ' ಎನ್ನುತ್ತಾರೆ.

ದಕ್ಷಿಣ ಕನ್ನಡದಲ್ಲಿ ಬಿಜೆಪಿ ಗೆಲ್ಲುತ್ತಿರುವುದಕ್ಕೆ ನನ್ನದೊಂದು ತಮಾಷೆಯ ಉತ್ತರವಿದೆ. ದಕ್ಷಿಣ ಕನ್ನಡದ ವೃತ್ತಪತ್ರಿಕಾ ಮಾರುಕಟ್ಟೆಯ ಶೇಕಡಾ 92 ಭಾಗವನ್ನು ಉದಯವಾಣಿ ಮತ್ತು ವಿಜಯಕರ್ನಾಟಕಗಳೇ ಯಾಕೆ ಆಕ್ರಮಿಸಿಕೊಂಡಿವೆ ಎಂಬುದಕ್ಕೆ ಉತ್ತರ ಹುಡುಕಿದರೆ ಬಿಜೆಪಿ ಗೆಲುವಿಗೆ ಕಾರಣ ಸಿಗುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ನನ್ನದೇ ಒಂದು ಲೆಕ್ಕಾಚಾರವಿದೆ. ಅದನ್ನು ವಿವರಿಸುವುದಕ್ಕೆ ನನಗೀಗ ವ್ಯವಧಾನವಿಲ್ಲ. ಆದರೆ ಸರಳವಾಗಿ ಹೇಳುವುದಾದರೆ ದಕ್ಷಿಣ ಕನ್ನಡದ ಮಾಧ್ಯಮಗಳ ಮಟ್ಟಿಗೆ ಹಿಂದೂತ್ವವನ್ನು ಬೆಂಬಲಿಸುವುದು ಕೇವಲ ಮಾಲೀಕರ ಅಥವಾ ಉದ್ಯೋಗಿಗಳು ನಂಬುವ ಐಡಿಯಾಲಜಿಯಷ್ಟೇ ಆಗಿ ಉಳಿದಿಲ್ಲ. ಅದೊಂದು ಬಿಸಿನೆಸ್ ಪ್ರೊಪೊಸಿಷನ್ ಕೂಡಾ ಹೌದು.

ಹಿಂದೂತ್ವ ಒಂದು ಬಿಸಿನೆಸ್ ಪ್ರೊಪೊಸಿಷನ್ ಆಗಬಹುದು ಎಂಬುದನ್ನು ಮೊದಲು ಕಂಡುಕೊಂಡದ್ದು ಉದಯವಾಣಿ. ಅದನ್ನು ರಾಜ್ಯಕ್ಕೆ ವಿಸ್ತರಿಸಿಕೊಂಡಿದ್ದು ವಿಜಯ ಕರ್ನಾಟಕ. ಈ ಬಗ್ಗೆ ನಾನೊಂದು ಅಧ್ಯಯನವನ್ನೇ ಕೈಗೊಂಡಿದ್ದೇನೆ. ಅದನ್ನು ಆದಷ್ಟು ಬೇಗ ಮುಗಿಸುವ ಆಸೆಯೂ ಇದೆ. ನೋಡೋಣ.

- ಇಸ್ಮಾಯಿಲ್, ಬೆಂಗಳೂರು

ಕನ್ನಡದಲ್ಲಿ ಈ ಬಗೆಯಲ್ಲಿ ಚುನಾವಣಾ ವಿಶ್ಲೇಷಣೆ ಮಾಡಿದ ಲೇಖಕ ಶಿವಸುಂದರ್ ಒಬ್ಬರದ್ದೇ. ಬಿಜೆಪಿ ಕೋಮುವಾದಿ ಪಕ್ಷವು ಕೇಂದ್ರದಲ್ಲಿ ಅಧಿಕಾರ ಹಿಡಿದಿಲ್ಲ ಎಂಬ ಸಂಭ್ರಮದಲ್ಲಿ ನಾವೆಲ್ಲ ಎಷ್ಟೊಂದು ರಾಜಕೀಯ ಆರ್ಥಿಕ ಸೂಕ್ಷ್ಮಗಳನ್ನು ಕೈಬಿಟ್ಟು ಯೋಚಿಸುತ್ತಿದ್ದೇವೆ ಎಂಬುದನ್ನು ಎಚ್ಚರದಿಂದ ನಮ್ಮ ಗಮನಕ್ಕೆ ತರುವ ಈ ಲೇಖನದ ರಾಜಕೀಯ ಪ್ರಜ್ಞೆ ಅತ್ಯಂತ ಪ್ರಬುದ್ಧವಾದುದು.

ಅಭಿನಂದನೆಗಳು.

- ರಹಮತ್ ತರೀಕೆರೆ, ಹಂಪಿ

'ಮಳೆಯಿರಲಿ.. ಜೊತೆಜೊತೆಯಲಿ'




ಮುಂದಿನ ತಿಂಗಳ ಜುಲೈ 2ರಂದು ಗಣೇಶ್ ತಮ್ಮ ಹುಟ್ಟುಹಬ್ಬದ ದಿನದಂದು ಸ್ವಂತ ನಿರ್ಮಾಣದ ಚಿತ್ರವನ್ನು ಆರಂಭಿಸಲಿದ್ದಾರೆ. ಚಿತ್ರದ ಹೆಸರು 'ಮಳೆಯಿರಲಿ.. ಜೊತೆ ಜೊತೆಯಲಿ'. ಈ ಚಿತ್ರವನ್ನು 'ಮುಂಗಾರು ಮಳೆ' ಚಿತ್ರದ ಕಥೆ ಬರೆದ ಪ್ರೀತಂ ಗುಬ್ಬಿ ನಿರ್ದೇಶಿಸಲಿದ್ದಾರೆ. ಪತ್ರಕರ್ತರಾದ ಮಹೇಶ್ ದೇವ್‌ಶೆಟ್ಟಿ ಮತ್ತು ವಿನಾಯಕ ರಾಮ ಕಲಗಾರು ಇದಕ್ಕೆ ಸಂಭಾಷಣೆಯನ್ನು ಬರೆಯಲಿದ್ದಾರೆ. 'ಮುಂಗಾರು ಮಳೆ' ಖ್ಯಾತಿಯ ಛಾಯಾಗ್ರಾಹಕ ಕೃಷ್ಣ ಈ ಚಿತ್ರದಲ್ಲಿ ತಮ್ಮ ಕ್ಯಾಮರಾ ಚಳಕ ತೋರಿಸಲಿದ್ದಾರೆ.

ಕಾಮಿಡಿ ಟೈಮ್ಸ್ ಗಣೇಶ್ 'ಮುಂಗಾರು ಮಳೆ'ಯ ನಂತರ ಕನ್ನಡ ಚಿತ್ರರಂಗದ ದಿಗಂತದಲ್ಲಿ ಗೋಲ್ಡನ್ ಸ್ಟಾರ್ ಗಣೇಶ್ ಆಗಿ ಮಿಂಚಿದ್ದು ಮೆರೆದದ್ದು ನಿಮಗೆಲ್ಲಾ ಗೊತ್ತೇ ಇದೆ. ಆದರೆ ಇತ್ತೀಚೆಗೆ ಆತನ ಮೂರು ಚಿತ್ರಗಳು.. 'ಬೊಂಬಾಟ್', 'ಸಂಗಮ', 'ಸರ್ಕಸ್' ಬಾಕ್ಸಾಫೀಸ್‌ನಲ್ಲಿ ನಿರೀಕ್ಷಿಸಿದಷ್ಟು ಯಶಸ್ಸು ಗಳಿಸಿಲ್ಲ ಎಂಬುದು ಕೂಡಾ ಸತ್ಯ. ಈ ಮೂರು ಚಿತ್ರಗಳ ಸೋಲು ಒಂದು ರೀತಿಯಲ್ಲಿ ಗಣೇಶ್ ತಾರಾಪಟ್ಟವನ್ನೇ ಅಲುಗಾಡಿಸಿದೆ. ಆತನ ಗೋಲ್ಡನ್ ಸ್ಟಾರ್ ಬಿರುದು ತೂಗುಯ್ಯಾಲೆಯಲ್ಲಿದೆ.

ಇಂತಹ ಸಂದರ್ಭದಲ್ಲಿ ಗಣೇಶ್ ಈಗ ಚಿತ್ರ ನಿರ್ಮಾಣ ಮಾಡುವ ಒಂದು ದಿಟ್ಟ ನಿರ್ಧಾರವನ್ನು ಕೈಗೊಂಡಿದ್ದಾರೆ. ಅದು ಅವರಿಗೀಗ ಅನಿವಾರ್ಯ ಕೂಡ ಹೌದು. ಪ್ರೀತಂ ಗುಬ್ಬಿ ಮತ್ತೊಮ್ಮೆ ಗಣೇಶ್‌ಗೆ ಲವರ್ ಬಾಯ್ ಇಮೇಜನ್ನು ಕೊಡುವಲ್ಲಿ ಯಶಸ್ವಿಯಾಗುತ್ತಾರೋ ನೋಡಬೇಕು.

ಜಯಂತಿ ಜಗತ್ತು

"ನೀವು ಮೆಚ್ಚುವಂತಹ ಮೂವರು ವ್ಯಕ್ತಿಗಳು ಯಾರು?" ಎಂದು ಅಭಿನಯ ಶಾರದೆ ಜಯಂತಿ ಅವರನ್ನು ಮೊನ್ನೆ ಪತ್ರಕರ್ತರು ಪ್ರಶ್ನಿಸಿದಾಗ ಅವರು ನೀಡಿದ್ದು ಉತ್ತರ ಏನು ಗೊತ್ತಾ?



"ಲಾರ್ಡ್ ವೆಂಕಟೇಶ್ವರ ನನ್ನ ಗಂಡ, ಗಣೇಶ ನನ್ನ ತಮ್ಮ ಮತ್ತು ಚಾಮುಂಡೇಶ್ವರಿ ನನ್ನ ತಾಯಿ" ಎಂದು ಅವರು ಹೇಳಿದರು.

"ನೀವು ಇಷ್ಟಪಡದೇ ಶಾಪ ಹಾಕಬಹುದಾದ ಮೂವರು ವ್ಯಕ್ತಿಗಳು ಯಾರು?" ಎಂಬ ಮತ್ತೊಂದು ಪ್ರಶ್ನೆ ಎದುರಾದಾಗಲೂ ಜಯಂತಿ ಸಿಟ್ಟು ಮಾಡಿಕೊಳ್ಳಲಿಲ್ಲ. ಬದಲಿಗೆ ಜೋರಾಗಿ ನಕ್ಕ ಅವರು "ನೀವು ಯಾವುದನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಪ್ರಶ್ನೆ ಕೇಳಿದ್ದೀರಿ ಎಂದು ನನಗರ್ಥವಾಗುತ್ತದೆ. ಆದರೆ ನಾನು ನನ್ನ ಶತ್ರುಗಳಿಗೂ ಶಾಪ ಹಾಕುವುದಿಲ್ಲ" ಎಂದು ಜಾಣತನದಿಂದ ಉತ್ತರಿಸಿದರು.

"ಹಾಗಾದರೆ ನಿಮಗೆಷ್ಟು ಜನ ಶತ್ರುಗಳಿದ್ದಾರೆ?" ಎಂಬ ಪ್ರಶ್ನೆ ಬಂತು. ಆಗ ಜೀವನದಲ್ಲಿ ಹಲವಾರು ನೋವು, ವಂಚನೆಗೆ ಗುರಿಯಾಗಿರುವ ಜಯಂತಿ ಅವರು ಹೇಳಿದ್ದು "ನನಗೆ ಯಾರೂ ಶತ್ರುಗಳೇ ಇಲ್ಲ."

ಇದೆಲ್ಲಾ ಮಾತುಕತೆ ನಡೆದದ್ದು ಸಿನಿಮಾ ಪತ್ರಕರ್ತರು ಏರ್ಪಡಿಸಿದ್ದ ಅಮೃತ-ಮಾತು-ಮಂಥನ ಕಾರ್ಯಕ್ರಮದಲ್ಲಿ.

ಕಾಸು ಕೊಡದ ಕಲಾಕಾರ್

'ಆಪರೇಷನ್ ಸಕ್ಸಸ್, ಪೇಷಂಟ್ ಡೈಡ್' ಎನ್ನುವ ಮಾತಿನಂತಾಗಿದೆ 'ಕಲಾಕಾರ್' ಚಿತ್ರದ ನಾಯಕ ಹರೀಶ್ ರಾಜ್ ಪರಿಸ್ಥಿತಿ. ಸಿನಿಮಾ ಮತ್ತು ಟಿವಿ ಧಾರಾವಾಹಿಗಳಲ್ಲಿ ಚಿಕ್ಕಪುಟ್ಟ ಪಾತ್ರಗಳಿಂದ ಗಮನ ಸೆಳೆಯುತ್ತಿದ್ದ ಹರೀಶ್ ರಾಜ್ ನಾಯಕನಾಗುವ ಅತ್ಯುತ್ಸಾಹದಲ್ಲಿ ತಾನೇ ಹಣ ಹಾಕಿ 'ಕಲಾಕಾರ್' ಎಂಬ ಚಿತ್ರವನ್ನು ನಿರ್ಮಿಸಿ, ನಿರ್ದೇಶನ ಕೂಡಾ ಮಾಡಿದರು.

ಈ ಚಿತ್ರ ವಿಮರ್ಶಕರ ಮೆಚ್ಚುಗೆ ಗಳಿಸಿತು. ಚೊಚ್ಚಲ ನಿರ್ದೇಶನದಲ್ಲಿ ಹರೀಶ್ ರಾಜ್ ತನ್ನ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಅಷ್ಟೇ ಅಲ್ಲ, ನಾಯಕ ನಟನಾಗಿಯೂ ಪಾತ್ರಕ್ಕೆ ಜೀವ ತುಂಬಿದ್ದಾರೆ ಎಂದೆಲ್ಲ ಅಭಿಪ್ರಾಯಪಟ್ಟಿದ್ದರು.

ಆದರೆ ಆತ ತನ್ನ ಪ್ರತಿಭೆಯನ್ನು ಈ ಚಿತ್ರದ ಮುಖಾಂತರ ಪ್ರದರ್ಶಿಸಿದ್ದರೂ ಚಿತ್ರ ಮಾತ್ರ ಪ್ರೇಕ್ಷಕರನ್ನು ಥಿಯೇಟರೆಡೆಗೆ ಸೆಳೆಯುವಲ್ಲಿ ವಿಫಲವಾಗಿದೆ. ಹೀಗಾಗಿ ಚಿತ್ರಮಂದಿರಗಳೆಲ್ಲ ಖಾಲಿ ಹೊಡೆಯುತ್ತಿದೆ. ಪ್ರಶಂಸೆ, ಮೆಚ್ಚುಗೆ ಬಂದಂತೆ ಕಾಸು ಬರಲಿಲ್ಲ ಎಂಬ ದುಃಖದಲ್ಲಿದ್ದಾರೆ ಹರೀಶ್ ರಾಜ್.



sms ಜೋಕ್ಸ್



"ಪ್ರತಿ ಯಶಸ್ವಿ ಪುರುಷನ ಹಿಂದೆ ಒರ್ವ ಮಹಿಳೆ ಇರುತ್ತಾಳೆ"
-ಸ್ವಾಮಿ ವಿವೇಕಾನಂದ.

"ಪ್ರತಿ ಸಂತೃಪ್ತಗೊಂಡ ಮಹಿಳೆಯ ಮುಂದೆ ಒರ್ವ ಬಳಲಿದ ಪುರುಷನಿರುತ್ತಾನೆ"
-ಸ್ವಾಮಿ ಸುಸ್ತಾನಂದ.

* * * * *

ವಿನಾಕಾರಣ ಜೈಲು ಪಾಲಾಗಿದ್ದ ಒರ್ವ ನಿರಪರಾಧಿ ಯುವಕನ ವೃದ್ಧ ತಂದೆ ತನ್ನ ಹೊಲವನ್ನು ಬೇಸಾಯ ಮಾಡಲಾಗದೆ ಕೂತಿದ್ದ. ಒಂದು ದಿನ ಆತ ತನ್ನ ಪುತ್ರನಿಗೆ ಪತ್ರ ಬರೆದು ಅದರಲ್ಲಿ "ಈ ವರ್ಷ ನಾನು ನಮ್ಮ ಹೊಲದಲ್ಲಿ ಏನನ್ನೂ ಬೆಳೆಯುವುದಿಲ್ಲ. ಯಾಕೆಂದರೆ ಹೊಲವನ್ನು ಉಳಲು ವಯಸ್ಸಾಗಿರುವ ನನ್ನೊಬ್ಬನಿಂದ ಸಾಧ್ಯವಿಲ್ಲ. ನೀನು ಇದ್ದಿದ್ದರೆ ಖಂಡಿತವಾಗಿಯೂ ಹೊಲವನ್ನು ಉಳುವುದಕ್ಕೆ ನನಗೆ ಸಹಾಯ ಮಾಡುತ್ತಿದ್ದೆ" ಎಂದು ತನ್ನ ಬೇಸರವನ್ನು ತೋಡಿಕೊಂಡ.

ಆ ಪತ್ರವನ್ನು ಓದಿದ ಮಗ "ಏ ಪೆದ್ದು ಮುಂಡೇದೆ... ಯಾವ ಕಾರಣಕ್ಕೂ ನಮ್ಮ ಹೊಲವನ್ನು ಉಳಲು ಹೋಗಬೇಡ. ನಾನು ದರೋಡೆ ಮಾಡಿರುವುದನ್ನೆಲ್ಲ ಹೂತಿರುವುದು ನಮ್ಮ ಹೊಲದಲ್ಲೇ" ಎಂದು ಪತ್ರ ಬರೆದ.

ಮರುದಿನವೇ ಪೊಲೀಸರು ವೃದ್ಧನ ಹೊಲಕ್ಕೆ ಬಂದು ಎಲ್ಲೆಡೆ ಅಗೆಯಲಾರಂಭಿಸಿದರು. ಆದರೆ ಅವರೆಷ್ಟೇ ಅಗೆದರೂ ಅಲ್ಲಿ ಅವರಿಗೇನೂ ಸಿಗಲಿಲ್ಲ. ಇದಾದ ಕೆಲ ದಿನಗಳ ನಂತರ ವೃದ್ಧ ತಂದೆಗೆ ಮಗನಿಂದ ಇನ್ನೊಂದು ಪತ್ರ ಬಂತು. ಅದರಲ್ಲಿ "ಈಗ ನೀನು ನಮ್ಮ ಹೊಲದಲ್ಲಿ ಬಿತ್ತನೆ ಮಾಡು. ಇಲ್ಲಿಂದ ನಿನಗೆ ಇಷ್ಟು ಸಹಾಯ ಮಾಡಲು ಮಾತ್ರ ನನ್ನಿಂದ ಸಾಧ್ಯವಾಯಿತು" ಎಂದು ಚಾಣಾಕ್ಷ ಮಗ ಬರೆದಿದ್ದ!

* * * * *

ಗಣಿತ ಶಾಸ್ತ್ರದ ಅತ್ಯಂತ ನಿಗೂಢ ಸಮಸ್ಯೆಯೆಂದರೆ :

ಮಾನವ ನಾಗರಿಕತೆಗಳನ್ನು ಸ್ಥಾಪಿಸಿ ಸಾವಿರಾರು ವರ್ಷಗಳೇ ಉರುಳಿದ್ದರೂ, ಮಿಲಿಯನ್‌ಗಟ್ಟಲೆ ಥಿಯರಮ್‌ಗಳನ್ನು ಕಂಡುಹಿಡಿದಿದ್ದ ಕೋಟ್ಯಂತರ ಫಾರ್ಮುಲಾಗಳನ್ನು ರೂಪಿಸಿದ್ದರೂ.....

ಇವತ್ತಿನವರೆಗೂ ಯಾರಿಗೂ X ಎಂದರೆ ಏನೆಂದು ಗೊತ್ತಿಲ್ಲ!

ಆದರೆ XXX ಅಂದರೆ ಎಲ್ಲರಿಗೂ ಗೊತ್ತು!

* * * * *

ಸ್ವರ್ಗವೆಂದರೆ : ನಿಮ್ಮ ಬಳಿ ಜರ್ಮನ್ ಕಾರು, ಅಮೆರಿಕದ ಸಂಬಳ, ಚೀನಾದ ತಿಂಡಿ ತಿನಿಸು ಮತ್ತು ಭಾರತೀಯ ಪತ್ನಿ ಇದ್ದಾಗ!

ನರಕವೆಂದರೆ : ನಿಮ್ಮ ಬಳಿ ಚೀನಾದ ಕಾರ್, ಜರ್ಮನಿಯ ತಿಂಡಿ ತಿನಿಸು, ಅಮೆರಿಕದ ಪತ್ನಿ ಮತ್ತು ಭಾರತೀಯ ಸಂಬಳ ಇದ್ದಾಗ!


* * * * *

"ಸೀರೆ ಉಡುವುದು ಭಾರತೀಯ ಸಂಸ್ಕೃತಿ"

-ಭಾರತೀಯರಾದ ನಾವು ಅದನ್ನು ಪತ್ತೆ ಹಿಡಿಯಬೇಕು!



ಸಾಧಕನ ಸೇತುವೆಯಲ್ಲಿ....!




ಸುಮಾರು ಒಂಬೈನೂರಕ್ಕೂ ಹೆಚ್ಚು ಕನ್ನಡ ಸಿನಿಮಾಗಳಿಗೆ ಪತ್ರಿಕಾ ಸಂಪರ್ಕಾಧಿಕಾರಿಯಾಗಿ ದುಡಿದು, ಮೂರು ವರ್ಷಗಳ ಹಿಂದೆ ...ಮ್ಮ 52ನೇ ವಯಸ್ಸಿಗೇ ಕಣ್ಮುಚ್ಚಿದ ಡಿ.ವಿ. ಸುಧೀಂದ್ರ ...ನಮಾರಂಗದವರಿಗೆ ಮತ್ತು ಪತ್ರಕರ್ತರಿಗೆ ಪ್ರೀತಿಯ ...ಯಾಗಿದ್ದರು. ಸಿನಿಮಾ ಮತ್ತು ಪತ್ರಿಕೋದ್ಯಮದ ನಡುವಿನ ...ಡಿಯಂತೆ ದುಡಿಯುತ್ತಾ, ತುಂಬಾ ಸೀರಿಯಸ್ ಆಗಿ ಕಾಣುತ್ತಿದ್ದ ...ಧೀಂದ್ರ ತಮ್ಮ ಹಾಸ್ಯಪ್ರಜ್ಞೆಯಿಂದಲೇ ಹೆಸರಾಗಿದ್ದವರು.

...ಅವರ ಆರೋಗ್ಯಪೂರ್ಣ, ತಿಳಿ ಹಾಸ್ಯದ ಲಹರಿ ಹೇಗಿತ್ತು ...ಬುದರ ಎರಡು ಸಣ್ಣ ಝಲಕ್ ಇಲ್ಲಿದೆ:

...ಅವರ ಅಕ್ಕನ ಮಗಳು ಸುಮಾ ಬಣ್ಣದಲ್ಲಿ ತುಸು ಎಣ್ಣೆಗೆಂಪಿ...ು. ದಿನಕ್ಕೆ ಐದು ಬಾರಿ ಫೇರ್ ಎಂಡ್ ಲವ್ಲಿ ಹಚ್ಚುತ್ತಿದ್ದರು. ...ಧೀಂದ್ರ ಸುಮ್ಮನಿರಬೇಕೋ ಬೇಡವೋ.... "ಉಮಾ, ಒಂದು ...ಸ ಮಾಡು. ಈ ಫೇರ್ ಎಂಡ್ ಲವ್ಲಿ ಕಂಪನಿ ಮೇಲೆ ಕೇಸು ...ಸು. ಅಲ್ಲಾ ಕಣೆ, ಇಲ್ಲಿಯವರೆಗೆ ಎಷ್ಟು ಸಾರಿ ಹಚ್ಚಿಲ್ಲ ನೀನು, ... ಒಂದು ದಿನವಾದ್ರೂ ಬೆಳ್ಳಗೆ ಕಂಡಿದ್ದೀಯಾ. ಬದಲಾಗಿ ...ೀ ಕಪ್ಪಾಯಿತು...." ಎಂದು ತಮಾಷೆ ಮಾಡಿದ್ದರು.

...ತಿರುಪತಿಯಲ್ಲಿ ಕ್ಯೂ ನಿಲ್ಲುವುದು ಭಕ್ತಾದಿಗಳಿಗೆ ಅನಿವಾರ್ಯ. ...ಧೀಂದ್ರ ಕೂಡ ಅದೇ ಸಾಲಿನಲ್ಲಿ ನಿಂತು ಅದೆಷ್ಟೋ ಬಾರಿ ...ಕಟೇಶ್ವರನಿಗೆ ನಮಿಸಿದ್ದಾರೆ. ಅಲ್ಲಿಗೆ ಹೋದಾಗ ಕೆಲವು ಸ್ವಾರಸ್ಯಕರ ...ನೆ ನಡೆದಿತ್ತು...

ಎಲ್ಲ ಸೇರಿ ಗೋವಿಂದಾ ಗೋವಿಂದಾ ಎಂದಾಗ ಅಲ್ಲಿ ಹರ್ಷೋದ್ಗಾರ ಮೊಳಗುತ್ತದೆ. ಸುಧೀಂದ್ರ ಫ್ಯಾಮಿಲಿ ಅದೇ ಸಾಲಿನಲ್ಲಿತ್ತು. ಎದುರಿಗೆ ಒಬ್ಬ ತನ್ನ ಆರು ವರ್ಷದ ಮಗುವನ್ನು ಎತ್ತಿ ಹಿಡಿದು ಗೋವಿಂದಾ ಗೋವಿಂದಾ... ಎನ್ನತೊಡಗಿದ್ದ. ಸುಧೀಂದ್ರ ಹತ್ತು ನಿಮಿಷ ಅದನ್ನೇ ಗಮನಿಸುತ್ತಿದ್ದರು. ಅರ್ಧಗಂಟೆ ತನಕ ಆತ ಅದನ್ನೇ ಮಾಡಿದ. ಕೊನೆಗೆ ಸುಧೀಂದ್ರ ಅವನಿಗೆ ಕೇಳಿಸುವಂತೆ "ಗೋವಿಂದಾ, ಮಗು ನಿಮ್ಮದೇ ಅಂತ ಎಲ್ಲರಿಗೂ ಗೊತ್ತು.... ಅದನ್ನು ಎತ್ತಿ ಎತ್ತಿ ತೋರಿಸಿ, ಕೂಗಿ ಹೇಳುವ ಅವಶ್ಯಕತೆ ಇಲ್ಲ. ಭಗವಂತ ಎಲ್ಲರ ಸ್ವತ್ತು, ಹಿಂದೆ ಇದ್ದವರಿಗೂ ಸ್ವಲ್ಪ ಕಾಣಲಿ. ಸುಮ್ನೆ ಯಾಕೆ ಒದ್ದಾಡ್ತೀರಿ ಗೋವಿಂದಾ... ಕೆಳಗೆ ಇಳಿಸಿ ಸ್ವಲ್ಪ ಸುಧಾರಿಸಿಕೊಳ್ಳಿ ಗೋವಿಂದಾ...." ಎಂದುಬಿಟ್ಟಾಗ ಜತೆಯಲ್ಲಿದ್ದವರೆಲ್ಲಾ ಉಳ್ಳಾಡಿಕೊಂಡು ನಕ್ಕಿದ್ದರಂತೆ.



ಹೀಗೆ ತಮ್ಮ ಸೆನ್ಸ್ ಆಫ್ ಹ್ಯೂಮರ್‌ನಿಂದ ಎದುರಿಗಿದ್ದವರನ್ನು ಸದಾ ನಕ್ಕುನಲಿಯುವಂತೆ ಮಾಡುತ್ತಿದ್ದ ಸುಧೀಂದ್ರರ ಬಗೆಗಿನ ಇಂಥ ಹಲವು ಪ್ರಸಂಗಗಳನ್ನು ಒಳಗೊಂಡ ಮತ್ತು ಸುಧೀಂದ್ರರ ಒಟ್ಟಾರೆ ವ್ಯಕ್ತಿಚಿತ್ರಣವನ್ನು ತೆರೆದಿಡುವ 'ಸುದ್ದಿ ಸೇತು ಸಾಧಕ' ಎಂಬ ಅಪರೂಪದ ಹೊತ್ತಿಗೆಯನ್ನು ರಾಘವೇಂದ್ರ ಚಿತ್ರವಾಣಿಯವರು ಹೊರತಂದಿದ್ದಾರೆ.


ನೀವೂ ಸಾಧ್ಯವಾಗಿಸಿಕೊಂಡು ಓದಿದರೆ ಚೆಂದ. ■

...ಜೂನ್ 9ನೇ ತಾರೀಖು ಸೆನ್ಸಾರ್ ಅಧಿಕಾರಿ ಚಂದ್ರ ಶೇಖರ್ ...ರ ಅಧಿಕಾರಾವಧಿ ಕೊನೆಗೊಳ್ಳುತ್ತಿದೆ. ಈಗಾಗಲೇ ಎರಡೆರಡು ...ು ಅವರ ನಿವೃತ್ತಿಯ ದಿನ ಮುಂದೆ ಹೋಗಿತ್ತು. ಆದರೆ ಈ ...ು ಅವರು ಸೆನ್ಸಾರ್ ಮಂಡಳಿಗೆ ಗುಡ್‌ಬೈ ಹೇಳುವುದು ...ಮ್ಮ.

... ಇವರು ಅಧಿಕಾರಕ್ಕೆ ಬಂದಂದಿನಿಂದ ಕಳೆದ ಐದು ವರ್ಷಗಳಿಂದ ...ರವಾಗಿದ್ದ ತಮ್ಮ 'ಸ್ವಾತಂತ್ರ' ಮತ್ತೆ ದಕ್ಕುತ್ತದೆ ಎನ್ನುವ ಖುಷಿಯಲ್ಲಿ ...ಡ ಚಿತ್ರರಂಗದ ಬಹಳಷ್ಟು ಮಂದಿ ಹಿರಿಹಿರಿ ಹಿಗ್ಗುತ್ತಿದ್ದಾರೆ.

ಸರ್ವಾಧಿಕಾರವೇ?

... ಡಿಫೆನ್ಸ್ ಅಧಿಕಾರಿಯಾಗಿದ್ದ ಚಂದ್ರಶೇಖರ್ ಸೆನ್ಸಾರ್ ...ಡಳಿಯ ಚೇರ್‌ಮನ್ ಆಗಿ ಒಂದಷ್ಟು ಜನ ನಿರ್ದೇಶಕರು ...ತ್ತು ನಿರ್ಮಾಪಕರನ್ನು ಅಕ್ಷರಶಃ ಬೇತಾಳದಂತೆ ...ಡದ್ದಾರೆ. ಅವರ ಈ ವರ್ತನೆ ...ಮ್ಮೊಮ್ಮೆ ಸರ್ವಾಧಿಕಾರದಂತೆ, ...ಶಿಸ್ತಿನಂತೆ ಕಂಡಿರುವುದು ... ಆದರೆ ಚಂದ್ರಶೇಖರ್ ...ವಾಗಲೂ ...ರಂಗದವರಿಗೆ ಕಾಟ ...ಟ್ಟರಾ ಎಂದು ...ಡಬೇಕಿದೆ.



ಯಾವ ತಪ್ಪನ್ನೂ ಮಾಡಿಲ್ಲ ಎಂದೇನೂ ಅಲ್ಲ, 'ಮೊಗ್ಗಿನ ಮನಸು'ನಂಥ ನಿಷ್ಕಲ್ಮಶ ಚಿತ್ರಕ್ಕೂ 'ಎ' ಸರ್ಟಿಫಿಕೇಟ್ ನೀಡಿ ತಕರಾರು ಮಾಡಿದ್ದು ನಿಜ. ಕರ್ನಾಟಕದಲ್ಲಿ ನಕ್ಸಲರದ್ದು ನಿಷೇಧಿತ ಸಂಘಟನೆ ಎಂಬ ಕಾರಣಕ್ಕೆ ನಕ್ಸಲಿಸಂ ಅನ್ನೇ ಮೂಲವಾಗಿರಿಸಿಕೊಂಡು ಬಂದ 'ಒಂದು ಪ್ರೀತಿಯ ಕತೆ' ಎಂಬ ಚಿತ್ರದಲ್ಲಿ 'ನಕ್ಸಲ್' ಎಂಬ ಪದವನ್ನೇ ನಿರ್ಬಂಧಿಸಿ ಸಿನಿಮಾದ ಮೂಲ ಆಶಯಕ್ಕೆ ಪೆಟ್ಟು ಕೊಟ್ಟಿದ್ದರು. ಇಂಥ ಕೆಲವು ಎಡವಟ್ಟುಗಳನ್ನು ಹೊರತುಪಡಿಸಿದರೆ ಚಂದ್ರಶೇಖರ್‌ರಿಂದ ಆಗಬಾರದಂಥ ನಷ್ಟವೇನೂ ಆಗಿಲ್ಲ.

ಏನೇ ಆಗಲಿ ಐದು ವರ್ಷಗಳ ಅಧಿಕಾರಾವಧಿಯಲ್ಲಿ ಈ ಹಿಂದೆ ಯಾರೂ ಮಾಡದಷ್ಟು ಹೆಸರು ಮಾಡಿದ ಹಾಗೂ ಇಷ್ಟು ದಿನದ ಸರ್ವೀಸ್‌ನಲ್ಲಿ ನಿರಂತರ ವಿವಾದಗಳನ್ನೇ ಮೈಮೇಲೆಳೆದುಕೊಂಡಿದ್ದ ಚಂದ್ರಶೇಖರ್ ಎಂಬ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಗೆ ಪ್ರೀತಿಯಿಂದ ಗುಡ್‌ಬೈ ಹೇಳೋಣ!

ಸೆನ್ಸಾರ್ ಚಂದ್ರಶೇಖರ್‌ಗೆ ಗುಡ್ ಬೈ

...ರೆಯ ತಮಿಳು, ತೆಲುಗು ಮತ್ತು ಹಿಂದಿ ಚಿತ್ರರಂಗಕ್ಕೆ ಹೋಲಿಸಿ ಅವೆಲ್ಲಕ್ಕಿಂತ ಹತ್ತು ಪಟ್ಟು ಹೆಚ್ಚು ಹೆಚ್ಚು ಕ್ರೈಂ ಆಧಾರಿತ ...ಮಾಗಳು ಕನ್ನಡದಲ್ಲಿ ಮೂಡಿಬಂದಿವೆ. ಆ ಕತ್ತಿ-ಲಾಂಗುಗಳ ...ವೀಕರಣ ಮತ್ತು ರಕ್ತದೋಕುಳಿಯ ಚಿತ್ರಗಳನ್ನು ನೋಡಿದ ...ಳ, ಜನರ ಮನಸ್ಥಿತಿಯಾದರೂ ಏನಾಗಬೇಡ? ಈ ಕಾರಣಕ್ಕೇ ...ರಡು ವರ್ಷಗಳಲ್ಲಿ ಬಹುತೇಕ ರೌಡಿಸಂ ಸಿನಿಮಾಗಳಿಗೆ ಸೆನ್ಸಾರ್ ಸರ್ಟಿಫಿಕೇಟ್ ನೀಡಿದ್ದರು ಚಂದ್ರಶೇಖರ್.

...ಆದರೆ ಕುಣಿಯಲಾರದವ ನೆಲ ಡೊಂಕು ಎಂದಂತೆ ಜನ ...ಡುವ ಸದಭಿರುಚಿಯ ಸಿನಿಮಾಗಳನ್ನು ಮಾಡಲಾಗದ ಕೆಲವರು ...ಶೇಖರ್ ಅವರೇ ತಮ್ಮ ಚಿತ್ರಗಳ ಸೋಲಿಗೆ ಕಾರಣ ಎಂದು ...ದ್ದರು. ಸೆನ್ಸಾರ್ ಸಮಸ್ಯೆಗೆ ಸಿಲುಕಿದ ಚಿತ್ರಗಳಾದರೂ ಎಂಥವು ...ಸು ಒಮ್ಮೆ ನೋಡಿದರೆ ಕಾಣಸಿಗುವುದು 'ಗಂಡ ಹೆಂಡತಿ', ..., 'ಮಾದೇಶ', 'ಗುಣ', 'ಜಿಂದಗಿ', 'ಪಟ್ರೆ ಲವ್ಸ್ ಪದ್ಮ', ...', 'ಮಹರ್ಷಿ', 'ಹ್ಯಾಟ್ರಿಕ್ ಹೊಡಿಮಗ'ದಂಥ ಭಯಾನಕ ...ಮಾಗಳೇ. ಇಂಥ ಚಿತ್ರಗಳನ್ನು ಪ್ರೇಕ್ಷಕರೇ ಸಾರಾಸಗಟಾಗಿ ತಿರಸ್ಕರಿಸಿ ... ನೀಡಿದ್ದಾರೆ. ಹೀಗಿರುವಾಗ ಸಿನಿಮಾದವರ ತಪ್ಪಿನಿಂದ ... ಆಷ್ಟೂ ನಷ್ಟವನ್ನು ಚಂದ್ರಶೇಖರ್ ತಲೆಗೆ ಕಟ್ಟಿ, 'ಚಿತ್ರರಂಗದ ...ೀಗತಿಗೆ ಇವರೇ ಕಾರಣ' ಎಂದರೆ ಯಾವ ನ್ಯಾಯ?

...ವಾಗೆಂದು ಸೆನ್ಸಾರ್ ಮಂಡಳಿ ಮತ್ತವರ ಮುಖ್ಯಸ್ಥ ಚಂದ್ರಶೇಖರ್

ಸಿನಿಮಾ ಜ್ಞಾನವಿರುವವರು ಬರಲಿ!

ಸೆನ್ಸಾರ್ ಅಧಿಕಾರಿ ಚಂದ್ರಶೇಖರ್ ಡಿಫೆನ್ಸ್‌ನಲ್ಲಿದ್ದು ಬಂದವರಾಗಿದ್ದರಿಂದ ಅವರಿಗೆ 'ಸಿನಿಮಾದ ಗಂಧಗಾಳಿಯೇ ಗೊತ್ತಿಲ್ಲ' ಎಂಬುದೇ ಅವರೆಡೆಗಿನ ದೊಡ್ಡ ಆರೋಪವಾಗಿತ್ತು. ಹೀಗಾಗಿ ಸಿನಿಮಾ ರಂಗವನ್ನು ಹತ್ತಿರದಿಂದ ಬಲ್ಲ, ಹಾಗೂ ತೀರಾ ನಿರ್ಮಾಪಕರಿಂದ ಎತ್ತುವಳಿ ಮಾಡದಂಥ ಪ್ರಾಮಾಣಿಕರನ್ನು ನೇಮಿಸಬೇಕಾದ ಹೊಣೆ ಕೇಂದ್ರ ಸರ್ಕಾರದ ಮೇಲಿದೆ.




ಬಾಲಿವುಡ್‌ನಲ್ಲಿ ಈ ಹಿಂದೆ ಸಿನಿಮಾದವರೇ ಆದ ನಿರ್ದೇಶಕ ಅನುಪಮ್ ಖೇರ್, ಬಾಲಿವುಡ್‌ನಲ್ಲೇ ಪ್ರಪ್ರಥಮವಾಗಿ ಬಿಕಿನಿ ತೊಟ್ಟು ಖ್ಯಾತಿ ಪಡೆದಿದ್ದ ನಟಿ ಶರ್ಮಿಳಾ ಟಾಗೂರ್‌ರಂಥವರು ಸೆನ್ಸಾರ್ ಅಧ್ಯಕ್ಷರಾಗಿದ್ದರು. ಹೀಗೆ ಸಿನಿಮಾದ ಗ್ಲಾಮರು, ಗ್ರಾಮರು ಗೊತ್ತಿರುವವರೇ ಸೆನ್ಸಾರ್ ಮಂಡಳಿಯ ಅಧ್ಯಕ್ಷಗಿರಿ ಪಡೆದರೆ ಕೊಂಚ ಮಟ್ಟಿಗಾದರೂ ಜಗಳಗಳನ್ನು ತಡೆಗಟ್ಟಬಹುದು.

● ಅರುಣ್.ಜಿ

ಸುರೇಶ್ ಅರಸ್ ಪೆರೋಲ್!

ಅರುಣ್ ಸಿನಿ Bits



ಹಲವಾರು ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳನ್ನು ಪಡೆದಿರುವ ಭಾರತದ ಖ್ಯಾತ ಸಂಕಲನಕಾರ ಸುರೇಶ್ ಅರಸ್ ಈಗ ನಿರ್ಮಾಪಕರಾಗಿದ್ದಾರೆ. ಇಡೀ ದೇಶದಲ್ಲೇ ಹೆಸರು ಮಾಡಿರುವ ಸುರೇಶ್ ಅರಸ್ ತಮ್ಮ ನಿರ್ಮಾಣದ ಚಿತ್ರಗಳನ್ನು ಕನ್ನಡದಲ್ಲೇ ಮಾಡಲು ಉದ್ದೇಶಿಸಿರುವುದು ಒಳ್ಳೆಯ ಬೆಳವಣಿಗೆ.

ಈ ವರ್ಷ ಒಂದಾದ ಮೇಲೊಂದು ಮೂರು ಚಿತ್ರಗಳನ್ನು ನಿರ್ಮಿಸಲು ಉದ್ದೇಶಿಸಿರುವ ಸುರೇಶ್ ಅರಸ್ ಮೊದಲಿಗೆ 'ಪೆರೋಲ್' ಎಂಬ ಚಿತ್ರವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅಲ್ಲದೇ ತಮ್ಮ ನಿರ್ಮಾಣದ ಚಿತ್ರದಲ್ಲಿ ಬಹುತೇಕ ಹೊಸಬರಿಗೇ ಆದ್ಯತೆ ನೀಡಿರುವ ಸುರೇಶ ಅವರ ನಿರ್ಧಾರವನ್ನು ಮೆಚ್ಚಬೇಕು.

ಪ್ರೀತ್ಸೆ ಪಾರು...!

'ರಾಜ್' ಚಿತ್ರದ 'ಹೇ ಪಾರು... ಪ್ರೀತ್ಸೆ ಪಾರು' ಹಾಡಂತೂ ಪಡ್ಡೆ ಪೋರ್ಕಿಗಳ ಬಾಯಲ್ಲಿ ರಾಷ್ಟ್ರಗೀತೆಯಂತೆ ಈಗ ಮೊಳಗುತ್ತಿದೆ.

ಇಷ್ಟೇ ಆಗಿದ್ದರೆ ಪರವಾಗಿಲ್ಲ, ನಮ್ಮ ಚಿತ್ರರಂಗದವರು ಎಷ್ಟು ಫಾಸ್ಟ್ ಆಗಿದ್ದಾರೆ ಎಂದರೆ, 'ಪ್ರೀತ್ಸೆ ಪಾರು' ಎಂಬ ಹಾಡಿನ ಸಾಲು ಈಗ ಸಿನಿಮಾ ಆಗಿ ಸೆಟ್ಟೇರುತ್ತಿದೆ. 'ತಾಜ್‌ಮಹಲ್', 'ಪ್ರೇಂ ಕಹಾನಿ' ಚಿತ್ರಗಳಿಗೆ ಸಹ ನಿರ್ದೇಶಕನಾಗಿ ದುಡಿದಿದ್ದ ಶಿವಮೂರ್ತಿ ಎಂಬ ಯುವಕ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಜೂನ್ ತಿಂಗಳ ಆರಂಭದಲ್ಲಿ ಸೆಟ್ಟೇರುವ ಈ ಚಿತ್ರದ ನಾಯಕ ನಾಯಕಿ ಇನ್ನೂ ನಿಕ್ಕಿ ಆಗಿಲ್ಲ.

'ರಾಜ್' ಬಿಡುಗಡೆಗೆ ಮುನ್ನವೇ ಅದರ ಹಾಡಿನ ಸಾಲು ಹೊಸ ಚಿತ್ರವೊಂದರ ಶೀರ್ಷಿಕೆಯಾಗಿರುವುದರಿಂದ ನಿರ್ದೇಶಕ ಪ್ರೇಮ್‌ಗೆ ಖುಷಿಯೊಂದಿಗೆ ದಿಗ್ಭ್ರಾಂತಿಯೂ ಆಗಿದೆಯಂತೆ!!

ಸಂಜನಾಳ ಶ್ಲೋಕ



ರವಿ ಶ್ರೀವತ್ಸ ನಿರ್ದೇಶನದ 'ಗಂಡಹೆಂಡತಿ' ಚಿತ್ರದಲ್ಲಿ ಅಪ್ಪ ಅಮ್ಮ ಆಟವಾಡಿ ವಿಮರ್ಶಕರ ಕೆಂಗಣ್ಣಿಗೆ ಗುರಿಯಾದ ನಂತರ ಚಿತ್ರರಂಗದಿಂದ ದೂರವೇ ಉಳಿದಿದ್ದ ನಾಯಕಿ ಸಂಜನಾ ಈಗ ಮತ್ತೆ ಬಂದಿದ್ದಾಳೆ.


ಸಂಜನಾ ಈ ಬಾರಿ ಯಾವುದೇ ವಿವಾದಗಳಿಗೆ ಕಾರಣವಾಗಬಾರದು ಎಂದು 'ಶ್ಲೋಕ' ಹೇಳುತ್ತಿದ್ದಾಳೆ. ಅಂದರೆ, ಸಂಜನಾ ಈಗ ನಾಯಕಿಯಾಗಿರುವ ಚಿತ್ರದ ಹೆಸರು 'ಶ್ಲೋಕ'ವಂತೆ. ಹೀಗಾಗಿ ಶ್ಲೋಕ ಸಂಜನಾಳ ಪಾಲಿಗೆ ಶೋಕವಾಗದಿರಲಿ ಎಂದಷ್ಟೇ ನಾವು ಹಾರೈಸಬಹುದು.

ಪ್ರೇಮ್‌ನ ಕಾಗೆಯೂ ಸುರೇಶ್ ತಲೆಮೇಲಿನ ಹಿಕ್ಕೆಯೂ!

ಬಿಡಬಡಬಡಬಡಾ ಅಂತಾ ಹಳೇಮಾಡಲ್ ರಾಜ್‌ದೂತ ಬೈಕು ಓಡಿಸಿದಂತೆ ಮಾತನಾಡುವ ನಿರ್ಮಾಪಕ ಎನ್.ಎಂ. ಸುರೇಶ್ ತಲೆ ಮೇಲೆ ನಮ್ಮ ಪುಂಗೀರಾಜ ಪ್ರೇಮ್ ಹಾರಿಬಿಟ್ಟ ಕಾಗೆ ಸರ್ರನೆ ಬಂದು ಹಿಕ್ಕೆ ಹಾಕಿಬಿಟ್ಟಿದೆ!

ಅಚಚಚ ಅಂತಾ ಮುಖ ಕಿವುಚಬೇಡಿ!

ಅದನ್ನೇ ಮಂತ್ರಾಕ್ಷತೆಯ ಥರಾ ತಲೆಗೆಲ್ಲಾ ಸವರಿಕೊಂಡ ಸುರೇಶ್ ಪಾವನರಾದವರಂತೆ 'ಪ್ರೇಮ್ ಮಂತ್ರ' ಜಪಿಸುತ್ತಾ ಡುಂಕಟಕಾ ಡುಂಕಟಕಾ... ಎಂದು ಕುಣಿದಾಡುತ್ತಾ ತಿರುಗಾಡುತ್ತಿದ್ದಾರೆ.



ನಡೆದದ್ದಿಷ್ಟು:

ಮೊನ್ನೆ ಸುರೇಶ್ ಪ್ರೇಮ್‌ನನ್ನು ಭೇಟಿ ಮಾಡಲು ಆತನಲ್ಲಿಗೆ ಹೋಗಿದ್ದಾರೆ. ಸುರೇಶರನ್ನು ಎದುರಿಗೆ ಕೂರಿಸಿಕೊಂಡ ಪ್ರೇಮ್ "ಹಲೋ... ನಮಸ್ಕಾರ ಎಡೂರಪ್ಪಾಜೀ.... ನಮ್ಮನಿತಕ್ಕೆ ಯಾವಾಗ್ ಬರ್ತೀರಾ?!", "ಹೆಂಗಿದ್ದೀರಾ ರಜನೀ ಸಾರ್, ಸೊ... ನೀವ್ ಯಾವಾಗ ಅಂದ್ರೆ ಅವಾಗ ಸೂಟಿಂಗ್ ಶುರು ಮಾಡನಾ. ಸ್ವಿಷ್ಟು ಸಖತ್ತಾಗ್ ಮಾಡಪ್ಪಿ... ಮಿಕ್ಕಿದ್ದೆಲ್ಲಾ ನಾನೇ ಚೆನ್ನೈಗೆ ಬಂದ್ ಹೇಳ್ತೀನಿ..." ಈ ರೀತ್ಯಾ ಒಂದೇ ಸಮನೆ ಮಾತಾಡುತ್ತಿದ್ದರೆ, ಎದುರಿಗೇ ಕುಳಿತಿದ್ದ ಸುರೇಶರ ಕಣ್ಣಲ್ಲಿ ಆನಂದಭಾಷ್ಪ!

'ಎಕ್ಸ್‌ಕ್ಯೂಸ್ ಮಿ' ಚಿತ್ರದ ಮೂಲಕ ತಾನೇ ಅವಕಾಶ ಕೊಟ್ಟು ಬೆಳೆಸಿದ ಹುಡುಗಾ... ಯಡಿಯೂರಪ್ಪ, ರಜನಿಕಾಂತ್‌ರೊಂದಿಗೆಲ್ಲಾ ಇಷ್ಟೊಂದು ಕ್ಲೋಸು... ಯಾ ಪಾಟ ಹೆಸ್ರು ಮಾಡವ್ನೆ... ಎಂದು ಅವರ ಕಣ್ಣನ್ನು ಅವರೇ ನಂಬದಂತೆ ಕುಳಿತುಬಿಟ್ಟಿದ್ದಾರೆ.



ನಂತರ ಸಾವರಿಸಿಕೊಂಡು 'ನನಗೊಂದು ಚಿತ್ರ ಮಾಡಿಕೊಡು' ಎಂದು ವಿನಂತಿಸಿಕೊಂಡಿದ್ದಾರೆ. ಎದುರಿಗಿದ್ದವರ ಮುಂದೆ ಸಿಕ್ಕಾಪಟ್ಟೆ ಬಿಲ್ಡಪ್ ಕೊಟ್ಟು ತನ್ನ ಹವಾ ಹೆಚ್ಚಿಸಿಕೊಳ್ಳುವುದು ಪ್ರೇಮ್‌ನ ನೇಚರು. ಸದ್ಯಕ್ಕೆ 'ರಾಜ್' ಚಿತ್ರವನ್ನೂ ತನ್ನ ಹಿಂದಿನ 'ಪ್ರೀತಿಭೂಮಿ' ಚಿತ್ರದ ಹಾಗೇ ಚೂಯಿಂಗ್‌ಗಮ್‌ನಂತೆ ಎಳೆಯುತ್ತಾ ವರ್ಷ ಮುಗಿದರೂ ಶೂಟಿಂಗ್ ಮುಗಿಸದಿರುವುದರಿಂದ ಕನ್ನಡದ ಯಾವ ನಿರ್ಮಾಪಕರೂ ಪ್ರೇಮ್ ಬಳಿ ಸುಳಿಯುವ ಧೈರ್ಯ ಮಾಡುತ್ತಿಲ್ಲ.

ಇಂಥ ಪರಿಸ್ಥಿತಿಯಲ್ಲಿ ಸುರೇಶರನ್ನು ಮೆಚ್ಚಿಸಿ, ಅವರನ್ನು ಅಟ್ಟ ಹತ್ತಿಸುವ ಉದ್ದೇಶದಿಂದ ಪ್ರೇಮ್ ಪುಂಖಾನುಪುಂಖವಾಗಿ ಬೂಸಿ ಬಿಟ್ಟು, ಕಡೆಗೆ 'ಮುಂದಿನ ಸಿನಿಮಾ ನಿಮಗೇ ಮಾಡ್ಕೊಡ್ತೀನಣ್ಣ' ಎಂದು ಹೇಳಿ ಸುರೇಶರ ತುಂಬುಕೂದಲ ತಲೆಯಲ್ಲೊಮ್ಮೆ ಬೆರಳಾಡಿಸಿ, ಸೈಸಾಗಿ ನೀವಿ ಕಳಿಸಿದ್ದಾನೆ!! ■

‘ಜೊತೆಗಾರ’ರ ಜಟಾಪಟಿ

ಅಶ್ವಿನಿ ರಾಂಪ್ರಸಾದ್ ನಿರ್ಮಾಣದ ‘ಜೊತೆಗಾರ’ ಚಿತ್ರತಂಡ ಆರಂಭದಿಂದಲೂ ವಿವಾದ ಮತ್ತು ಅನಗತ್ಯ ಸುದ್ದಿಯ ಕೇಂದ್ರಬಿಂದುವಾಗಿತ್ತು.



ನಾಯಕ ಪ್ರೇಮ್ ಮತ್ತು ನಾಯಕಿ ರಮ್ಯಾ ‘ಜೊತೆಜೊತೆಯಲಿ’ ಚಿತ್ರದ ನಂತರ ಈ ಚಿತ್ರಕ್ಕೆ ಆಯ್ಕೆಯಾದಾಗ ಇಡೀ ಗಾಂಧಿನಗರ ಆಶ್ಚರ್ಯ ವ್ಯಕ್ತಪಡಿಸಿತ್ತು. ಯಾಕೆಂದರೆ ಅವರಿಬ್ಬರ ನಡುವಿನ ಕೆಮಿಸ್ಟ್ರಿ ಆಗಲೇ ಎಕ್ಕುಟ್ಟಿ ಹೋಗಿತ್ತು.

‘ಪ್ರೀತಿ ಏಕೆ ಭೂಮಿ ಮೇಲಿದೆ’ ಚಿತ್ರ ಬಾಕ್ಸಾಫೀಸ್‌ನಲ್ಲಿ ಮುಗ್ಗರಿಸಿದ ನಂತರ ನಿರ್ಮಾಪಕ ಅಶ್ವಿನಿ ರಾಮಪ್ರಸಾದ್ ವರ್ಚಸ್ಸು ಕೂಡಾ ಬಿದ್ದುಹೋಗಿತ್ತು. ಹೀಗಾಗಿ ಮತ್ತೆ ಎದ್ದು ನಿಲ್ಲಲು ರಾಮಪ್ರಸಾದ್‌ಗೆ ಅನೇಕ ವರ್ಷಗಳೇ ಬೇಕಾಗಬಹುದು ಎಂದು ಗಾಂಧಿನಗರಿಗಳು ಲೇವಡಿ ಮಾಡಿದ್ದರು. ಅವರ ಲೇವಡಿ-ಕುಹಕಗಳನ್ನೆಲ್ಲಾ ಸಹಿಸಿಕೊಂಡ ರಾಮಪ್ರಸಾದ್ ಎಲ್ಲರೂ ಬೆಚ್ಚಿಬೀಳುವಂತೆ ‘ಜೊತೆಗಾರ’ ಚಿತ್ರವನ್ನು ಕೈಗೆತ್ತಿಕೊಂಡರು.

‘ಜೊತೆಗಾರ’ ಚಿತ್ರದ ಮೊದಲ ಪತ್ರಿಕಾಗೋಷ್ಠಿಯೇ ವಿವಾದಾತ್ಮಕವಾಗಿ ಆರಂಭವಾಗಿತ್ತು. ಆಗಷ್ಟೆ ಚೇಂಬರ್ ಮತ್ತು ನಿರ್ಮಾಪಕರ ಸಂಘ ಏಳು ಗಂಟೆ ನಂತರ ಯಾವುದೇ ಪತ್ರಿಕಾಗೋಷ್ಠಿ ನಡೆಸಬಾರದೆಂದು ಹೊಸ ಕಾನೂನನ್ನು ಹೊರಡಿಸಿದ್ದವು. ಆದರೆ “ನನಗೆ ಪತ್ರಕರ್ತರು ಮುಖ್ಯ ಚೇಂಬರ್ ಅಲ್ಲ” ಎಂದು ಗುಡುಗಿದ ರಾಮಪ್ರಸಾದ್ ಪತ್ರಿಕಾ ಗೋಷ್ಠಿಯನ್ನು ಸಂಜೆ ಏಳು ಗಂಟೆಗೆ ನಿಗದಿಪಡಿಸಿದ್ದರು. ಕೊನೆಗೆ ಯಾರದ್ದೋ ಒತ್ತಡಕ್ಕೆ ಮಣಿದ ರಾಮಪ್ರಸಾದ್ ಮಧ್ಯಾಹ್ನವೇ ಪತ್ರಿಕಾಗೋಷ್ಠಿ ಕರೆದರು. ಪ್ರಸಾದ್‌ರ ಈ ಇಬ್ಬಂದಿತನವನ್ನು ವಿರೋಧಿಸಿ ಪತ್ರಕರ್ತರೆಲ್ಲಾ ಅಂದಿನ ಗೋಷ್ಠಿಯನ್ನು ಬಹಿಷ್ಕರಿಸಿದ್ದರು.



ಇಷ್ಟೆಲ್ಲಾ ಆದ ನಂತರ ‘ಜೊತೆಗಾರ’ ಚಿತ್ರದ ಕೆಲಸ ಸುಸೂತ್ರವಾಗಿಯೇ ನಡೆಯುತ್ತಿದ್ದಾಗ ಚಿತ್ರದ ಐಟಂ ಸಾಂಗ್ ಒಂದರಲ್ಲಿ ‘ಜೋಗಿ’ಯಲ್ಲಿ ಕುಣಿದಿದ್ದ ಹಿಂದಿಯ ಬೆಡಗಿ ಯಾನಾಗುಪ್ತ ನಟಿಸಲಿದ್ದಾಳೆ ಎಂದು ರಾಮಪ್ರಸಾದ್ ಪ್ರಚಾರ ಮಾಡಿದ್ದರು. ಹಾಗಂತ ನಾಯಕ ಪ್ರೇಮ್‌ಗೂ ಹೇಳಿದ್ದರು. ಅದನ್ನು ಕೇಳಿ ರೋಮಾಂಚನಗೊಂಡ ಪ್ರೇಮ್ ಆ ನೃತ್ಯಕ್ಕಾಗಿ ಎದುರು ನೋಡುತ್ತಿದ್ದರು. ಆದರೆ ಕುಟುಂಬದ ಸದಸ್ಯರೆಲ್ಲ ಈ ಚಿತ್ರ ನೋಡಲು ಆ ಹಾಡು ಅಡ್ಡಿ ಮಾಡುತ್ತದೆ ಎಂಬ ಕುಂಟು ನೆಪವನ್ನು ಮುಂದಿಟ್ಟು ರಾಮಪ್ರಸಾದ್ ಆ ಹಾಡಿನ ಚಿತ್ರೀಕರಣವನ್ನೇ ರದ್ದುಪಡಿಸಿದ್ದರು. ಆ ಸುದ್ದಿ ಗೊತ್ತಾದ ತಕ್ಷಣ ನಾಯಕ ಪ್ರೇಮ್ ಕೆಂಡಮಂಡಲವಾದರು.

ಈ ಚಿತ್ರದಲ್ಲಿ ಯಾನಾಳ ಐಟಂ ಸಾಂಗನ್ನು ಸೇರಿಸಲೇಬೇಕು ಎಂದು ಆಕೆಯ ಅಭಿಮಾನಿಯ ತರಹ ಪ್ರೇಮ್ ಪಟ್ಟು ಹಿಡಿದರು. ಈ ಬಗ್ಗೆ ಪತ್ರಿಕೆಗಳಿಗೆ ಹೇಳಿಕೆಗಳನ್ನೂ ಕೊಟ್ಟರು. “ಚಿತ್ರದಲ್ಲಿ ಆ ಐಟಂಸಾಂಗ್‌ಗೆ ಮಹತ್ವವಿದೆ. ಅದು ಚಿತ್ರದ ಕಥೆಗೆ ಪೂರಕವಾಗಿದೆ. ಹೀಗಾಗಿ ಅದು ಬೇಕು ಎಂಬುದು ನನ್ನ ವಾದ. ಅಲ್ಲದಿದ್ದರೆ ಕಥೆ ಹೇಳುವಾಗ ಇದನ್ನೆಲ್ಲಾ ಯಾಕೆ ಹೇಳಬೇಕಾಗಿತ್ತು? ಈಗ ಹಣ ಉಳಿಸುವ ಏಕೈಕ ಉದ್ದೇಶದಿಂದ ನಿರ್ಮಾಪಕ ಅದನ್ನು ಕೈಬಿಟ್ಟಿದ್ದಾರೆ. ಹೀಗೆ ಮಾಡುವುದರಿಂದ ಚಿತ್ರ ಸಪ್ಪೆಯಾಗುತ್ತದೆ” ಎಂದು ಪ್ರೇಮ್ ವಾದಿಸಿದ್ದರು. ಒಂದು ವೇಳೆ ಯಾನಾಳ ಐಟಂಸಾಂಗನ್ನು ಸೇರಿಸದೇ ಇದ್ದಲ್ಲಿ ಈ ಚಿತ್ರದ ಪ್ರಚಾರಕ್ಕೆ ಸಂಬಂಧಪಟ್ಟ ಪತ್ರಿಕಾಗೋಷ್ಠಿ ಮತ್ತು ಇನ್ನಿತರ ಕಾರ್ಯಕ್ರಮಗಳಿಗೆ ತಾನು ಹೋಗುವುದಿಲ್ಲವೆಂದು ತನ್ನ ಪ್ರತಿಭಟನೆಯನ್ನು ಕೂಡಾ ಘೋಷಿಸಿದ್ದರು. ಯಾನಾಗುಪ್ತಳ ವಿಷಯದಲ್ಲಿ ನಾಯಕ ಪ್ರೇಮ್-ನಿರ್ಮಾಪಕ ರಾಮ್ ನಡುವೆ ಎರಡು ಮೂರು ಸುತ್ತಿನ ಗಲಾಟೆಯೂ ನಡೆಯಿತು. ಕೊನೆಗೂ ರಾಮಪ್ರಸಾದ ಹಟ ಹಿಡಿದು “ಯಾನಾಗುಪ್ತ ಬೇಡ” ಅಂದರು. ಅದಕ್ಕೆ ಪ್ರೇಮ್ “ಯಾನಾ ಬೇಡವಾದರೆ ನಾನೂ ಬೇಡಾಂತ ಅಂತಿಟ್ಟುಕೊಳ್ಳಿ” ಎಂದು ರಾಮಪ್ರಸಾದ ಜೊತೆ ಟೂಬಿಟ್ಟರು. ಕನ್ನಡದ ನಾಯಕ ನಟನೊಬ್ಬ ಓರ್ವ ಐಟಂ ಹುಡುಗಿಯ ಬಗ್ಗೆ ಇಷ್ಟೊಂದು ಅಭಿಮಾನ ವ್ಯಕ್ತಪಡಿಸಿದ್ದನ್ನು ನೋಡಿ ಗಾಂಧಿನಗರದ ಜನ ಹೆಮ್ಮೆ ಮಿಶ್ರಿತ ವ್ಯಂಗ್ಯದಿಂದ ಗಹಗಹಿಸಿ ನಕ್ಕರು.

ಯಾನಾಗುಪ್ತಳ ವಿವಾದದ ಬೆನ್ನಲ್ಲೇ ಪ್ರೇಮ್ ರಾಮ್ ವಿರುದ್ಧ ಇನ್ನೊಂದು ಬಾಂಬ್ ಸಿಡಿಸಿದ್ದರು. ಅದೇನೆಂದರೆ ರಾಮ್ ತನಗೆ ನಿಗದಿಗೊಳಿಸಿದ ಸಂಭಾವನೆಯನ್ನು ಪೂರ್ತಿಯಾಗಿ ನೀಡದೆ ಸತಾಯಿಸುತ್ತಿದ್ದಾರೆ ಎಂಬುದು.


ಈಗ ಈ ಚಿತ್ರ ಬಿಡುಗಡೆಗೆ ರೆಡಿಯಾಗಿದೆ. ರಾಮ್-ಪ್ರೇಮ್ ನಡುವಿನ ವಿವಾದಕ್ಕೆ ಅಂತಿಮ ತೆರೆ ಎಳೆಯಲು ನಾಯಕಿ ರಮ್ಯಾಳ ಮಧ್ಯಸ್ಥಿಕೆ ಮತ್ತು ಸಲಹೆ ಮೇರೆಗೆ ಮೊನ್ನೆ ಪತ್ರಿಕಾಗೋಷ್ಠಿ ಏರ್ಪಡಿಸಲಾಗಿತ್ತು. ನಾಯಕ ಪ್ರೇಮ್ ಮತ್ತು ನಾಯಕಿ ರಮ್ಯಾ ಜೊತೆಯಾಗಿಯೇ ಈ ಗೋಷ್ಠಿಗೆ ಬರುತ್ತಾರೆಂದೇ ರಾಮಪ್ರಸಾದ್ ಆಹ್ವಾನ ಪತ್ರಿಕೆಯಲ್ಲಿ ನಮೂದಿಸಿದ್ದರು.

ಆದರೆ ಅಂದು ಪತ್ರಿಕಾಗೋಷ್ಠಿ ಆರಂಭವಾದಾಗ ಪ್ರೇಮ್ ಮತ್ತು ರಾಮ್ ಇಬ್ಬರು ಮಾತ್ರ ಇದ್ದರು. ನಾಯಕಿ ರಮ್ಯಾ ಕೆಲವೇ ಸಮಯದಲ್ಲಿ ಬಂದು ಗೋಷ್ಠಿಗೆ ಸೇರಿಕೊಳ್ಳುತ್ತಾರೆ ಎಂದು ಹೇಳಿದರಾದರೂ ಸುಮಾರು ಒಂದು ಗಂಟೆಯ ನಂತರ ರಮ್ಯಾಳ ಆಗಮನವಾಯಿತು.

ಆಕೆ ಮಾತಿಗಿಳಿದಾಗ ಮೊದಲು ಒಂದು ಗಂಟೆ ತಡವಾಗಿದ್ದಕ್ಕೆ ಕ್ಷಮೆ ಕೇಳಬೇಕು ಎಂದು ಪತ್ರಕರ್ತರು ಒತ್ತಾಯಿಸಿದರು. ಅಷ್ಟಕ್ಕೆ ರಮ್ಯಾ ದೊಡ್ಡ ರಂಪವನ್ನೇ ಮಾಡಿದಳು. “ನಾನೇನೂ ನಿಮ್ಮನ್ನು ಕರೆದಿಲ್ಲ; ನೀವು ಯಾರೂ ನನಗಾಗಿ ಕಾಯಬೇಕಾದ ಅಗತ್ಯವೂ ಇಲ್ಲ, ಇಷ್ಟವಿಲ್ಲದಿದ್ದರೆ ನೀವು ಹೊರಗೆ ಹೋಗಬಹುದು, ನನ್ನನ್ನು ಇಲ್ಲಿ ನಿರ್ಮಾಪಕರು ಊಟಕ್ಕೆ ಕರೆದಿದ್ದಾರೆ, ಅದಕ್ಕೆ ಬಂದಿದ್ದೇನೆ” ಎಂದು ರಮ್ಯಾ ವಾದಿಸಿದಳು. ಆಗ ಪತ್ರಕರ್ತರು ಮತ್ತು ರಮ್ಯಾಳ ನಡುವೆ ವಾಗ್ವಾದ ನಡೆದು ಕೊನೆಗೆ ಪತ್ರಕರ್ತರೆಲ್ಲಾ (ಒಂದಿಬ್ಬರು ಹಳಬರನ್ನು ಹೊರತುಪಡಿಸಿ) ಗೋಷ್ಠಿಯನ್ನು ಬಹಿಷ್ಕರಿಸಿದರು.

ಅಲ್ಲಿಗೆ ‘ಜೊತೆಗಾರ’ ಚಿತ್ರದ ಕೊನೆಯ ಪತ್ರಿಕಾಗೋಷ್ಠಿ ಕೂಡಾ ಮೊದಲ ಪತ್ರಿಕಾ ಗೋಷ್ಠಿಯಂತೆ ಗೊಂದಲ, ವಿವಾದ, ಬಹಿಷ್ಕಾರದಲ್ಲಿ ಮುಕ್ತಾಯಗೊಂಡಿತ್ತು.

● ಶೆಣೈ



ವಿವಾದ ನಂಟು

ನಿರ್ಮಾಪಕ ಅಶ್ವಿನಿ ರಾಮಪ್ರಸಾದ್‌ಗೂ, ವಿವಾದಕ್ಕೂ ಎಲ್ಲಿಲ್ಲದ ನಂಟು. ಇವರ ನಿರ್ಮಾಣದ ಮೊದಲ ಚಿತ್ರ ‘ಜೋಗಿ’ ಬಿಡುಗಡೆ ಸಂದರ್ಭದಲ್ಲಿ ನಾಯಕನಟ ಶಿವರಾಜ್‌ಕುಮಾರ್ ಕಟೌಟ್‌ಗಿಂತ ನಿರ್ದೇಶಕ ಪ್ರೇಮ್‌ನ ಎತ್ತರವಾದ ಕಟೌಟ್‌ಅನ್ನು ಥಿಯೇಟರ್ ಮುಂದೆ ನಿಲ್ಲಿಸಿ ಶಿವಣ್ಣನ ಅಭಿಮಾನಿಗಳ ಆಕ್ರೋಶಕ್ಕೆ ತುತ್ತಾಗಿದ್ದರು.

ಎರಡನೆ ಚಿತ್ರ ‘ಪ್ರೀತಿ ಯಾಕೆ ಭೂಮಿ ಮೇಲಿದೆ’ ಬಿಡುಗಡೆಯಾದಾಗಲೂ ಚಿತ್ರದ ಒಂದು ಹಾಡಿನ (ಸುಳ್ಳೇ ಸುಳ್ಳು...) ಬಗ್ಗೆ ದೊಡ್ಡ ವಿವಾದವೇ ಎದ್ದಿತ್ತು. ಆಗ ರಾಮಪ್ರಸಾದ್ “ಈ ವಿವಾದದಿಂದಾಗಿಯೇ ಚಿತ್ರ ಬಾಕ್ಸಾಫೀಸ್‌ನಲ್ಲಿ ಗೆಲ್ಲುತ್ತದೆ” ಎಂದು ಭಾವಿಸಿದ್ದರು. ಆದರೆ ಅದು ಸುಳ್ಳಾಯಿತು. ಇದೀಗ ರಮ್ಯಾ ಮತ್ತು ಪತ್ರಕರ್ತರ ನಡುವಿನ ಒಂದು ಸಣ್ಣ ಮಾತಿನ ಚಕಮಕಿಯ ಬಗ್ಗೆ ರಾಮಪ್ರಸಾದ್‌ಗೆ ಬೇಸರವಾಗುವ ಬದಲು ಸಂತೋಷವಾಗಿದೆಯಂತೆ. ಈ ಜಗಳದಿಂದಾಗಿ ತಮ್ಮ ಚಿತ್ರಕ್ಕೆ ಸುಮಾರು ಇಪ್ಪತ್ತೈದು ಲಕ್ಷದಷ್ಟು ಪ್ರಚಾರ ಬಿಟ್ಟಿಯಾಗಿ ಸಿಕ್ಕಿದೆ ಎಂದು ತೇಲಾಡುತ್ತಿರುವ ರಾಮಪ್ರಸಾದ್ ಮೊನ್ನೆ ರಮ್ಯಾಳಿಗೆ ಫೋನ್ ಮಾಡಿ ಥ್ಯಾಂಕ್ಸ್ ಹೇಳಿದ್ದಾರೆ. ನೇರ ನಡೆ-ನುಡಿಗೆ ಹೆಸರಾದ ರಮ್ಯಾ ನಿರ್ಮಾಪಕ ರಾಮಪ್ರಸಾದರ ಈ ವರ್ತನೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾಳೆ.

ವಾಸ್ತವವಾಗಿ ಇಡೀ ಘಟನೆಗೆ ಮೂಲ ಕಾರಣ ರಮ್ಯಾ ಅಲ್ಲ; ಈ ನಿರ್ಮಾಪಕ ರಾಮಪ್ರಸಾದ್. ಆತ ಎರಡು ಬಣಗಳ ನಡುವಿನ ಭಿನ್ನಾಭಿಪ್ರಾಯವನ್ನು ಶಮನಗೊಳಿಸಬೇಕಿತ್ತು. ಆದರ ಬದಲಿಗೆ ಇಂತಹ ವಿವಾದ ಎಂಜಾಯ್ ಮಾಡುವ ಇವರ ಬಗ್ಗೆ ಏನು ಹೇಳುವುದು?

“ರಮ್ಯಾ ಮಾಡಿದ್ದು ಸರೀನಾ?”

ಹೀಗಂತ ಈಗ ಒಂದು ಚರ್ಚೆ ಗಾಂಧಿನಗರದಲ್ಲಿ ಆರಂಭವಾಗಿದೆ.

ಯಾವುದೇ ಸಮಾರಂಭಕ್ಕೆ ತಡವಾಗಿ ಬಂದರೆ, ಅದರಲ್ಲೂ ಒಂದು ಗಂಟೆಯಷ್ಟು ತಡವಾಗಿ ಬಂದರೆ, ‘ತಡವಾಗಿದ್ದಕ್ಕೆ ಕ್ಷಮಿಸಿ’ ಎಂದು ಹೇಳುವುದು ಸೌಜನ್ಯ. ಆ ಸೌಜನ್ಯದ ಮಾತು ಮತ್ತು ಮಿತಿಯನ್ನು ಮೀರಿ ಅಂದು ರಮ್ಯಾ ಯಾಕೆ ಮಾತನಾಡಿದಳೋ ಗೊತ್ತಿಲ್ಲ.



ರಮ್ಯಾ ಮತ್ತು ಚಾನೆಲ್‌ಗಳು

ಇತ್ತೀಚೆಗೆ ರಮ್ಯಾ ಟಿವಿ ಚಾನೆಲ್‌ಗಳಿಗೆ ಸಂದರ್ಶನ ನೀಡುವುದು ಬಹಳ ಅಪರೂಪವಾಗಿದೆ. ಕನ್ನಡ ಚಿತ್ರರಂಗದ ನಂ.1 ನಾಯಕಿ ರಮ್ಯಾಳ ಸಂದರ್ಶನಕ್ಕಾಗಿ ಚಾನೆಲ್‌ನವರು ಪ್ರಯತ್ನಿಸಿ ಸುಸ್ತಾಗಿದ್ದು ಉಂಟು. ಹೀಗಾಗಿ ರಮ್ಯಾಳ ಬಗ್ಗೆ ಚಾನೆಲ್‌ನವರಿಗೆ ಒಂದಿಷ್ಟು ಅಸಮಾಧಾನವಿದೆ.

ಮೊನ್ನೆ ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರು ಮತ್ತು ರಮ್ಯಾಳ ನಡುವೆ ಮಾತಿನ ಚಕಮಕಿ ನಡೆದಾಗ ಚಾನೆಲ್‌ಗಳು ಅದನ್ನು ಸಂಪೂರ್ಣವಾಗಿ ಚಿತ್ರೀಕರಿಸಿದ್ದವು. ಅಷ್ಟೇ ಅಲ್ಲ ಅದೇ ದಿನ ರಾತ್ರಿ ಆ ಕಾರ್ಯಕ್ರಮವನ್ನು ಬಿತ್ತರಿಸಿದವು. ರಮ್ಯಾಳಿಗೆ ಕಸಿವಿಸಿ ಮಾಡುವುದು ಅವರ ಉದ್ದೇಶವಾಗಿತ್ತು. ಹೀಗಾಗಿ ಒಂದು ಚಿಕ್ಕ ಘಟನೆ ರಾಜ್ಯ ಸುದ್ದಿ ಎಂಬಂತೆ ದೊಡ್ಡದಾಗಿ ಪ್ರಸಾರವಾಯಿತು. ಕರ್ನಾಟಕದಾದ್ಯಂತ ಜನ ರಮ್ಯಾ ಮತ್ತು ಪತ್ರಕರ್ತರ ನಡುವಿನ ಕೋಳಿಜಗಳದ ಬಗ್ಗೆ ಚರ್ಚೆ ಮಾಡುವಂತಾಯಿತು.

ಇದೇ ಸಂದರ್ಭಕ್ಕಾಗಿ ಹೊಂಚುಹಾಕುತ್ತಿದ್ದ ಮತ್ತೊಂದು ಚಾನೆಲ್ ಆ ಕೂಡಲೇ ಈ ಘಟನೆಯ ಬಗ್ಗೆ ರಮ್ಯಾಳೊಂದಿಗೆ ವಿಶೇಷ ಸಂದರ್ಶನ ಕಾರ್ಯಕ್ರಮವನ್ನು ಏರ್ಪಡಿಸಿ ಆಕೆಯನ್ನು ತಮ್ಮ ಬುಟ್ಟಿಗೆ ಹಾಕಿಕೊಂಡಿತು. ಆ ಸಂದರ್ಶನದಲ್ಲಿ ರಮ್ಯಾ “ನಾನು ಗೌಡತಿ, ನಾನು ಮಾತನಾಡುವುದೇ ಹೀಗೆ. ನನ್ನ ನಕ್ಷತ್ರ ಆ ರೀತಿ ಇದೆ. ನಾನು ತಪ್ಪು ಮಾಡಿಲ್ಲ, ಆದುದರಿಂದ ಕ್ಷಮೆ ಕೇಳುವುದಿಲ್ಲ” ಎಂದು ತನ್ನ ನಿಲುವನ್ನು ಸಮರ್ಥಿಸಿಕೊಂಡಳು.

ಹೀಗೆ ರಮ್ಯಾಳ ಪರ ಕೆಲವು ಚಾನೆಲ್‌ಗಳು; ವಿರುದ್ಧ ಇನ್ನು ಕೆಲವು ಚಾನೆಲ್‌ಗಳು ಕಾರ್ಯ ನಿರ್ವಹಿಸುತ್ತಿವೆ.

ಒಟ್ಟಾರೆಯಾಗಿ ‘ಜೊತೆಗಾರ’ ಚಿತ್ರತಂಡದ ಈ ಪುಟ್ಟ ಮನರಂಜನೆ ನೋಡಿದ ಜನತೆ ಕಾಸು ಕೊಟ್ಟು ಸಿನಿಮಾ ನೋಡುವ ಅಗತ್ಯವಾದರೂ ಏನಿದೆ ಎಂಬ ತೀರ್ಮಾನಕ್ಕೆ ಬಂದ ಏನು ಗತಿ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44